ಈ ಯೋಜನೆಯ ನಿರ್ವಹಣೆಗಾಗಿ ಜಿಲ್ಲಾ ಮಟ್ಟದಲ್ಲಿ ಸ್ವಚ್ಚ ಭಾರತ ಮಿಷನ್ ಇಲಾಖೆ ಕೆಲಸನಿರ್ವಹಿಸುತ್ತಿದೆ. ಮಾನ್ಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳ ನಿರ್ದೇಶನದಲ್ಲಿ ಯೋಜನೆಯ ಜಿಲ್ಲಾ ನೋಡಲ್ ಅಧಿಕಾರಿಗಳು ಹಾಗೂ ಸ್ವಚ್ಚ ಭಾರತ ಮಿಷನ್ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಜಿಲ್ಲೆಯನ್ನು ಬಯಲು ಬಹಿರ್ದೆಸೆ ಮುಕ್ತವನ್ನಾಗಿಸಲು ಅವಿರತವಾಗಿ ಶ್ರಮಿಸುತ್ತಿದ್ದಾರೆ. ತಾಲ್ಲೂಕು ಮಟ್ಟದಲ್ಲಿ ಈ ಯೋಜನೆ ಅನುಷ್ಠಾನ ಜವಾಬ್ದಾರಿ ಕಾರ್ಯನಿರ್ವಾಹಕ ಅಧಿಕಾರಿಗಳದ್ದಾಗಿರುತ್ತದೆ. ತಾಲ್ಲೂಕು ಪಂಚಾಯಿತಿ ಸಹಾಯಕ ನಿರ್ದೇಶಕರು (ಗ್ರಾ.ಉ)ರವರನ್ನು ಈ ಯೋಜನೆಯ "ತಾಲ್ಲೂಕು ನೋಡಲ್ ಅಧಿಕಾರಿ" ಗಳನ್ನಾಗಿ ನೇಮಿಸಲಾಗಿದೆ. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು (PDO) ಈ ಯೋಜನೆಯ ಅನುಷ್ಠಾನಧಿಕಾರಿಗಳಾಗಿರುತ್ತಾರೆ. ಗ್ರಾಮ ಪಂಚಾಯಿತಿಯ ಚುನಾಯಿತ ಪ್ರತಿನಿಧಿಗಳು, ಸ್ಥಳೀಯ ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಶಾಲಾ ಶಿಕ್ಷಕ–ಶಿಕ್ಷಕಿಯರ ಸಹಯೋಗದೊಂದಿಗೆ ಯಶಸ್ವಿಯಾಗಿ ಈ ಯೋಜನೆ ಅನುಷ್ಠಾನಗೊಳಿಸುವ ಹೊಣೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳದ್ದಾಗಿರುತ್ತದೆ.

ಪ್ರಸ್ತುತ ಜಾರಿಯಲ್ಲಿರುವ ಸ್ವಚ್ಚ ಭಾರತಮಿಷನ್ ಯೋಜನೆಯಡಿ ಅನುಷ್ಠಾನಗೊಳ್ಳುತ್ತರುವ ವಿವಿಧ ಘಟಕಾಂಶಗಳ ವಿವರಗಳು ಕಂಡಂತೆ ಇರುತ್ತದೆ.

1. ಮಾಹಿತಿ ಶಿಕ್ಷಣ ಸಂವಹನ ಚಟುವಟಿಕೆ : (IEC) :–

ಗ್ರಾಮಾಂತರ ಪ್ರದೇಶಗಳಲ್ಲಿ ಅರಿವು ಮೂಡಿಸಲು ವಿವಿಧ ಮಾಹಿತಿ ಶಿಕ್ಷಣ ಮತ್ತು ಸಂವಹನ ಚಟುವಟಿಕೆಗಳನ್ನು ಹಮ್ಮಿಕೊಳ್ಳಾಲಾಗುತ್ತಿದೆ. ವೈಯಕ್ತಿಕ ಗೃಹಶೌಚಾಲಯ ನಿರ್ಮಾಣಕ್ಕೆ ಜನಸ್ಪಂದನೆ ಕಡಿಮೆ ಇರುವ ತಾಂಡಾಗಳು, ಪ.ಜಾ.ಕಾಲೋನಿಗಳು, ಹಳ್ಳಿಗಳಲ್ಲಿ ಬೀದಿನಾಟಕಗಳ ಮೂಲಕ ಕಾಲ್ಸೆಂಟರ್ಮೂಲಕ ನೈರ್ಮಲ್ಯದ ಬಗ್ಗೆ ಜನಜಾಗೃತಿ

ಮೂಡಿಸಲು ಕ್ರಮ ವಹಿಸಲಾಗುತ್ತಿದೆ. ಶೌಚಾಲಯ ರಹಿತ ಕುಟುಂಬದವರ ಮೊಬೈಲ್ ಸಂಖ್ಯೆಯನ್ನು ಸಂಬಂಧಿಸಿದ ಗ್ರಾಮ ಪಂಚಾಯಿತಿಯಿಂದಪಡೆದು ಜಿಲ್ಲಾಪಂಚಾಯಿತಿ ಸ್ವಚ್ಚ ಭಾರತ್ ಮಿಷನ್ ಶಾಖೆಯಿಂದ ಅವರನ್ನು ಮೊಬೈಲ್ ಮೂಲಕ ಸಂಪರ್ಕಿಸಿ ಶೌಚಾಲಯ ನಿರ್ಮಾಣಕ್ಕೆ ಪ್ರೇರೇಪಿಸಲಾಗುತ್ತಿದೆ. ಜಿಲ್ಲಾಮಟ್ಟ, ತಾಲ್ಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಗ್ರಾಮ ಪಂಚಾಯಿತಿಗಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರ ಮತ್ತು ಕಾರ್ಯದರ್ಶಿಯವರ ಮೊಬೈಲ್‌ಗಳಿಗೆ ಸ್ವಚ್ಚ ಭಾರತ ಮಿಷನ್

ಯೋಜನೆಯ ಸಂದೇಶವುಳ್ಳ ಕಾಲರ್ಟ್ಯೂನ್ಗಳನ್ನು ಅಳವಡಿಸಿ ಪ್ರಚಾರ ಮಾಡಲಾಗುತ್ತಿದೆ. ಈ ಕ್ರಮವನ್ನು ರಾಜ್ಯಾದ್ಯಂತ ಅಳವಡಿಸಿಕೊಳ್ಳುವ ಚಿಂತನೆಯನ್ನು ಇಲಾಖೆ ಮಾಡುತ್ತಿದೆ. ಸ್ವಚ್ಚ ಭಾರತ ಮಿಷನ್ ಯೋಜನೆಯ ಮಾಹಿತಿವುಳ್ಳ ಕರಪತ್ರಗಳನ್ನು ಹಳ್ಳಿಹಳ್ಳಿಗಳಲ್ಲಿ ವಿತರಿಸಿ ಶೌಚಾಲಯ ನಿರ್ಮಾಣಕ್ಕೆ ಪ್ರೇರೇಪಿಸಲಾಗುತ್ತಿದೆ. ಸ್ವಚ್ಚ ಭಾರತ ಮಿಷನ್ ಸಂದೇಶವುಳ್ಳ ಹಾಡುಗಳ ಸಿಡಿಗಳನ್ನು ಪ್ರತೀ ಗ್ರಾಮ ಪಂಚಾಯಿತಿಗೆ ನೀಡಿದ್ದು ಗ್ರಾಮ ಸಭೆಗಳಲ್ಲಿ ಬಳಸಲಾಗುತ್ತಿದೆ.

2. ವೈಯಕ್ತಿಕ ಗೃಹ ಶೌಚಾಲಯ (LOB) :–

ಗ್ರಾಮ ಪಂಚಾಯಿತಿಗಳಲ್ಲಿ ವೈಯಕ್ತಿಕಗೃಹ ಶೌಚಾಲಯ (lob) ನಿರ್ಮಾಣಕ್ಕಾಗಿ ಶೌಚಾಲಯ ರಹಿತ ಕುಟುಂಬದವರಿಂದ ಅರ್ಜಿಗಳನ್ನು ಪಡೆಯಲಾಗುತ್ತಿದೆ. ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಅರ್ಜಿದಾರರಿಗೆ ಶೌಚಾಲಯ ನಿರ್ಮಾಣಕ್ಕೆ ಕಾರ್ಯಾದೇಶವನ್ನು ಪಂಚತಂತ್ರತಂತ್ರಾಂಶದಲ್ಲಿ ಪಡೆದು ವಿತರಿಸಲಾಗುತ್ತಿದೆ. ಕಾರ್ಯಾ ದೇಶನೀಡಿದ 45 ದಿನಗಳೊಳಗೆ ಶೌಚಾಲಯ ನಿರ್ಮಿಸಿಕೊಳ್ಳಲು ಸೂಚನೆ ನೀಡಲಾಗುತ್ತಿದೆ. ಶೌಚಾಲಯ ನಿರ್ಮಾಣಗೊಂಡನಂತರ ಶೌಚಾಲಯಗಳ Geotagged ಭಾವಚಿತ್ರಗಳನ್ನು ಪಡೆದು ಪಂಚತಂತ್ರಾಂಶದಲ್ಲಿ ದಾಖಲಿಸಲಾಗುತ್ತಿದೆ. ನಂತರ ಪಂಚತಂತ್ರದಲ್ಲಿ ಪಾವತಿ ಆದೇಶ ಪಡೆದು ಗ್ರಾಮಪಂಚಾಯಿತಿಗಳ ಅಧ್ಯಕ್ಷರುಗಳು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಡಿಜಿಟಲ್ಸಹಿ ನೀಡಲಾಗುತ್ತದೆ. ನಂತರ ಸ್ಟೇಟ್ಬ್ಯಾಂಕ್ಆಫ್ಮೈಸೂರು, ಬೆಂಗಳೂರು ವಿಧಾನ ಸೌಧ ಶಾಖೆಯಲ್ಲಿರುವ ಈ ಜಿಲ್ಲೆಯ e-FMS ಖಾತೆಯಿಂದ ನೇರವಾಗಿ ಫಲಾನುಭವಿಯ ಖಾತೆಗೆ ಅನುದಾನ ವರ್ಗಾಯಿಸಲಾಗುತ್ತದೆ.

3. ಸಮುದಾಯ ನೈರ್ಮಲ್ಯ ಸಮುಚ್ಚಯ :–

ವೈಯಕ್ತಿಕ ಗೃಹ ಶೌಚಾಲಯ ನಿರ್ಮಿಸಿಕೊಳ್ಳಲು ಜಾಗದ ಕೊರತೆ ಇರುವ ಕಡೆಗಳಲ್ಲಿ ಹೆಚ್ಚು ಜನಸೇರುವ ಸ್ಥಳಗಳಲ್ಲಿ ಸಮುದಾಯ ನೈರ್ಮಲ್ಯ ಸಮುಚ್ಚಯ ನಿರ್ಮಾಣಕ್ಕೆ ಈ ಯೋಜನೆಯಲ್ಲಿ ಅವಕಾಶವಿರುತ್ತದೆ. ಸಮುದಾಯ ನೈರ್ಮಲ್ಯ ಸಮುಚ್ಚಯ ಘಟಕ ವೆಚ್ಚ ಗರಿಷ್ಟ ರೂ 2 ಲಕ್ಷ ಆಗಿರುತ್ತದೆ. ಇದರಲ್ಲಿ ಕೇಂದ್ರದ ಪಾಲು ಶೇ60 ರಾಜ್ಯದ ಪಾಲು ಶೇ30 ಮತ್ತು ಗ್ರಾಮ ಪಂಚಾಯಿತಿ/ ಗ್ರಾಮಸ್ಥರ ಪಾಲು ಶೇ10 ಆಗಿರುತ್ತದೆ. ಸಮುದಾಯ ನೈರ್ಮಲ್ಯ ಸಮುಚ್ಚಯದಲ್ಲಿ ಅಗತ್ಯ ಸಂಖ್ಯೆಯ ಶೌಚಾಲಯಗಳು, ಸ್ನಾನದಮನೆ, ನೀರಿನತೊಟ್ಟಿ ಮತ್ತು ಬಟ್ಟೆತೊಳೆಯುವ ಕಟ್ಟೆಯ ಸೌಲಭ್ಯಗಳು ಇರಬೇಕಾಗುತ್ತದೆ. ಸಮುದಾಯ ನೈರ್ಮಲ್ಯ ಸಮುಚ್ಚಯ ನಿರ್ಮಾಣಕ್ಕೆ ಮೊದಲು ನಿರ್ವಹಣೆ ಬಗ್ಗೆ ಸೂಕ್ತ ಯೋಜನೆ ರೂಪಿಸಿಕೊಳ್ಳಬೇಕಾಗುತ್ತದೆ.

4. ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ (SLWM) :–

ಸ್ವಚ್ಛ ಭಾರತ ಮಿಷನ್ ಅಡಿ ಘನ ಮತ್ತು ದ್ರವತ್ಯಾಜ್ಯ ನಿರ್ವಹಣೆಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ರೂ 20 ಲಕ್ಷದವರೆಗೆ ಅನುದಾನ ನೀಡಲು ಅವಕಾಶ ಇರುತ್ತದೆ. ಗ್ರಾಮ ಪಂಚಾಯಿತಿಗಳು ತಾಲ್ಲೂಕು ಪಂಚಾಯಿತಿಗಳ

ಮೂಲಕ ಅಗತ್ಯ ದಾಖಲಾತಿಗಳೊಂದಿಗೆ ಪ್ರಸ್ತಾವನೆಯನ್ನು ಜಿಲ್ಲಾ ಪಂಚಾಯಿತಿಗೆ ಸಲ್ಲಿಸಬೇಕಾಗಿರುತ್ತದೆ. ಜಿಲ್ಲಾ ಪಂಚಾಯಿತಿಯಿಂದ ಅನುಮೋದನೆಗಳ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಕಳಿಸಲಾಗುತ್ತಿದೆ. ಸರ್ಕಾರದಿಂದ ಮಂಜೂರಾದ ಪ್ರಸ್ತಾವನೆಗಳಂತೆ ಗ್ರಾಮ ಪಂಚಾಯಿತಿಗಳು ಅನುಷ್ಠಾನ ಮಾಡಬೇಕಾಗಿರುತ್ತದೆ. ಘನ ಮತ್ತು ದ್ರವತ್ಯಾಜ್ಯ ನಿರ್ವಹಣೆ ಕ್ರಿಯಾ ಯೋಜನೆಯನ್ನು ತಯಾರಿಸುವಾಗ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿಯೋಜನೆಯನ್ನು ತಯಾರಿಸಬಹುದು. ತ್ಯಾಜ್ಯಸಂಸ್ಕರಣ ಘಟಕ ನಿರ್ಮಾಣಕ್ಕೆ ಸ್ವಚ್ಛ ಭಾರತ ಮಿಷನ್ಯೋಜನೆಯಡಿ ಅವಕಾಶ ಮಾಡಿಕೊಂಡು ಎರೆಹುಳು ತೊಟ್ಟಿ, ಸ್ವಚ್ಛತಾ ಕಾರ್ಮಿಕರ ಸಂಬಳ ಇತ್ಯಾದಿಗಳನ್ನು ಉದ್ಯೋಗ ಖಾತ್ರಿ ಯೋಜನೆಯಡಿ ಅವಕಾಶ ಮಾಡಿಕೊಳ್ಳಬಹುದು. ಕ್ರಿಯಾ ಯೋಜನೆಯಲ್ಲಿ ನಮೂದಿಸಿದ ಎಲ್ಲಾ ನಿರ್ಮಾಣಗಳಿಗೆ ಸಂಬಂಧಿಸಿದಂತೆ ಯೋಜನೆ ಮತ್ತು ಅಂದಾಜು ಪಟ್ಟಿಯನ್ನು ಪ್ರಸ್ತಾವನೆಯೊಂದಿಗೆ ಸಲ್ಲಿಸಬೇಕಾಗಿರುತ್ತದೆ. ಉತ್ತಮ ರೀತಿಯಲ್ಲಿ ಘನ ಮತ್ತು ದ್ರವತ್ಯಾಜ್ಯ ನಿರ್ವಹಣೆ ಮಾಡುತ್ತಿರುವ ದಕ್ಷಿಣ ಕನ್ನಡ ಜಿಲ್ಲೆಯ ಲಾಯಿಲಾ ಮತ್ತು ಹೊಸಂಗಡಿ ಗ್ರಾಮ ಪಂಚಾಯಿತಿಗಳಿಗೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬಾಶೆಟ್ಟಿಹಳ್ಳಿ ಮತ್ತು ಅಣ್ಣೇಶ್ವರ ಗ್ರಾಮ ಪಂಚಾಯಿತಿಗಳಿಗೆ ಹಾಗೂ ಉಡುಪಿ ಜಿಲ್ಲೆಗೆ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಅಧ್ಯಯನ ಪ್ರವಾಸಿ ಏರ್ಪಡಿಸಿದ್ದು, ಈ ಪ್ರವಾಸದಲ್ಲಿ SLWM ಅನುಷ್ಠಾನ ಸಂಬಂಧ ಅನೇಕ ಮಾಹಿತಿಗಳನ್ನು ಪಡೆಯಲಾಗಿದೆ. ದ್ರವ ತ್ಯಾಜ್ಯ ನಿರ್ವಹಣೆ ಬಗ್ಗೆ ಕೊಡಗು ಜಿಲ್ಲೆಯ ಗ್ರಾಮ ಪಂಚಾಯಿತಿಗಳಿಗೆ ಈ ಜಿಲ್ಲೆಯ ತಂಡ ಅಧ್ಗಯನ ಪ್ರವಾಸಿ ಕೈಗೊಂಡು ಈ ಜಿಲ್ಲೆಯ ಗ್ರಾಮಪಂಚಾಯಿತಿಲ್ಲೂ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ.

5. ಬಯಲು ಬಹಿರ್ದೆಸೆ ಮುಕ್ತ ಗ್ರಾಮಗಳು : (ODF) :–

ಸ್ವಚ್ಚ ಭಾರತ ಮಿಷನ್ ಯೋಜನೆಯಡಿ ಬಯಲು ಬಹಿರ್ದೆಸೆ ಮುಕ್ತ ಗ್ರಾಮಗಳನ್ನಾಗಿಸಲು ಆದ್ಯತೆ ನೀಡಿದ್ದು ನಿರ್ಮಲ ಗ್ರಾಮ ಪುರಸ್ಕಾರವನ್ನು ಕೈ ಬಿಡಲಾಗಿದೆ. ಮಾರ್ಚ್–2017 ರ ಅಂತ್ಯದವರೆಗೆ 61 ಗ್ರಾಮಗಳನ್ನು ಬಯಲು ಬಹಿರ್ದೆಸೆ ಮುಕ್ತಗೊಳಿಸಲಾಗಿದೆ. ಉಳಿದ ಎಲ್ಲಾ ಗ್ರಾಮಗಳನ್ನು 2017–18 ನೇ ಸಾಲಿನಲ್ಲಿ ಬಯಲು ಬಹಿರ್ದೆಸೆ ಎಂದು ಘೋಷಿಸಲಾಗಿದೆ..

ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಪರವಾಗಿ
ಜಿ. ಪಂ. ಚಿಕ್ಕಮಗಳೂರು.

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು

1–4–1987 ರಿಂದಜಿಲ್ಲಾ ಪರಿಷತ್ ಅಸ್ತಿತ್ವಕ್ಕೆ ಬಂದ ನಂತರ ದಿನಾಂಕ : 3–6–1987 ರಿಂದಜಿಲ್ಲಾ ಪರಿಷತ್ಇಂಜಿನಿಯರಿಂಗ್ ವಿಭಾಗ ಕಛೇರಿಯು ಪ್ರಾರಂಭಿಸಲ್ಪಟ್ಟಿತು. (ಹಿಂದಿನ ಸಣ್ಣ ನೀರಾವರಿ ವಿಭಾಗ ಕಛೇರಿಯು ಜಿಲ್ಲಾ ಪಂಚಾಯಿತಿ ಇಂಜಿನಿಯರಿಂಗ್ ವಿಭಾಗಕಛೇರಿಯಾಗಿ ಪರಿವರ್ತನೆಗೊಂಡು ಕಾರ್ಯಾರಂಭ ಮಾಡಿತು). ಈ ಕಛೇರಿ ವ್ಯಾಪ್ತಿಗೆ ಬರುವರಸ್ತೆ ಮತ್ತು ಸೇತುವೆ ಕಾಮಗಾರಿಗಳು, ಕುಡಿಯುವ ನೀರು ಸರಬರಾಜು ಯೋಜನೆಗಳು, ಸಣ್ಣ ನೀರಾವರಿ ಕಾಮಗಾರಿಗಳು ಮತ್ತುಜಿಲ್ಲಾ ಪಂಚಾಯಿತಿ ವ್ಯಾಪ್ತಿಯಕಟ್ಟಡ ಕಾಮಗಾರಿಗಳನ್ನು ದಿನಾಂಕ:04.03.2014ರ ತನಕ ಕೆಲಸ ನಿರ್ವಹಿಸಲಾಗುತ್ತಿತ್ತು. ಆದರೆ ಸರ್ಕಾರಿಆದೇಶ ಸಂ:ಗ್ರಾಅಪ:56:ಗ್ರಾನೀಸ(2):2013 ದಿನಾಂಕ:04.03.2014 ರಲ್ಲಿ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಯನ್ನು ಪ್ರತ್ಯೇಕಿಸಿ ಗ್ರಾಮೀಣಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯನ್ನು ಸೃಜಿಸಲಾಗಿರುತ್ತದೆ. ದಿನಾಂಕ:04.03.2014 ರ ನಂತರ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಿಂದ ರಸ್ತೆ ಮತ್ತು ಸೇತುವೆ ಕಾಮಗಾರಿಗಳು, ಕುಡಿಯುವ ನೀರು ಸರಬರಾಜು ಯೋಜನೆಗಳು, ಸಣ್ಣ ನೀರಾವರಿ ಕಾಮಗಾರಿಗಳು ಮತ್ತುಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಕಟ್ಟಡ ಕಾಮಗಾರಿಗಳನ್ನು ಮಾತ್ರ ನಿರ್ವಹಿಸಲಾಗುತ್ತಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿಎಂಟು ತಾಲ್ಲೂಕುಗಳಾಗಿ ವಿಂಗಡಿಸಲಾಗಿದೆ. ಅದರಲ್ಲಿ ಪಶ್ಚಿಮ ಘಟ್ಟ ಸರಣಿಯಲ್ಲಿ ಬರುವಕೊಪ್ಪ, ಮೂಡಿಗೆರೆ, ನ.ರಾ.ಪುರ, ಶೃಂಗೇರಿ ತಾಲ್ಲೂಕುಗಳು ಮತ್ತು ಚಿಕ್ಕಮಗಳೂರು ತಾಲ್ಲೂಕಿನ ಅರ್ಧ ಭಾಗವು ಪೂರ್ಣ ಮಲೆನಾಡಾಗಿರುತ್ತದೆ. ಹಾಗೂ ಕಡೂರು, ತರೀಕೆರೆ ಮತ್ತು ಚಿಕ್ಕಮಗಳೂರು ತಾಲ್ಲೂಕಿನಅರ್ಧಭಾಗವು ಬಯಲುಸೀಮೆಯಾಗಿರುತ್ತದೆ. ಮಲೆನಾಡು ಪ್ರದೇಶಕ್ಕೆ ಸಂಬಂಧಪಟ್ಟಂತೆ ಪಶ್ಚಿಮ ಘಟ್ಟ ಅಭಿವೃದ್ಧಿಯೋಜನೆ, ಮಲೆನಾಡು ಪ್ರದೇಶಾಭಿವೃದ್ಧಿ ಕ್ರಿಯಾ ಯೋಜನೆ ಕಾಮಗಾರಿಗಳ ಜೊತೆಗೆ ಬರಪರಿಹಾರ ಕಾಮಗಾರಿಗಳು ಲೋಕಸಭಾ ಸದಸ್ಯರ ಅನುದಾನ, ಶಾಸಕರ ನಿಧಿ ಹಾಗೂ ನೆರೆಹಾವಳಿ ಇತ್ಯಾದಿ ಕಾಮಗಾರಿಗಳನ್ನು ಒಳಗೊಂಡಂತೆ ಜಿಲ್ಲೆಯಾದ್ಯಂತ ಕಾಮಗಾರಿಗಳನ್ನು ಸಹಾ ಅನುಷ್ಠಾನಗೊಳಿಸಲಾಗುತ್ತಿದೆ.

ಈ ಮೇಲ್ಕಂಡ ಯೋಜನೆಗಳು ಜಿಲ್ಲಾ ಪಂಚಾಯಿತಿ ಕಾರ್ಯಕ್ರಮಗಳಾಗಿದ್ದು, ಇಂಜಿನಿಯರಿಂಗ್ ವಿಭಾಗ ವತಿಯಂದಲೇ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಕಾರ್ಯಪಾಲಕ ಇಂಜಿನಿಯರ್
ಪಂಚಾಯಿತ್ ರಾಜ್ ಇಂಜಿನಿಯರಿಂಗ್ ವಿಭಾಗ
ಚಿಕ್ಕಮಗಳೂರು

ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು

2018–19 ನೇ ಸಾಲಿನ ಮಾರ್ಚ್–2019 ರ ಮಾಹೆಯ ಅಂತ್ಯದವರೆಗಿನ ಅನುದಾನ ಬಿಡುಗಡೆ ಮತ್ತು ವೆಚ್ಚ ತೋರಿಸುವ ಪಟ್ಟಿ

(ರೂ. ಲಕ್ಷಗಳಲ್ಲಿ)

ಕ್ರ. ಸಂ	ಕಾರ್ಯಕ್ರಮಗಳು	ಲೆಕ್ಕ ಶೀರ್ಷಿಕೆ	2018–19 ನೇ ಸಾಲಿಗೆ ಸರ್ಕಾರದಿಂದ ಹಂಚಿಕೆಯಾಗಿರುವ ಅನುದಾನ	2018–19 ನೇ ಸಾಲಿಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನ	ಒಟ್ಟು ವೆಚ್ಚ
1	2	3	4	5	6
1	ನಿರ್ವಹಣೆ ಮತ್ತು ದುರಸ್ತಿ (ಯೋಜನೇತರ)	2059–00–101–0–28–200	69.84	69.83	60.98
2	ಹೊಸ ಸರಬರಾಜು	2059–00–101–0–29–226	6.87	6.87	6.87
3	ಸೇರ್ಪಡೆ ಮತ್ತು ಮಾರ್ಪಾಡು	2202–00–102–0–34–140	75.00	75.00	74.74
4	ಸರ್ಕಾರಿ ಪದವಿ ಪೂರ್ವ ಕಾಲೇಜು	2202–01–053–0–02–059	20.00	20.00	12.60
5	ಸರ್ಕಾರಿ ಪದವಿ ಪೂರ್ವ ಕಾಲೇಜು (ಎಸ್.ಸಿ.ಪಿ.)	2202–01–053–0–02–422	15.00	15.00	4.97
6	ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ	2205–00–104–0–28–140	34.50	34.50	33.76
7	ಆರೋಗ್ಯ ಇಲಾಖೆ ಕಟ್ಟಡಗಳ ದುರಸ್ತಿ ಮತ್ತು ನಿರ್ಮಾಣ	2210–00–101–0–36–140	90.00	90.00	83.77
8	ಆಯುಷ್ ಇಲಾಖೆ ಕಟ್ಟಡಗಳು	2210–00–105–0–38–140	17.50	17.50	13.95
9	ಐ.ಟಿ.ಡಿ.ಪಿ.	2225–00–102–0–43–423	4.50	4.50	3.74
10	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕಟ್ಟಡಗಳು	2225–00–103–0–40–140	21.51	21.51	21.39
11	ಜಿಲ್ಲಾ ಪಂಚಾಯಿತಿ ಕಛೇರಿ ಕಟ್ಟಡ ನಿರ್ಮಾಣದ ಅನುದಾನ	2515–00–101–0–29–140	60.00	59.99	43.64
12	ಜಿಲ್ಲಾ ಪಂಚಾಯಿತಿ ಅಭಿವೃದ್ಧಿ ಅನುದಾನ (ಶಾಸನಬದ್ಧ ಹೆಚ್ಚುವರಿ)	2515–00–101–0–31–090	400.00	400.00	387.92
13	ಜಿಲ್ಲಾ ಪಂಚಾಯಿತಿ ಅಭಿವೃದ್ಧಿ ಅನುದಾನ	2515–00–101–0–0–31–090	10.00	9.99	9.99
14	ವಾರ್ಷಿಕ ನಿರ್ವಹಣೆ ಮತ್ತು ದುರಸ್ತಿಗಳು	2702–00–101–0–26–200	108.77	108.76	102.25
15	ಸಮೀಕ್ಷೆ	2702–00–101–0–27–090	6.87	6.86	0.60
16	ಹೊಸ ಸರಬರಾಜು	2702–00–101–0–28–226	10.30	10.30	7.06
17	ಸಣ್ಣ ನೀರಾವರಿ ಸಮೀಕ್ಷಾ ಕಾರ್ಯಗಳು	2702–00–101–0–29–090	4.58	4.58	0.48
18	ಮುಖ್ಯ ಮಂತ್ರಿ ಗ್ರಾಮೀಣ ಯೋಜನೆ (ಟಾಸ್ಕ್‌ಫೋರ್ಸ್ ಲಂಪ್‌ಸಮ್)	3054–00–101–0–28–200	30.00	30.00	25.00
19	ಅನುದಾನ ನಿರ್ವಹಣೆ ಯೋಜನೇತರ	3054–00–101–0–28–200	382.08	100.00	100.00
20	ಮುಖ್ಯ ಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ	3054–00–101–0–29–172	570.00	569.99	523.74

1	2	3	4	5	6
21	ಮುಖ್ಯ ಮಂತ್ರಿ ಗ್ರಾಮೀಣ ಯೋಜನೆ	3054–00–101–0–29–172	1000.00	500.00	500.00
22	ಸರ್ಕಾರಿ ಪದವಿ ಪೂರ್ವ ಕಾಲೇಜು ಕಟ್ಟಡಗಳು–ರಾಜ್ಯ ಬಂಡವಾಳ ವೆಚ್ಚ	4202–01–202–1–05–386	155.00	155.00	0.00
23	ಸರ್ಕಾರಿ ಪದವಿ ಪೂರ್ವ ಕಾಲೇಜು ಕಟ್ಟಡಗಳು ಕಾಲೇಜು ಕಟ್ಟಡಗಳು	4202–01–202–1–05–436	106.24	106.24	62.71
24	ಸರ್ಕಾರಿ ಪದವಿ ಪೂರ್ವ ಕಾಲೇಜು ಕಟ್ಟಡಗಳು ಪರಿಶಿಷ್ಟ ಜಾತಿ ಉಪಯೋಜನೆ (ಎಸ್.ಸಿ.ಪಿ.)	4202–01–600–0–04–422	125.30	125.30	64.47
25	ಗ್ರಾಮ ವಿಕಾಸ ಯೋಜನೆ	4215–02–800–0–02–132	71.325	71.325	31.58
26	ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ	4250–00–203–0–07–436	365.00	183.00	0.00
27	ನಬಾರ್ಡ್ ಆರ್.ಐ.ಡಿ.ಎಫ್.–19 "56–ರೈತ ಸಂಪರ್ಕ ಕೇಂದ್ರದ ಕಟ್ಟಡ"	4401–00–001–1–01	60.00	60.00	37.31
28	ಕೆರೆಗಳ ದುರಸ್ತಿ ಮತ್ತು ಪುನಶ್ಚೇತನ–ನಬಾರ್ಡ್	4702–00–101–1–14–436	142.71	118.80	118.80
29	ಗ್ರಾಮೀಣ ಪ್ರದೇಶಗಳಲ್ಲಿ ನಬಾರ್ಡ್ ರಸ್ತೆ ಕಾಮಗಾರಿಗಳು, ಸಾಮಾನ್ಯ	5054–03–337–0–74–436	61.27	25.00	25.00
30	ಗ್ರಾಮೀಣ ಪ್ರದೇಶಗಳಲ್ಲಿ ನಬಾರ್ಡ್ ರಸ್ತೆ ಕಾಮಗಾರಿಗಳು ಎಸ್.ಡಿ.ಪಿ.	5054–03–337–0–74–134		75.00	75.00
31	ರಸ್ತೆ ಸುರಕ್ಷತಾ ಯೋಜನೆ	5054–04–337–0–07–172	25.00	25.00	25.00
	ಒಟ್ಟು		4049.17	3099.85	2457.32

ಕಾರ್ಯಪಾಲಕ ಇಂಜಿನಿಯರ್,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಚಿಕ್ಕಮಗಳೂರು

ಗ್ರಾಮೀಣ ಕುಡಿಯುವ ನೀರು& ನೈರ್ಮಲ್ಯ ವಿಭಾಗ –2018–19

ಕರ್ನಾಟಕ ಸರ್ಕಾರದಆದೇಶ ಸಂಖ್ಯೆ : ಗ್ರಾಅಪ: 56: ಗ್ರಾನೀಸ (2)2013,ದಿನಾಂಕ : 04.3.2014 ರಲ್ಲಿರಾಜ್ಯದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಸಚಿವಾಲಯದಲ್ಲಿನ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ, ರಾಜ್ಯ ಮಟ್ಟದಲ್ಲಿ ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆ (ಕೆಆರ್‌ಡಬ್ಲ್ಯೂಎಸ್‌ಎಸ್‌ಎ) ಹಾಗೂ ಮುಖ್ಯಇಂಜಿನಿಯರ್, ಕೆ.ಆರ್. ಡಬ್ಲ್ಯೂಎಸ್‌ಎಸ್‌ಎ ಇದರ ವ್ಯಾಪ್ತಿಯಲ್ಲಿ 4–ವಲಯಗಳು 30 ಗ್ರಾಮೀಣ ನೀರು ಮತ್ತು ನೈರ್ಮಲ್ಯ ಇಲಾಖೆಯ ವಿಭಾಗ ಕಛೇರಿಗಳು ಹಾಗೂ 176 ಉಪವಿಭಾಗಗಳನ್ನು ರಚಿಸಿ ಕರ್ತವ್ಯ ನಿರ್ವಹಿಸಲು ಆದೇಶ ನೀಡಲಾಯಿತು.

ಗ್ರಾಮೀಣಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಸೃಜನೆ ಪ್ರಮುಖ ಉದ್ದೇಶ– ರಾಜ್ಯ ಮತ್ತು ಕೇಂದ್ರ ವಲಯಗಳಡಿ ಹಾಗೂ ವಿದೇಶಿ ನೆರವಿನ ಯೋಜನೆಯಡಿ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆಗಳ ಕಾಲಮಿತಿ ಅನುಷ್ಠಾನ ಮತ್ತು ಸಮರ್ಪಕ ನಿರ್ವಹಣೆ ಸರ್ಕಾರದ ಪ್ರಥಮ ಆದ್ಯತೆಯಾಗಿದೆ. ಈಗಾಗಲೇ ಅಸ್ತಿತ್ವದಲ್ಲಿರುವ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯ, ಕುಡಿಯುವ ನೀರು ಮತ್ತು ನೈರ್ಮಲ್ಯ ಹಾಗೂ ರಸ್ತೆ ಮತ್ತು ಸೇತುವೆ, ಕೆರೆಗಳು ಮತ್ತು ಕಟ್ಟಡಗಳು ಮತ್ತು ಮಹಾತ್ಮಗಾಂಧಿರಾಷ್ಟ್ರೀಯಗ್ರಾಮೀಣ ಉದ್ಯೋಗಖಾತರಿ ಯೋಜನೆ ಹಾಗೂ ಮತ್ತಿತರ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿ ಹೊಂದಿದ್ದು ಹಾಲಿ ಇರುವತಾಂತ್ರಿಕ ಮತ್ತು ಆಡಳಿತಾತ್ಮಕ ಸಿಬ್ಬಂಧಿ ಈ ಎಲ್ಲಾ ಕಾಮಗಾರಿಗಳನ್ನು ಕಾಲಮಿತಿಯೊಂದಿಗೆ ಉತ್ತಮ ಗುಣಮಟ್ಟದಲ್ಲಿ ಅನುಷ್ಠಾನಗೊಳಿಸುವ ಕ್ಲಿಷ್ಟವಾಗಿದೆ. ಆದುದರಿಂದ ಇಲಾಖೆಯನ್ನು ವಿಭಜಿಸಿ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವ್ಯವಸ್ಥೆಯನ್ನು ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಿಂದ ಬೇರ್ಪಡಿಸಿ ನೀರು ಮತ್ತು ನೈರ್ಮಲಯ ಇಲಾಖೆಗೆ ವಹಿಸಲಾಗಿದೆ. ಅತ್ಯಂತ ಪ್ರಾಮುಖ್ಯವಾದ ಕುಡಿಯುವ ನೀರು ಮತ್ತು ನೈರ್ಮಲ್ಯ ಘಟಕವನ್ನು ಸದೃಡಗೊಳಿಸಲು ನಗರ ಪ್ರದೇಶಗಳಲ್ಲಿ ಇರುವಂತೆಯೇ ರಾಜ್ಯದಗ್ರಾಮೀಣ ಜನವಸತಿಗಳಿಗೆ ಅಂದರೆ 59753 ಜನವಸತಿಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಸುರಕ್ಷಿತ ಕುಡಿಯುವ ನೀರಿನ ವ್ಯವಸ್ಥೆ ಮತ್ತು ನೀರಿನ ಗುಣಮಟ್ಟದ ಸಮಸ್ಯೆ ಇರುವ ಜನವಸತಿಗಳಿಗೆ ಭೂಮಿಯ ಮೇಲ್ಮೈ ಜಲಮೂಲ ಆಧಾರಿತ ಶಾಶ್ವತ ಯೋಜನೆಗಳನ್ನು ಕಾರ್ಯಾಚರಣೆ ಮತ್ತು ನಿರ್ವಹಣೆ (ಓ ಅಂಡ್ ಎಂ) ವ್ಯವಸ್ಥೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವುದು ಈ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗದ ಮುಖ್ಯ ಕರ್ತವ್ಯವಾಗಿರುತ್ತದೆ.

ಸರ್ಕಾರದ ಆದೇಶದ ಸಂಖ್ಯೆ : ಗ್ರಾಅಪ:210 ಜಿಪಅ: 2014 : ಬೆಂಗಳೂರು ದಿನಾಂಕ : 03.6.2014ರಂತೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಟ್ಟು ಏಳು ತಾಲ್ಲೂಕು ಕೇಂದ್ರಗಳಲ್ಲಿ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲಯ ಉಪವಿಭಾಗಗಳನ್ನು ಸೃಜಿಸಲಾಗಿದೆ. ಹಾಗೂ ಕೇಂದ್ರ ಸ್ಥಾನವನ್ನು ನಿಗದಿಪಡಿಸಲಾಗಿದೆ. ಸರ್ಕಾರದ ಆದೇಶದಂತೆ ದಿನಾಂಕ: 27.8.2014 ರಂದು ಚಿಕ್ಕಮಗಳೂರಿನಲ್ಲಿ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ ಕಛೇರಿಯನ್ನು ಅಧಿಕೃತವಾಗಿ ಪ್ರಾರಂಭಿಸಲಾಯಿತು. ಇದುಜಿಲ್ಲಾ ಮಟ್ಟದ ಕಛೇರಿಯಾಗಿದ್ದು, ಕಾರ್ಯಪಾಲಕ ಇಂಜಿನಿಯರ್‌ರವರು ವಿಭಾಗ ಕಛೇರಿಯ ಮುಖ್ಯ ಸ್ಥರಾಗಿರುತ್ತಾರೆ.

ವಿಭಾಗ ಕಛೇರಿ ವ್ಯಾಪ್ತಿಯಲ್ಲಿ ಒಟ್ಟು 101 ಹುದ್ದೆಗಳಿದ್ದು, ಪ್ರಸ್ತುತ 27 ಹುದ್ದೆಗಳು ಭರ್ತಿಇದ್ದು. 74 ಹುದ್ದೆಗಳು ಖಾಲಿ ಇರುತ್ತವೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ 2011ರ ಜನಗಣತಿ ಆಧಾರದಂತೆ 1137961 ಜನಸಂಖ್ಯೆ ಇರುತ್ತದೆ. ಅದರಲ್ಲಿ 253651 ಪರಿಶಿಷ್ಟ ಜಾತಿ ಮತ್ತು 44970 ಪರಿಶಿಷ್ಟ ಪಂಗಡದವರು ಹಾಗೂ 839340 ಇತರೆ ವರ್ಗದವರು ಇರುತ್ತಾರೆ. ಜಿಲ್ಲೆಯಲ್ಲಿ ಒಟ್ಟು 227 ಗ್ರಾಮ ಪಂಚಾಯಿತಿಗಳಲ್ಲಿ 1018 ಗ್ರಾಮಗಳಿರುತ್ತವೆ. ಅದರಲ್ಲಿ ಜನವಸತಿ ಇರುವ ಪ್ರದೇಶಗಳು 3530 ಇರುತ್ತವೆ.

2018–19ನೇ ಸಾಲಿಗೆ 7 ತಾಲ್ಲೂಕುಗಳಿಗೆ 227 ಗ್ರಾಮ ಪಂಚಾಯಿತಿಗಳಿಗೆ 1018 ಗ್ರಾಮಗಳಿಗೆ ಹಂಚಿಕೆ ಮಾಡಲಾಗಿರುವ ಅನುದಾನ ಒಟ್ಟು 42.33ಕೋಟಿ ರೂಪಾಯಿಗಳು ಸದರಿ ಅನುದಾನದಲ್ಲಿ ಬಿಡುಗಡೆಯಾಗಿರುವಅನುದಾನ 46.52 ಕೋಟಿ ರೂಪಾಯಿಗಳು ಬಿಡುಗಡೆಯಾದ ಮೊತ್ತಕ್ಕೆದುರಾಗಿ 42.63 ಕೋಟಿ ಹಣ ವೆಚ್ಚವಾಗಿರುತ್ತದೆ.

ಕುಡಿಯುವ ನೀರಿನ ಯೋಜನೆಗಳ ವಿವರ

ಕ್ರ. ಸಂ	ಯೋಜನೆಗಳು	ಒಟ್ಟು	ಕೈಗೊಂಡಿರುವುದು	ಪೂರ್ಣಗೊಂಡಿರುವುದು	ಪ್ರಗತಿಯಲ್ಲಿರುವುದು
1	ಕೊಳವೆ ನೀರು ಸರಬರಾಜು ಯೋಜನೆಗಳು	9	9	9	0
2	ಸುಸ್ಥಿರ ಚಟುವಟಿಕೆ (ಭೂಮಿಯ ಮೇಲ್ಮೈ/ ಅಂತರ್ಜಲ ಯೋಜನೆಗಳು)	3	3	2	1
3	ಇತರೆಕುಡಿಯುವ ನೀರಿನ ಕಾರ್ಯಗಳು	1488	1488	998	490
	ಒಟ್ಟು	**1500**	**1500**	**1009**	**491**

ಚಿಕ್ಕಮಗಳೂರು ಜಿಲ್ಲೆಯಗ್ರಾಮೀಣಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ ಮತ್ತು ಉಪವಿಭಾಗಗಳ ಮುಖ್ಯಕಾರ್ಯಾಚರಣೆ / ಕಾರ್ಯಕ್ರಮ ಅನುಷ್ಠಾನ / ಸಾಧನೆ ವಿವರವು ಮೇಲಿನಂತೆಇರುತ್ತದೆ

ಕಾರ್ಯಪಾಲಕ ಇಂಜಿನಿಯರ್
ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ
ಚಿಕ್ಕಮಗಳೂರು

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಆಡಳಿತ ವರದಿ 2018–19

ರಾಜ್ಯದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಜನಾಂಗವನ್ನು ಗುರುತಿಸಿ, ಅವರ ಕ್ಷೇಮಾಭಿವೃದ್ಧಿಗಾಗಿ ಭಾರತ ಸಂವಿಧಾನ 15(4)ನೇ ಅನುಚ್ಛೇದದಂತೆ, ಶೈಕ್ಷಣಿಕ ಮತ್ತು 16(4) ನೇ ಅನುಚ್ಛೇದದಂತೆ, ಔದ್ಯೋಗಿಕ ಮೀಸಲಾತಿ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ. ಈ ಸೌಲಭ್ಯಗಳನ್ನು ಅನುಷ್ಠಾನಗೊಳಿಸಲು ಪ್ರತ್ಯೇಕವಾದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯನ್ನು 1977 ರಲ್ಲಿ ಸೃಜಿಸಲಾಗಿದೆ. ತದನಂತರ ರಾಜ್ಯ ಮಟ್ಟದಲ್ಲಿ ಹಿಂದುಳಿದ ವರ್ಗಗಳ ಇಲಾಖೆ, ಹಾಗೂ ಅಲ್ಪಸಂಖ್ಯಾತರ ಇಲಾಖೆ ಎಂಬ ಪ್ರತ್ಯೇಕ ನಿರ್ದೇಶನಾಲಯಗಳನ್ನು; ಜಿಲ್ಲಾ ಹಂತದಲ್ಲಿ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಇಲಾಖೆಯ ಜಿಲ್ಲಾ ಅಧಿಕಾರಿಗಳ ಕಛೇರಿ ಪ್ರಾರಂಭಿಸುವುದರ ಮೂಲಕ ಕರ್ನಾಟಕ ಸರ್ಕಾರ ಪ್ರಾರಂಭಿಕ ಹೆಜ್ಜೆಯನ್ನಿಟ್ಟಿರುತ್ತದೆ. 2005–2006ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಇಲಾಖೆಯನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಎಂದು ಹೆಸರನ್ನು ಮಾರ್ಪಡಿಸಿದೆ. 1987–1988 ನೇ ಸಾಲಿನಲ್ಲಿ ಜಿಲ್ಲಾ ಪರಿಷತ್ ಅಸ್ಥಿತ್ವಕ್ಕೆ ಬಂದ ನಂತರ ಜಿಲ್ಲಾ ಹಂತದಲ್ಲಿ ಜಿಲ್ಲಾ ಪಂಚಾಯಿತಿ, ಆಡಳಿತ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸಲಾಗುತ್ತಿದೆ. ಜಿಲ್ಲಾವಲಯ ಇಲಾಖೆ ಕಾರ್ಯಕ್ರಮಗಳನ್ನು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿರವರ ಹಾಗೂ ರಾಜ್ಯ ವಲಯ ಕಾರ್ಯಕ್ರಮಗಳನ್ನು ಜಿಲ್ಲಾಧಿಕಾರಿಗಳವರ ನಿಯಂತ್ರಣ ಹಾಗೂ ಮಾರ್ಗ ದರ್ಶನದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ತಾಲ್ಲೂಕು ಹಂತದಲ್ಲಿ 2011–12ನೇ ಸಾಲಿನಿಂದ ತಾಲ್ಲೂಕು ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿ ಕಛೇರಿ ಪ್ರಾರಂಭಿಸಲಾಯಿತು. ತಾಲ್ಲೂಕು ಪಂಚಾಯಿತಿ ವಿಸ್ತರಣಾಧಿಕಾರಿಗಳಿಗೆ 2011–12ನೇ ಸಾಲಿನಿಂದ ಹಣ ಸೆಳೆಯುವ ಅಧಿಕಾರವನ್ನು ನೀಡಲಾಗಿದೆ.

ಹಿಂದುಳಿದ ವರ್ಗಗಳ ಜನರು ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸ್ವಾವಲಂಬಿಗಳಾಗಲು, ಪ್ರತಿಭಾನ್ವೇಷಣೆ, ಪ್ರತಿಭಾ ಪ್ರೋತ್ಸಾಹ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿಗೆ ಸಹಾಯಕವಾಗುವ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಈ ನಿಟ್ಟಿನಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಏಳಿಗೆಗಾಗಿ ಹಲವಾರು ಜನಹಿತ ಹಾಗೂ ಪ್ರಗತಿ ಪರ ಕಾರ್ಯಕ್ರಮಗಳನ್ನು ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಹಿಂದುಳಿದ ವರ್ಗಗಳ ಇಲಾಖೆಯ ರಾಜ್ಯ ವಲಯ ಕಾರ್ಯಕ್ರಮಗಳು ಜಿಲ್ಲಾವಲಯಕ್ಕೆ 2005–2006 ರಿಂದ ವರ್ಗಾವಣೆಯಾಗಿವೆ. 2018–19 ನೇ ಸಾಲಿನಲ್ಲಿ,

(ಅ) ಜಿಲ್ಲಾವಲಯ ಯೋಜನೇತರ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕಾರ್ಯಕ್ರಮಗಳಿಗಾಗಿ ರೂ. 3640.71 ಲಕ್ಷ ಆಯವ್ಯಯ ನಿಗಧಿಯಾಗಿದ್ದು, ರೂ. 3773.26ಲಕ್ಷ ಬಿಡುಗಡೆಯಾಗಿದೆ. ರೂ. 3704.97ಲಕ್ಷ ಖರ್ಚು ಮಾಡಲಾಗಿದೆ. 30227 ಫಲಾನುಭವಿಗಳು ಪ್ರಯೋಜನ ಪಡೆದಿರುತ್ತಾರೆ. ಸಿಬ್ಬಂದಿಗಳ ಕೊರತೆಯಿಂದಾಗಿ ವೇತನ ಬಾಬ್ತು ರೂ. 27.84 ಲಕ್ಷ ಸರ್ಕಾರಕ್ಕೆ ಹಿಂದಿರುಗಿಸಲಾಗಿದೆ.

ಆ) ರಾಜ್ಯವಲಯ ಕಾರ್ಯಕ್ರಮಗಳಲ್ಲಿ ಅನುದಾನ ಬಿಡುಗಡೆಗೆ ಅನುಗುಣವಾಗಿ,

(1) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ರಾಜ್ಯ ವಲಯ ಕಾರ್ಯಕ್ರಮಗಳಿಗಾಗಿ ರೂ. 1225.92 ಲಕ್ಷ ಬಿಡುಗಡೆಯಾಗಿದ್ದು, ರೂ. 1192.33 ಲಕ್ಷ ವೆಚ್ಚ ಮಾಡಿದೆ. 38135 ಫಲಾನುಭವಿಗಳು ಪ್ರಯೋಜನ ಪಡೆದಿರುತ್ತಾರೆ

ಜಿಲ್ಲಾ ವಲಯ ಕಾರ್ಯಕ್ರಮಗಳು :

1. ಕಾರ್ಯನಿರ್ವಾಹಕ ಸಿಬ್ಬಂದಿ

ಜಿಲ್ಲಾ ಮಟ್ಟದ ಕಛೇರಿಯಲ್ಲಿ ಗ್ರೂಪ್ "ಎ" ದರ್ಜೆ ಕಿರಿಯ ಶ್ರೇಣಿಯ ಅಧಿಕಾರಿಗಳು ಸೇರಿ, ಪತ್ರಾಂಕಿತ ವ್ಯವಸ್ಥಾಪಕರು–1, ಕಛೇರಿ ಮೇಲ್ವಿಚಾರಕರು–1. ಲೆಕ್ಕ ಅಧೀಕ್ಷಕರು–1, ಪ್ರಥಮ ದರ್ಜೆ ಸಹಾಯಕರು–3, ದ್ವಿತೀಯ ದರ್ಜೆ ಸಹಾಯಕರು–3, ಬೆರಳಚ್ಚುಗಾರರು–1 ಹಾಗೂ "ಡಿ" ದರ್ಜೆ ನೌಕರರ –1 ಹಾಲಿ ಕಾರ್ಯ ನಿರ್ವಹಿಸುತ್ತಿದ್ದು, 2018–19 ರಲ್ಲಿ ಇವರ ವೇತನ ಹಾಗೂ

ವಾಹನ ನಿರ್ವಹಣೆ, ಕಛೇರಿ ನಿರ್ವಹಣೆಗಾಗಿ ರೂ. 53.00 ಲಕ್ಷ ನಿಗಧಿಯಾಗಿದ್ದು, ರೂ. 53.00 ಲಕ್ಷ ಬಿಡುಗಡೆಯಾಗಿದೆ. ರೂ. 52.96 ಲಕ್ಷ ವಿನಿಯೋಗಿಸಿದೆ. ಒಟ್ಟಾರೆ ಜಿಲ್ಲೆಯಲ್ಲಿ ಸಿಬ್ಬಂದಿಯ ವಿವರ ದಿನಾಂಕ: 31.03.2018ರ ಅಂತ್ಯಕ್ಕೆ ಇಂತಿದೆ.

ಕ್ರ. ಸಂ.	ಹುದ್ದೆ	ಮಂಜೂರಾತಿ	ಭರ್ತಿ	ಖಾಲಿ	ಷರಾ
1	ಗ್ರೂಪ್ "ಎ"	1	1	–	
2	ಗ್ರೂಪ್ "ಬಿ"	9	2	7	
3	ಗ್ರೂಪ್ "ಸಿ"	149	73	76	
4	ಗ್ರೂಪ್ "ಡಿ"	428	246	182	
	ಒಟ್ಟು	586	322	265	

2. ವಿದ್ಯಾರ್ಥಿ ನಿಲಯಗಳ ನಿರ್ವಹಣೆ :

ಗ್ರಾಮಾಂತರ ಪ್ರದೇಶಗಳಿಗೆ ಸೇರಿದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು, ಕಾಲೇಜುಗಳಲ್ಲಿ ಮೆಟ್ರಿಕ್ ನಂತರದ ತರಗತಿಗಳಲ್ಲಿ ವಿದ್ಯಾಭ್ಯಾಸ ಮುಂದುವರಿಸಲು ಅನುಕೂಲ ಕಲ್ಪಿಸಲು ಮೆಟ್ರಿಕ್ ನಂತರದ ನಿಲಯಗಳನ್ನು ನಡೆಸಲಾಗುತ್ತಿದ್ದು, ಜಿಲ್ಲೆಯಲ್ಲಿ ಒಟ್ಟು 41 ವಿದ್ಯಾರ್ಥಿ ನಿಲಯಗಳಲ್ಲಿ 3942 ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಾಗುತ್ತಿದೆ.

ಗ್ರಾಮಾಂತರ ಪ್ರದೇಶಗಳಿಗೆ ಸೇರಿದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಮಾಧ್ಯಮಿಕ, ಪ್ರೌಢಶಾಲಾ ಶಿಕ್ಷಣವನ್ನು ಮುಂದುವರಿಸಲು 5 ರಿಂದ 10ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ, ಕಲ್ಪಿಸಲು ಮೆಟ್ರಿಕ್ ಪೂರ್ವ ನಿಲಯಗಳನ್ನು ನಡೆಸಲಾಗುತ್ತಿದೆ. 2018–19 ನೇ ಸಾಲಿನಲ್ಲಿ ಜಿಲ್ಲೆಯಲ್ಲಿ 59 ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿ ಒಟ್ಟು 2670 ವಿದ್ಯಾರ್ಥಿಗಳಿಗಾಗಿ, ಅವಕಾಶ ಕಲ್ಪಿಸಲಾಗುತ್ತಿದೆ.

ಸ್ವಯಂ ಸೇವಾ ಸಂಸ್ಥೆಗಳಿಂದ ನಡೆಸಲ್ಪಡುವ ಖಾಸಗಿ ಮೆಟ್ರಿಕ್ ನಂತರದ /ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಿಗೆ ಪ್ರೋತ್ಸಾಹ ಅಥವಾ ನೆರವು ನೀಡುವ ದೃಷ್ಟಿಯಿಂದ ಸಹಾಯಧನ ನೀಡಲಾಗುತ್ತಿದೆ. ಈ ನಿಲಯಗಳಲ್ಲಿ ವಸತಾರ್ಥಿಗಳಿಗೆ ಪ್ರತಿ ಮಾಹೆ ಪ್ರತಿ ವಿದ್ಯಾರ್ಥಿಗೆ ರೂ.1000–00 ರ ದರದಲ್ಲಿ ಆಹಾರ ವೆಚ್ಚಕ್ಕೆ ಸಹಾಯಧನ ನೀಡಲಾಗುತ್ತಿದೆ. ಜಿಲ್ಲೆಯಲ್ಲಿ ಯೋಜನೇತರ 4 ನಿಲಯಗಳಿಗೆ ಒಟ್ಟು 355 ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ 2018–19ರಲ್ಲಿ ಸಹಾಯಧನ ರೂ.2140606/– ನೀಡಲಾಗಿದೆ.

ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ ವಸತಾರ್ಥಿಗಳಾಗಿದ್ದುಕೊಂಡು ಪಬ್ಲಿಕ್ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗುವ ವಸತಾರ್ಥಿಗಳಿಗೆ ಎಸ್.ಎಸ್.ಎಲ್.ಸಿ. ಪಾಸಾದ ವಿದ್ಯಾರ್ಥಿಗಳಿಗೆ ರೂ. 1000, ಪಿಯುಸಿ ಪಾಸಾದ ವಿದ್ಯಾರ್ಥಿಗಳಿಗೆ ರೂ. 1500, ಪದವಿ ಪಾಸಾದ ವಿದ್ಯಾರ್ಥಿಗಳಿಗೆ ರೂ. 2000 ಹಾಗೂ ಸ್ನಾತಕೋತ್ತರ ಪದವಿಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ರೂ. 3000 ರವರೆಗೆ ಜಿಲ್ಲಾ ವಲಯ ಯೋಜನೇತರದಡಿ ಪ್ರೋತ್ಸಾಹ ಧನ ನೀಡಲಾಗುವುದು. 2018–19ನೇ ಸಾಲಿನಿಂದ ವಿದ್ಯಾರ್ಥಿ ನಿಲಯದಲ್ಲಿ ಪ್ರವೇಶಾವಕಾಶ ಲಭ್ಯವಾಗದೇ ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ವಿದ್ಯಾಸಿರಿ ಎಂಬ ಹೊಸ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದ್ದು, ಸದರಿ ಯೋಜನೆಯಲ್ಲಿ ಮಾಸಿಕ ರೂ. 1500 ರಂತೆ ಅಲೆಮಾರಿ ಮತ್ತು ಹಿಂದುಳಿದ ವರ್ಗಗಳ ಒಟ್ಟು 1346 ವಿದ್ಯಾರ್ಥಿಗಳಿಗೆ ರೂ. 113.23 ಲಕ್ಷ ವೆಚ್ಚ ಭರಿಸಲಾಗಿದೆ.

3. ಇತರೇ ಹಿಂದುಳಿದ ವರ್ಗಗಳಿಗೆ ಇತರೇ ರಿಯಾಯಿತಗಳು :

ಪ್ರವರ್ಗ–2ಎ, 3ಎ, 3ಬಿ ಹಾಗೂ ಇತರೆ ಅಭ್ಯರ್ಥಿಗಳಿಗೆ ವಾರ್ಷಿಕ ವರಮಾನ ರೂ.1.00ಲಕ್ಷ ಹಾಗೂ ಪ್ರವರ್ಗ–1 ಕ್ಕೆ ರೂ. 2.00 ಲಕ್ಷದೊಳಗೆ ಇರುವ ಅರ್ಹ ವಿದ್ಯಾರ್ಥಿಗಳಿಗೆ ಶುಲ್ಕ ಮರು ಪಾವತಿ ಮಾಡುವ ಶುಲ್ಕ ವಿನಾಯಿತಿ ಕಾರ್ಯಕ್ರಮದಲ್ಲಿ 2018–19 ರಲ್ಲಿ ರೂ. 659.428 ಲಕ್ಷ ಬಿಡುಗಡೆಯಾಗಿದೆ. ರೂ. 659.428 ಲಕ್ಷ ವಿನಿಯೋಗಿಸಿದೆ. 12339 ವಿದ್ಯಾರ್ಥಿಗಳು ಪ್ರಯೋಜನ ಪಡೆದಿರುತ್ತಾರೆ.

4. ವಿದ್ಯಾರ್ಥಿ ವೇತನ ಮಂಜೂರಾತಿ :

1 ರಿಂದ 5ನೇ ತರಗತಿಯವರೆಗೆ ಹಿಂದುಳಿದ ವರ್ಗಗಳ ಬಾಲಕರಿಗೆ, ಬಾಲಕಿಯರಿಗೆ ವಾರ್ಷಿಕ ರೂ. 250, 6 ರಿಂದ

8ನೇ ತರಗತಿಯವರೆಗೆ ಬಾಲಕ/ಬಾಲಕಿಯರಿಗೆ ವಾರ್ಷಿಕ ರೂ. 400 ಮತ್ತು 9 ಮತ್ತು 10ನೇ ತರಗತಿಯವರಿಗೆ ಬಾಲಕ/ ಬಾಲಕಿಯರಿಗೆ ರೂ. 500 ರಂತೆ ಈ ಮೊತ್ತಕ್ಕೆ ರೂ. 500 ಅಡ್ಯಾಕ್ ಹಣ ಸೇರುತ್ತದೆ ಮತ್ತು ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ, ತಿಂಗಳಿಗೆ ಗ್ರೂಪ್–ಎ ರೂ. 350, ಗ್ರೂಪ್– ಬಿ ಗೆ ರೂ. 335, ಗ್ರೂಪ್–ಸಿ ಗೆ ರೂ. 210, ಗ್ರೂಪ್–ಡಿ ಗೆ ರೂ. 160 ರಂತೆ 10 ತಿಂಗಳಿಗೆ ವಿದ್ಯಾರ್ಥಿ ವೇತನ ಮಂಜೂರು ಮಾಡಲಾಗುತ್ತಿದ್ದು, ಒಟ್ಟು 44276 ವಿದ್ಯಾರ್ಥಿಗಳಿಗೆ ರೂ. 771.539 ಲಕ್ಷ ಮಂಜೂರು ಮಾಡಲಾಗಿದೆ.

5. ವಿದ್ಯಾರ್ಥಿ ನಿಲಯಗಳ ಕಟ್ಟಡ ದುರಸ್ಥಿ/ ಹೊಸ ಕಟ್ಟಡಗಳ ನಿರ್ಮಾಣ :

ಇಲಾಖೆಯ ವಿದ್ಯಾರ್ಥಿ ನಿಲಯಗಳಿಗೆ ಸ್ವಂತ ಕಟ್ಟಡ ಹೊಂದಲು ಹಾಗೂ ಹಾಲಿ ಇರುವ ಕಟ್ಟಡಗಳ ವಿಶೇಷ ದುರಸ್ಥಿಗಾಗಿ 2018–19 ನೇ ಸಾಲಿನಲ್ಲಿ ಜಿಲ್ಲಾವಲಯದಲ್ಲಿ ರೂ.58.51 ಲಕ್ಷ ಆಯವ್ಯಯ ನಿಗಧಿಯಾಗಿದ್ದು, ಇದರಲ್ಲಿ 14 ನಿಲಯಗಳ ದುರಸ್ಥಿ ಕಾಮಗಾರಿ ನಿರ್ವಹಿಸಿದೆ. ಮೂಲಭೂತ ಸೌಕರ್ಯಗಳಾದ ಶೌಚಾಲಯ, ಸ್ನಾನದ ಕೊಠಡಿ ನಿರ್ಮಾಣ, ಕುಡಿಯುವ ನೀರಿನ ವ್ಯವಸ್ಥೆ ಒದಗಿಸಲು ವೆಚ್ಚ ಭರಿಸಲಾಗಿದೆ.

2016–17ನೇ ಸಾಲಿನಲ್ಲಿ ಚಿಕ್ಕಮಗಳೂರು ತಾ: ಮಳಲೂರು, ಶೃಂಗೇರಿ ಟೌನ್ ಹಾಗೂ ಬೇಗಾರು ಗಳಲ್ಲಿ 3 ವಿದ್ಯಾರ್ಥಿ ನಿಲಯಗಳ ಹೊಸ ಕಟ್ಟಡ ಮಂಜೂರಾತಿಗೆ ಸರ್ಕಾರವು ಮಂಜೂರಾತಿ ನೀಡಿದ್ದು, 3 ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣಕ್ಕೆ ಒಟ್ಟು ರೂ. 600.00 ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ಸರ್ಕಾರದಿಂದ ಆಡಳಿತಾತ್ಮಕ ಮಂಜೂರಾತಿ ದೊರಕಿದ್ದು, ಕಟ್ಟಡ ನಿರ್ಮಾಣ ಪೂರ್ಣಗೊಂಡಿರುತ್ತದೆ.

6. ಮೆಟ್ರಿಕ್ ಪೂರ್ವ / ಮೆಟ್ರಿಕ್ ನಂತರದ ನಿಲಯಗಳ ಸುಧಾರಣೆ :

ಈ ಯೋಜನೆಯಡಿಯಲ್ಲಿ ವಿದ್ಯಾರ್ಥಿ ನಿಲಯಗಳಿಗೆ ಅವಶ್ಯಕವಾದ ಪಾತ್ರೆ ಪಿಠೋಪಕರಣ, ಎಲ್.ಪಿ.ಜಿ.ಗಳನ್ನು ಅಳವಡಿಸಲು ಹಾಸಿಗೆ ಸಾಮಗ್ರಿಗಳನ್ನು ನೀಡಲು ಸುಧಾರಣೆ ಕಾರ್ಯಕ್ರಮದಲ್ಲಿ ರೂ. 30.00ಲಕ್ಷ ಅನುದಾನ ನಿಗಧಿಯಾಗಿದ್ದು, 1999–2000 ರಿಂದ ತಾಲ್ಲೂಕು ಪಂಚಾಯಿತಿ ಕಾರ್ಯಕ್ರಮವಾಗಿದ್ದು, 2018–19 ರಲ್ಲಿ ರೂ.29.39 ಲಕ್ಷಗಳನ್ನು ತಾಲ್ಲೂಕುಗಳಲ್ಲಿ ವಿನಿಯೋಗಿಸಿದೆ.

7. ಹೊಲಿಗೆ ತರಬೇತಿ ಕೇಂದ್ರಗಳು :

ಹಿಂದುಳಿದ ವರ್ಗಗಳ ಮಹಿಳೆಯರಿಗೆ ಹೊಲಿಗೆಯಲ್ಲಿ ತರಭೇತಿ ನೀಡಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಉಚಿತ ಹೊಲಿಗೆ ಯಂತ್ರ ನೀಡಿ ಸ್ವಯಂ ಉದ್ಯೋಗ ಕಲ್ಪಿಸಲು 1999–2000 ರಿಂದ ಕಡೂರು ಟೌನ್‌ನಲ್ಲಿ ಇಲಾಖೆ ವತಿಯಿಂದ ಹೊಲಿಗೆ ತರಭೇತಿ ಕೇಂದ್ರ ಪ್ರಾರಂಭಿಸಿದೆ. 2018–19 ರಲ್ಲಿ 20 ವಿದ್ಯಾರ್ಥಿಗಳಿಗೆ ತರಬೇತಿ ನೀಡಿದೆ. ಒಟ್ಟು ರೂ. 6.17 ಲಕ್ಷ ವೆಚ್ಚವಾಗಿದೆ. ಜಿಲ್ಲಾವಲಯ ಯೋಜನೇತರದಡಿ 2007–2008 ರಿಂದ ಕೊಪ್ಪ ಟೌನ್‌ನಲ್ಲಿ ಹೊಸದಾಗಿ ಹೊಲಿಗೆ ತರಭೇತಿ ಕೇಂದ್ರ ಪ್ರಾರಂಭಿಸಲು 2006–2007 ರಲ್ಲಿ ಸರ್ಕಾರದ ಆದೇಶವಾಗಿದೆ. 2018–19 ರಲ್ಲಿ 20 ಅಭ್ಯರ್ಥಿಗಳಿಗೆ ತರಭೇತಿ ನೀಡಿದೆ. ರೂ. 4.77 ಲಕ್ಷ ವೆಚ್ಚವಾಗಿದೆ.

8. ಇತರೇ ಹಿಂದುಳಿದ ವರ್ಗಗಳಿಗೆ ಇತರೇ ರಿಯಾಯಿತಗಳು :

ಕಾನೂನು ಪದವಿಯನ್ನು ಪಡೆದಿರುವ ಹಿಂದುಳಿದ ವರ್ಗಗಳ ನಿರುದ್ಯೋಗಿ ವಕೀಲರಿಗೆ ವೃತ್ತಿಯಲ್ಲಿ 4 ವರ್ಷಗಳ ತರಭೇತಿ ನೀಡಿ ನಿಪುಣ ವಕೀಲರಾಗಿಸುವುದು ಈ ಯೋಜನೆ ಉದ್ದೇಶ. ತರಭೇತಿ ಅವಧಿಯಲ್ಲಿ ಮಾಸಿಕ ರೂ. 4,000 ಶಿಷ್ಯವೇತನ ನೀಡಲಾಗುವುದು. 2000–2001 ರಿಂದ ಜಿಲ್ಲಾವಲಯ ಯೋಜನೆಯಾಗಿದೆ. 2018–19ನೇ ಸಾಲಿಗೆ 20 ಅಭ್ಯರ್ಥಿಗಳಿಗೆ ರೂ. 11.88 ಲಕ್ಷ ವೆಚ್ಚವಾಗಿದೆ.

9. ಹಿಂದುಳಿದ ವರ್ಗಗಳ ತಾಲ್ಲೂಕು ವಿಸ್ತರಣಾ ಕಛೇರಿಗಳು :

ತಾಲ್ಲೂಕು ಮಟ್ಟದಲ್ಲಿ 2014–15ನೇ ಸಾಲಿನಿಂದ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಕಛೇರಿಯನ್ನು ಸರ್ಕಾರವು ಮಂಜೂರು ಮಾಡಿದ್ದು, ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ–7, ಪ್ರಥಮ ದರ್ಜೆ ಸಹಾಯಕರು–7, ದ್ವಿತೀಯ ದರ್ಜೆ ಸಹಾಯಕರು–7, ಕಂಪ್ಯೂಟರ್ ಅಪರೇಟರ್ ಗ್ರೇಡ್2–7 ಹುದ್ದೆಗಳನ್ನು ಸೃಷ್ಟಿಸಲಾಗಿದೆ. ಹಾಲಿ ಇರುವ ಈ ಜಿಲ್ಲೆಯ 7 ತಾಲ್ಲೂಕುಗಳ ಬಿಸಿಎಂ ವಿಸ್ತರಣಾಧಿಕಾರಿಗಳ ವೇತನ ಮತ್ತು ಭತ್ಯೆ ಪಾವತಿಗೆ 2018–19 ರಲ್ಲಿ ಯೋಜನೇತರ ಒಟ್ಟು ರೂ. 41.83 ಲಕ್ಷ ವ್ಯಯಿಸಿದೆ.

10. ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆಗಳು :

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು ಮೂಲಕ ನಿರ್ವಹಣೆಯಾಗುತ್ತಿದ್ದು, ಒಟ್ಟು 7 ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆಗಳು ಜಿಲ್ಲಾವಲಯಕ್ಕೆ ವರ್ಗಾಯಿಸಿದೆ. ಇವುಗಳಲ್ಲಿ 6ನೇ ತರಗತಿಯಿಂದ 10ನೇ ತರಗತಿಯವರೆಗಿನ 1550 ವಿದ್ಯಾರ್ಥಿಗಳು 2018–19 ರಲ್ಲಿ ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ.

ರಾಜ್ಯ ವಲಯ ಕಾರ್ಯಕ್ರಮಗಳು :

1. ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ನರ್ಸಿಂಗ್ ತರಭೇತಿ ಭತ್ಯೆ :

ಸರ್ಕಾರಿ ಕೋಟಾದಡಿ ಆಯ್ಕೆಯಾಗಿ ಜಿಎನ್‌ಎಂ/ಬಿಎಸ್ಸಿ ನರ್ಸಿಂಗ್‌ನಲ್ಲಿ ಓದುತ್ತಿರುವ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಪ್ರೋತ್ಸಾಹ ನೀಡಲು ತರಭೇತಿ ಭತ್ಯೆ/ ಕೋರ್ಸ್ ವೆಚ್ಚ ನೀಡುವ ಕಾರ್ಯಕ್ರಮ 2006–2007ರಿಂದ ಜಾರಿಯಾಗಿದೆ. 2018–19 ರಲ್ಲಿ ಈ ಜಿಲ್ಲೆಯ ನರ್ಸಿಂಗ್ ಕಾಲೇಜುಗಳಲ್ಲಿನ 194 ಅಭ್ಯರ್ಥಿಗಳಿಗೆ ರೂ. 11.045ಲಕ್ಷ ತರಭೇತಿ ಭತ್ಯೆ ನೀಡಲಾಗಿದೆ.

2. ಅಲೆಮಾರಿ ಅರೆಅಲೆಮಾರಿ ಜನಾಂಗದವರಿಗೆ ವಿವಿಧ ಕಾರ್ಯಗಳು :

2007–2008 ರಲ್ಲಿ ಹೊಸದಾಗಿ ಜಾರಿಯಾಗಿರುವ ಅಲೆಮಾರಿ ಅರೆಅಲೆಮಾರಿ ಜನಾಂಗದವರಿಗೆ ವಿವಿಧ ಕಾರ್ಯಕ್ರಮಗಳಡಿ 2018–19ನೇ ಸಾಲಿನಲ್ಲಿ

ಅ) ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ 5 ರಿಂದ 7ನೇ ತರಗತಿವರೆಗೆ ಮಾಹೆಯಾನ 10 ತಿಂಗಳಿಗೆ ಬಾಲಕರಿಗೆ ರೂ. 100ರಂತೆ, ಬಾಲಕಿಯರಿಗೆ 150 ಹಾಗೂ 8ರಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಬಾಲಕರಿಗೆ ರೂ. 150, ಬಾಲಕಿಯರಿಗೆ ರೂ. 200 ಪ್ರೋತ್ಸಾಹಧನ ಮಾಹೆಯಾನ 10 ತಿಂಗಳು ನೀಡಲಾಗುತ್ತಿದ್ದು, ರೂ. 5.645 ಲಕ್ಷ ಬಿಡುಗಡೆಯಾಗಿದ್ದು, ರೂ. 21.39 ಲಕ್ಷಗಳನ್ನು ಖರ್ಚು ಮಾಡಲಾಗಿದ್ದು, 965 ವಿದ್ಯಾರ್ಥಿಗಳಿಗೆ ನೀಡಿದೆ.

ಆ)ಪಿಯುಸಿಯ ನಂತರದ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಈ ಜನಾಂಗದ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ. 300 ರಿಂದ 400 ರವರೆಗೆ 10 ತಿಂಗಳಿಗೆ ಅರ್ಹತಾ ವಿದ್ಯಾರ್ಥಿ ವೇತನ ಮಂಜೂರಾತಿಯಡಿ ರೂ. 1.41 ಲಕ್ಷ ಬಿಡುಗಡೆಯಾಗಿದ್ದು, ರೂ. 0.90 ಲಕ್ಷಗಳನ್ನು 31 ವಿದ್ಯಾರ್ಥಿಗಳಿಗೆ ನೀಡಿದೆ.

ಇ) ಅಲೆಮಾರಿ ಅರೆ ಅಲೆಮಾರಿ ವಿದ್ಯಾರ್ಥಿಗಳಿಗಾಗಿ ಕಡೂರು ತಾ: ಬೀರೂರು ಟೌನ್‌ನಲ್ಲಿ 125 ಸಂಖ್ಯಾಬಲದ ಆಶ್ರಮಶಾಲೆ ಮಂಜೂರಾಗಿದ್ದು, 2018–19ನೇ ಸಾಲಿಗೆ 90 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿದ್ದು, ರೂ. 48.00ಲಕ್ಷ ಬಿಡುಗಡೆಯಾಗಿದ್ದು, ರೂ. 48.00ಲಕ್ಷ ಹಣ ಖರ್ಚಾಗಿರುತ್ತದೆ.

3. ವಿವಿಧ ಸಮುದಾಯಗಳಿಗೆ ಸಮುದಾಯ ಭವನ ನಿರ್ಮಾಣ ಕಾರ್ಯಕ್ರಮ :

ಹಿಂದುಳಿದ ವರ್ಗಗಳ ವಿವಿಧ ಸಮುದಾಯ ಭವನ ಕಟ್ಟಡ ನಿರ್ಮಾಣಕ್ಕೆ 2018–19 ನೇ ಸಾಲಿನಲ್ಲಿ ಚಿಕ್ಕಮಗಳೂರು ಜಿಲ್ಲೆಗೆ ಬಿಡುಗಡೆಯಾಗಿರುವ ಅನುದಾನ ರೂ. 118.00 ಲಕ್ಷಗಳು ಸಮುದಾಯದವರು ನಿರ್ಮಿಸುವ ಕಟ್ಟಡಗಳ ಪ್ರಗತಿ ಆಧರಿಸಿ ಹಂತ ಹಂತವಾಗಿ ಸಂಸ್ಥೆಗಳಿಗೆ ಹಣ ಬಿಡುಗಡೆ ಮಾಡಲಾಗಿದೆ.

4. ಇಂಜಿನಿಯರಿಂಗ್ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯ :

2013–14ನೇ ಸಾಲಿನಲ್ಲಿ ಇಂಜಿನಿಯರಿಂಗ್ ವ್ಯಾಸಂಗ ಮಾಡುವ ಬಾಲಕರ/ ಬಾಲಕಿಯರಿಗಾಗಿ ತಲಾ 100 ಸಂಖ್ಯಾಬಲದ ಇಂಜಿನಿಯರಿಂಗ್ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಇಂಜಿನಿಯರಿಂಗ್ ಮೆಟ್ರಿಕ್ ನಂತರದ ಬಾಲಿಕಾ ವಿದ್ಯಾರ್ಥಿ ನಿಲಯಗಳನ್ನು ಚಿಕ್ಕಮಗಳೂರು ನಗರಕ್ಕೆ ಸರ್ಕಾರವು ಮಂಜೂರು ಮಾಡಿದೆ. 2018–19 ರಲ್ಲಿ ಒಟ್ಟು200 ವಿದ್ಯಾರ್ಥಿಗಳು ಉಚಿತ ಊಟ ವಸತಿ ಸೌಲಭ್ಯ ಪಡೆದಿರುತ್ತಾರೆ.

5. ಶ್ರೀಮತಿ ಇಂದಿರಾಗಾಂಧಿ ನರ್ಸಿಂಗ್ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯ :

2014–15ನೇ ಸಾಲಿನಲ್ಲಿ ನರ್ಸಿಂಗ್ ವ್ಯಾಸಂಗ ಮಾಡುವ ಬಾಲಕಿಯರಿಗಾಗಿ 100 ಸಂಖ್ಯಾಬಲದ ಶ್ರೀಮತಿ ಇಂದಿರಾಗಾಂಧಿ ನರ್ಸಿಂಗ್ ಮೆಟ್ರಿಕ್ ನಂತರದ ಬಾಲಿಕಾ ವಿದ್ಯಾರ್ಥಿ ನಿಲಯವನ್ನು ಚಿಕ್ಕಮಗಳೂರು ನಗರಕ್ಕೆ ಸರ್ಕಾರವು ಮಂಜೂರು ಮಾಡಿದೆ. 2018–19 ರಲ್ಲಿ ಒಟ್ಟು 100 ವಿದ್ಯಾರ್ಥಿಗಳು ಉಚಿತ ಊಟ ವಸತಿ ಸೌಲಭ್ಯ ಪಡೆದಿರುತ್ತಾರೆ.

ಜಿಲ್ಲಾ ಅಧಿಕಾರಿ,
ಹಿಂದುಳಿದ ವರ್ಗಗಳ ಕಲ್ಯಾಣಇಲಾಖೆ,
ಚಿಕ್ಕಮಗಳೂರು.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಚಿಕ್ಕಮಗಳೂರು

ಇಲಾಖೆ ಆಡಳಿತ ವರದಿ 2018–19

ಜಿಲ್ಲಾ ವಲಯ ಯೋಜನೆ

ವಿದ್ಯಾರ್ಥಿ ನಿಲಯಗಳ ನಿರ್ವಹಣೆ

ಪಿ.ಯು.ಸಿ, ಪದವಿ ಮತ್ತು ಸ್ನಾತಕೋತ್ತರ ಹಾಗೂ ಸರಿಸಮ ಕೋರ್ಸ್‌ಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳು ಈ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ. ವಿದ್ಯಾರ್ಥಿಯ ಕುಟುಂಬದ ವಾರ್ಷಿಕ ವರಮಾನವು 2,50 ಲಕ್ಷ ಹಾಗೂ ಪ್ರವರ್ಗ–1ರ ವಿದ್ಯಾರ್ಥಿಗಳಿಗೆ 2,50 ಲಕ್ಷ ವಾರ್ಷಿಕ ವರಮಾನದವರೆಗೂ ಅವಕಾಶವಿರುತ್ತದೆ. ಊಟ, ವಸತಿ, ಡಿಜಿಟಲ್ ಲೈಬ್ರರಿ, ಕಂಪೂಟರ್ ಲ್ಯಾಬ್ ಮತ್ತು ಅಗತ್ಯ ಮೂಲಭೂತ ಸೌಕರ್ಯಗಳನ್ನು ಉಚಿತವಾಗಿ ನೀಡಲಾಗುವುದು. ಚಿಕ್ಕಮಗಳೂರು ಜಿಲ್ಲೆಯ 4 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ 250 ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಾಗುತ್ತಿದೆ. ಲೆಕ್ಕಶೀರ್ಷಿಕೆ:2225–00–103–0–34 (090) ಯಡಿ 2018–19ನೇ ಸಾಲಿಗೆ ಬಿಡುಗಡೆಯಾಗಿದ್ದ ರೂ 70.00ಲಕ್ಷ ಪೂರ್ಣ ವೆಚ್ಚವಾಗಿರುತ್ತದೆ. ಸಿಬ್ಬಂದಿ ವೇತನಕ್ಕಾಗಿ ಲೆಕ್ಕಶೀರ್ಷಿಕೆ: 2225–00–103–0–34(001)ಯಡಿ ಬಿಡುಗಡೆಯಾಗಿದ್ದ ರೂ 11.00 ಲಕ್ಷ ಮೊತ್ತದಲ್ಲಿ, ರೂ 8.42 ಲಕ್ಷ ಬಳಕೆಯಾಗಿರುತ್ತದೆ.

ಕಾನೂನು ಪದವೀಧರರ ಶಿಷ್ಯವೇತನ

ಕಾನೂನು ಪದವಿಯನ್ನು ಪಡೆದಿರುವ ಅಲ್ಪಸಂಖ್ಯಾತರ ಸಮುದಾಯದ ವಕೀಲರಿಗೆ ವೃತ್ತಿಯಲ್ಲಿ 4 ವರ್ಷಗಳ ತರಬೇತಿ ನೀಡಿ ನಿಪುಣ ವಕೀಲರಾಗಿಸುವುದು ಈ ಯೋಜನೆಯ ಉದ್ದೇಶ. ತರಬೇತಿ ಅವಧಿಯಲ್ಲಿ ಮಾಸಿಕ ರೂ.5000/– ಶಿಷ್ಯವೇತನ ನೀಡಲಾಗುವುದು. 2018–19ನೇ ಸಾಲಿನ ಅರ್ಜಿಗಳು ಫೆಬ್ರವರಿ–19 ತಿಂಗಳಿನಲ್ಲಿ ಸ್ವೀಕೃವಾಗಿರುವುದರಿಂದ, ಮಾರ್ಚ್–19 ತಿಂಗಳಲ್ಲಿ ನಿಯೋಜಿಸಿ, ಮಾರ್ಚ್ ತಿಂಗಳ ಶಿಷ್ಯವೇತನ ಮಾತ್ರ ನೀಡಿರುವದರಿಂದ ರೂ 0.10 ಲಕ್ಷ ಮಾತ್ರ ಖರ್ಚಾಗಿರುತ್ರದೆ.

3. ಖಾಸಗಿ ಅನುದಾನಿತ ವಿದ್ಯಾರ್ಥಿನಿಲಯ:–

ಸ್ವಯಂ ಸೇವಾ ಸಂಸ್ಥೆಗಳಿಂದ ನಡೆಸಲ್ಪಡುವ ಖಾಸಗಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಿಗೆ ಪ್ರೋತ್ಸಾಹ ಅಥವಾ ನೆರವು ನೀಡುವ ದೃಷ್ಟಿಯಿಂದ ಸಹಾಯಧನ ನೀಡಲಾಗುತ್ತಿದೆ. ಈ ನಿಲಯಗಳಲ್ಲಿ ನಿಲಯಾರ್ಥಿಗಳಿಗೆ ಪ್ರತಿ ಮಾಹೆ ಪ್ರತಿ ವಿದ್ಯಾರ್ಥಿಗೆ ರೂ.750–00ರ ದರದಲ್ಲಿ ಒಟ್ಟು 10 ತಿಂಗಳಿಗೆ ಆಹಾರ ವೆಚ್ಚಕ್ಕೆ ಸಹಾಯಧನ ನೀಡಲಾಗುವುದು. ಜಿಲ್ಲೆಯಲ್ಲಿ ಒಟ್ಟು 3 ಖಾಸಗಿ ವಿದ್ಯಾರ್ಥಿನಿಲಯಗಳು ಮಂಜೂರಾಗಿದ್ದು, ವಿದ್ಯಾರ್ಥಿನಿಲಯಗಳಲ್ಲಿ ಅಲ್ಪಸಂಖ್ಯಾತರ ವಿದ್ಯಾರ್ಥಿಗಳ ದಾಖಲಾತಿ ಕೊರತೆಯಿಂದ ಸದರಿ 3 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸದ ಕಾರಣ 2018–19ನೇ ಸಾಲಿನಲ್ಲಿ ಬಿಡುಗಡೆಯಾಗಿದ್ದ ರೂ.8.92 ಲಕ್ಷ ಅನುದಾನ ಬಳಕೆಯಾಗಿರುವುದಿಲ್ಲ..

4. ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆಗಳು:–

ಇಲಾಖೆ ವತಿಯಿಂದ ಜಿಲ್ಲೆಯಲ್ಲಿ ಒಟ್ಟು 2 ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, ಇವುಗಳಲ್ಲಿ 6ನೇ ತರಗತಿಯಿಂದ 10 ನೇ ತರಗತಿಯವರೆಗೆ ಒಟ್ಟು 520 ವಿದ್ಯಾರ್ಥಿಗಳಿಗೆ ಗುಣಮಟ್ಟದ ವಿದ್ಯಾಭ್ಯಾಸ, ವಸತಿ ನಿಲಯದ ಸೌಲಭ್ಯ ಹಾಗೂ ಅಗತ್ಯ ಮೂಲಭೂತ ಸೌಕರ್ಯಗಳನ್ನು ಉಚಿತವಾಗಿ ನೀಡಲಾಗಿದೆ. 2018–19ನೇ ಸಾಲಿಗೆ ಬಿಡುಗಡೆಯಾಗಿದ್ದ ಒಟ್ಟು ರೂ 92.22 ಲಕ್ಷ ಅನುದಾನದಲ್ಲಿ ರೂ.87.98 ಲಕ್ಷಗಳು ಬಳಕೆಯಾಗಿರುತ್ತದೆ.

5. ಅಲ್ಪಸಂಖ್ಯಾತರ ಕ್ರಿಶ್ಚಿಯನ್ ಸಮುದಾಯದವರಿಗೆ ಚರ್ಚ್ ದುರಸ್ಥಿ ಮತ್ತು ಜೀರ್ಣೋದ್ಧಾರಕ್ಕಾಗಿ ಸಹಾಯಧನ:–

ಸರ್ಕಾರಿ ಆದೇಶ ಸಂಖ್ಯೆ: ಅಸಂಕಇ 70 ಎಂಡಿಎಸ್ 2011, ಬೆಂಗಳೂರು ದಿನಾಂಕ:19.09.2011ರ ಆದೇಶದಲ್ಲಿ ಕರ್ನಾಟಕ ರಾಜ್ಯದ ಚರ್ಚ್ ದುರಸ್ಥಿ ಮತ್ತು ನವೀಕರಣಕ್ಕೆ ಸಂಬಂಧಿಸಿದಂತೆ ಅನುದಾನವನ್ನು ಬಿಡುಗಡೆ ಮಾಡುವ ಕಾರ್ಯಕ್ರಮದಡಿ 2018–19ನೇ ಸಾಲಿಗೆ ಒಟ್ಟು 5 ಸಂಸ್ಥೆಗಳಿಗೆ ರೂ.91.50 ಲಕ್ಷಗಳ ಸಹಾಯಧನ ಬಿಡುಗಡೆಯಾಗಿದ್ದು, ಪೂರ್ಣ ಅನುದಾನ ಬಳಕೆಯಾಗಿರುತ್ತದೆ.

6. ಸ್ಮಶಾನ ಅಭಿವೃದ್ಧಿ ಯೋಜನೆ:–

ಕ್ರೈಸ್ತರ ಅಭಿವೃದ್ಧಿ ಯೋಜನೆಯಡಿ ಕ್ರಿಶ್ಚಿಯನ್ ಸಮುದಾಯದ ಸ್ಮಶಾನಗಳಿಗೆ ಆವರಣ ಗೋಡೆ ನಿರ್ಮಾಣ ಮತ್ತು ಈ ಸ್ಮಶಾನಗಳಿಗೆ ಮೂಲಭೂತ ಸೌಕರ್ಯವನ್ನು ಕಲ್ಪಿಸಲು ಸಹಾಯಧನ ನೀಡುವ ಕಾರ್ಯಕ್ರಮದಡಿ 2018–19ನೇ ಸಾಲಿಗೆ 5 ಸಂಸ್ಥೆಗಳಿಗೆ ಒಟ್ಟು ರೂ.85.25 ಲಕ್ಷಗಳ ಸಹಾಯಧನ ಬಿಡುಗಡೆಯಾಗಿದ್ದು, ಪೂರ್ಣ ಅನುದಾನ ಬಳಕೆಯಾಗಿರುತ್ತದೆ.

7. ಅಲ್ಪಸಂಖ್ಯಾತರ ಮುಸ್ಲಿಂ ಸಮುದಾಯದವರಿಗೆ ಶಾದಿಮಹಲ್ ಹಾಗೂ ಕ್ರಿಶ್ಚಿಯನ್ ಸಮುದಾಯದವರಿಗೆ ಸಮುದಾಯಭವನ ನಿರ್ಮಾಣ ಕಾರ್ಯಕ್ರಮ :–

ಅಲ್ಪಸಂಖ್ಯಾತರ ಮುಸ್ಲಿಂ ಸಮುದಾಯದವರಿಗೆ ಶಾದಿಮಹಲ್/ಸಮುದಾಯಭವನ ಯೋಜನೆಯಡಿ ರಾಜ್ಯದ ಮತೀಯ ಅಲ್ಪಸಂಖ್ಯಾತರ ಜನಾಂಗದವರು ಸಾಮಾಜಿ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ ಉತ್ತೇಜನ ನೀಡಲು ಸದರಿ ಸಮುದಾಯಗಳಿಗೆ ಶಾದಿಮಹಲ್/ಸಮುದಾಯಭವನಗಳ ನಿರ್ಮಾಣಕ್ಕೆ ಅನುದಾನ ಒದಗಿಸುವ ಕಾರ್ಯಕ್ರಮದಡಿ 2018–19ನೇ ಸಾಲಿನಲ್ಲಿ 1 ಶಾದಿಮಹಲ್‌ಗೆ ಒಟ್ಟು ರೂ.10.00 ಲಕ್ಷಗಳು ಹಾಗೂ ಕ್ರಿಶ್ಚಿಯನ್ ಸಮುದಾಯದವರ 09 ಸಮುದಾಯಭವನ ನಿರ್ಮಾಣಕ್ಕೆ ಜಿಲ್ಲೆಗೆ ಒಟ್ಟು ರೂ.268.52 ಲಕ್ಷ ಬಿಡುಗಡೆಯಾಗಿದ್ದು, ಅನುದಾನ ಪೂರ್ಣ ಬಳಕೆಯಾಗಿರುತ್ತದೆ.

8. ಜೈನ ಬಸದಿ ದುರಸ್ತಿ ಮತ್ತು ನವೀಕರಣಕ್ಕಾಗಿ ಸಹಾಯಧನ:–

ಜೈನ ಬಸದಿ ಮತ್ತು ನವೀಕರಣಕ್ಕೆ ಸಂಬಂಧಿಸಿದಂತೆ ಅನುದಾನವನ್ನು ಬಿಡುಗಡೆ ಮಾಡುವ ಕಾರ್ಯಕ್ರಮದಡಿ 2018–19ನೇ ಸಾಲಿಗೆ 1 ಸಂಸ್ಥೆಗೆ ಒಟ್ಟು ರೂ.10.00 ಲಕ್ಷಗಳ ಸಹಾಯಧನ ಬಿಡುಗಡೆ ಮಾಡಲಾಗಿದ್ದು, ಪೂರ್ಣ ಅನುದಾನ ಬಳಕೆಯಾಗಿರುತ್ತದೆ.

9. ವಿದ್ಯಾಸಿರಿ:–

ಸರ್ಕಾರಿ ಆದೇಶ ಸಂಖ್ಯೆ:ಎಂಡಬ್ಲ್ಯೂಡಿ 163 ಎಂಡಿಎಸ್ 2015 ಬೆಂಗಳೂರು ದಿನಾಂಕ:06.04.2017ರ ವಿದ್ಯಾಸಿರಿ ಯೋಜನೆಯು ವಿದ್ಯಾಭ್ಯಾಸ ಮಾಡುತ್ತಿರುವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಮೀಸಲಿರಿಸಲಾಗಿದೆ. ಮೆಟ್ರಿಕ್ ನಂತರ ಕೋರ್ಸ್‌ಗಳಲ್ಲಿ (ಪಿ.ಯು.ಸಿ ಯಿಂದ ಪಿ.ಹೆಚ್.ಡಿ ವರೆಗೂ) ಸರ್ಕಾರಿ, ಅನುದಾನ/ಅನುದಾನ ರಹಿತ ಕಾಲೇಜು/ಸಂಸ್ಥೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯದ ಸೌಕರ್ಯ ತಲುಪದೇ ಇರುವಂತಹ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ./–1500/– ರಂತೆ ಒಟ್ಟು ತಿಂಗಳಿಗೆ ಸಹಾಯಧನ ನೀಡುವ ಕಾರ್ಯಕ್ರಮದಡಿ 2018–19ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಸಮುದಾಯದವರಿಗೆ ರೂ. 20.17 ಲಕ್ಷ ಮೊತ್ತದ ಅನುದಾನದಲ್ಲಿ ಒಟ್ಟು 145 ವಿದ್ಯಾಥಿಗಳಿಗೆ ಸಹಾಯಧನ ಬಿಡುಗಡೆ ಮಾಡಲಾಗಿದೆ.

10. ಪ್ಯಾರಮೆಡಿಕಲ್, ಜಿ.ಎನ್.ಎಂ ಮತ್ತು ಬಿ.ಎಸ್ಸಿ ನರ್ಸಿಂಗ್ ವಿದ್ಯಾರ್ಥಿಗಳಿಗೆ ತರಬೇತಿ ಭತ್ಯೆ :–

ಅಲ್ಪಸಂಖ್ಯಾತರ ಪ್ಯಾರಮೇಡಿಕಲ್, ಬಿ.ಎಸ್ಸಿ ನರ್ಸಿಂಗ್ ಹಾಗೂ ಜಿ.ಎನ್.ಎಂ ಕೋರ್ಸ್‌ಗಳಲ್ಲಿ ತರಬೇತಿ ಪಡೆಯುತ್ತಿರುವ ಒಟ್ಟು 91 ವಿದ್ಯಾರ್ಥಿಗಳಿಗೆ ನಿರ್ವಹಣಾ, ಸಮವಸ್ತ್ರ, ಸೈಕ್ಯಾಟ್ರಿಕ್, ಕ್ಲೀನಿಕಲ್ ಹಾಗೂ ಇತರೆ ವೆಚ್ಚಗಳಿಗೆ ವಾರ್ಷಿಕ (ಐಣಟಥಿಣಟ) ಪ್ರತಿ ವಿದ್ಯಾರ್ಥಿಗೆ ಒಟ್ಟು ರೂ.35000/–ಗಳಂತೆ ಒಟ್ಟು ರೂ 31.85 ಲಕ್ಷ ಮೊತ್ತದ ಸಹಾಯಧನ ಮಂಜೂರು ಮಾಡಲಾಗಿರುತ್ತದೆ.

11. ಬಿದಾಯಿ ಯೋಜನೆ:–

ಆರ್ಥಿಕವಾಗಿ ಹಿಂದುಳಿದಿರುವ ಅಲ್ಪಸಂಖ್ಯಾತರ ಕುಟುಂಬದ ಹೆಣ್ಣು ಮಕ್ಕಳಿಗೆ, ವಿಚ್ಛೇದಿತ ಮಹಿಳೆಯರಿಗೆ ಹಾಗೂ ವಿಧವೆಯರಿಗೆ ಮದುವೆಯ ನಿಮಿತ್ತ ವಿವಾಹದ ಖರ್ಚು ವೆಚ್ಚಗಳು, ಜೀವನಾವಶ್ಯಕ ಸಾಮಗ್ರಿಗಳು ಅಥವಾ ನಗದು ಮತ್ತು ಸಾಮಗ್ರಿಗಳನ್ನು ನೀಡಲು ರೂ. 50000/–ಗಳ ಸಹಾಯಧನ ಒದಗಿಸುವ ಕಾರ್ಯಕ್ರಮದಡಿ 2018–19ನೇ ಸಾಲಿನಲ್ಲಿ ಮುಸ್ಲಿಂ ಸಮುದಾಯದವರಿಗೆ ರೂ. 67.00ಲಕ್ಷ, ಕ್ರಿಶ್ಚಿಯನ್ ಸಮುದಾಯದವರಿಗೆ ರೂ. 21.00 ಲಕ್ಷ ಹಾಗೂ ಜೈನ್ ಸಮುದಾಯದವರಿಗೆ ರೂ. 1.00 ಲಕ್ಷ ಒಟ್ಟಾರೆ 89.00 ಲಕ್ಷ ಅನುದಾನದಲ್ಲಿ ರೂ 89.00 ಲಕ್ಷ ಬಳಕೆಯಾಗಿದ್ದು ಒಟ್ಟು 178 ಫಲಾನುಭವಿಗಳಿಗೆ ಸಹಾಯಧನ ಬಿಡುಗಡೆ ಮಾಡಲಾಗಿದೆ.

12. ಅಲ್ಪಸಂಖ್ಯಾತರ ಕಾಲೋನಿಗಳಿಗೆ ಮೂಲಭೂತ ಸೌಕರ್ಯ :–

ಅಲ್ಪಸಂಖ್ಯಾತರ ಸಮುದಾಯದ ಶೇ 50 ರಷ್ಟು ಜನಸಂಖ್ಯೆ ವಾಸವಾಗಿರುವ ಕಾಲೋನಿ, ಮೊಹಲ್ಲಾ ಮತ್ತು ಪ್ರದೇಶಗಳಲ್ಲಿ ರಸ್ತೆ, ಚರಂಡಿ, ಕುಡಿಯುವ ನೀರು ಹಾಗೂ ಸಮುದಾಯ ಶೌಚಾಲಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸರ್ಕಾರದಿಂದ ಈ ಯೋಜನೆಯನ್ನು ಜಾರಿಗೊಳಿಸಲಾಗಿರುತ್ತದೆ. 2018–19ನೇ ಸಾಲಿನಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ತಲಾ ರೂ 25.00 ಲಕ್ಷಗಳಂತೆ, ಜಿಲ್ಲೆಗೆ ಒಟ್ಟು ರೂ. 125.00 ಲಕ್ಷ ಮೊತ್ತದ ಅನುದಾನ ಮಂಜೂರು ಆಗಿದ್ದು, ಸದರಿ ಅನುದಾನದಲ್ಲಿ ಜಿಲ್ಲೆಯ ಆಯಾ ವಿಧಾನಸಭಾ ಕ್ಷೇತ್ರಗಳ ಮಾನ್ಯ ಶಾಸಕರು ಸೂಚಿಸಿರುವ ಒಟ್ಟು 19 ಕಾಮಗಾರಿಗಳು ಅನುಷ್ಠಾನಗೊಳಿಸಲಾಗಿರುತ್ತದೆ.

13. ಮೌಲಾನಾ ಆಜಾದ್ ಮಾದರಿ ಶಾಲೆ :–

ಮೌಲಾನಾ ಆಜಾದ್ ಮಾದರಿ ಶಾಲೆಗಳನ್ನು 60 ಸಂಖ್ಯಾಬಲದೊಂದಿಗೆ 6ನೇ ತರಗತಿಯಿಂದ ಆಂಗ್ಲ ಮಾಧ್ಯಮದಲ್ಲಿ ಪ್ರಾರಂಭಿಸಲಾಗಿದೆ. ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ಶೇ. 75 ರಷ್ಟು ಹಾಗೂ ಇತರೆ ವಿದ್ಯಾರ್ಥಿಗಳಿಗೆ ಶೇ. 25ರ ಅನುಪಾತದಲ್ಲಿ ಪ್ರವೇಶ ನೀಡಲಾಗುವುದು. ಪ್ರತಿ ತರಗತಿಯಲ್ಲಿ ಹೆಣ್ಣು ಮಕ್ಕಳಿಗೆ ಶೇ. 50% ರಷ್ಟು ಮೀಸಲಿರಿಸಲಾಗಿದೆ. ಚಿಕ್ಕಮಗಳೂರು

ಜಿಲ್ಲೆಯಲ್ಲಿ 2018–19ನೇ ಸಾಲಿನಲ್ಲಿ 4 ಮೌಲಾನಾ ಆಜಾದ್ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ಶಾಲೆಗಳ ನಿರ್ವಹಣೆಗೆ ಬಿಡುಗಡೆಯಾಗಿದ್ದ ರೂ. 18.82 ಲಕ್ಷ ಅನುದಾನದಲ್ಲಿ ಪೂರ್ಣ ಅನುದಾನ ಬಳಕೆಯಾಗಿರುತ್ತದೆ.

14. ವಿದ್ಯಾರ್ಥಿವೇತನ :–

ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ :– ಅಲ್ಪಸಂಖ್ಯಾತರಲ್ಲಿ ವಿದ್ಯೆಯನ್ನು ಹೆಚ್ಚಿಸುವ ಉದ್ದೇಶದಿಂದ ಭಾರತ ಸರ್ಕಾರವು ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನದ ಯೋಜನೆಯನ್ನು ಹಮ್ಮಿಕೊಂಡು ಪೋಷಕರು/ವಿದ್ಯಾರ್ಥಿಗಳಲ್ಲಿ ಉತ್ಸಾಹ ಹೆಚ್ಚಿಸಿ ಅವರ ವಿದ್ಯಾಭ್ಯಾಸವನ್ನು ಮುಂದುವರೆಸಿಕೊಂಡು ಹೋಗಲು ಈ ವಿದ್ಯಾರ್ಥಿವೇತನವನ್ನು ನೀಡಲಾಗುತ್ತಿದೆ. ರಾಜ್ಯದ ಸರ್ಕಾರಿ/ ಅನುದಾನಿತ/ಅನುದಾನ ರಹಿತ ಖಾಸಗಿ ಶಾಲೆಗಳಲ್ಲಿ 1 ರಿಂದ 10ನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡುತ್ತಿರುವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ವರ್ಷ ಒಂದಕ್ಕೆ 1000 ರಿಂದ 5000 ದವರೆಗೆ ವಿದ್ಯಾರ್ಥಿವೇತನ ನೀಡಲಾಗುವುದು. ವಿದ್ಯಾರ್ಥಿವೇತನವನ್ನು ಸರ್ಕಾರದಿಂದ ನೇರವಾಗಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ವರ್ಗಾಯಿಸಲಾಗುವುದು.

ಮೆಟ್ರಿಕ್ ನಂತರ ವಿದ್ಯಾರ್ಥಿವೇತನ :– ಪಿಯುಸಿ, ಐ.ಟಿ.ಐ ಮತ್ತು ಡಿಪ್ಲೊಮೊ, ಡಿಗ್ರಿ, ನರ್ಸಿಂಗ್ ಹಾಗೂ ನಂತರದ ಎಲ್ಲಾ ಕೋರ್ಸುಗಳು, ಪದವಿ, ಸ್ನಾತಕೋತರ ಹಾಗೂ ಪಿ.ಹೆಚ್.ಡಿ ಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಈ ವಿದ್ಯಾರ್ಥಿವೇತನವನ್ನು ಪಡೆಯಲು ಅವಕಾಶವಿದೆ. ರಾಜ್ಯದ ಸರ್ಕಾರಿ/ಅನುದಾನಿತ/ಅನುದಾನ ರಹಿತ ಖಾಸಗಿ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ನೇರವಾಗಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ವರ್ಗಾಯಿಸಲಾಗುವುದು.

ಮೆರಿಟ್–ಕಮ್–ಮೀನ್ಸ್ ಆಧಾರಿತ ವಿದ್ಯಾರ್ಥಿವೇತನ :– ತಾಂತ್ರಿಕ ಹಾಗೂ ವೃತ್ತಿಪರ (Engineering, Medical, Unani, Ayurvedic, and Veterinary Subjects etc.) ವಿವಿಧ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳು ಈ ವಿದ್ಯಾರ್ಥಿವೇತನವನ್ನು ಪಡೆಯಲು ಅರ್ಹರಿರುತ್ತಾರೆ. ವಿದ್ಯಾರ್ಥಿವೇತನವನ್ನು ಸರ್ಕಾರದಿಂದ ನೇರವಾಗಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ವರ್ಗಾಯಿಸಲಾಗುವುದು.

ವಿದೇಶದಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ :– ರಾಜ್ಯದ ಅಲ್ಪಸಂಖ್ಯಾತರ ವಿದ್ಯಾರ್ಥಿಗಳು ಹೊರದೇಶಗಳಲ್ಲಿ ಉನ್ನತ ವ್ಯಾಸಂಗ ಮಾಡಲು ಸ್ನಾತಕೋತರ, ಪಿ.ಹೆಚ್.ಡಿ ಮತ್ತು ಡೆಂಟಲ್ ಕೋರ್ಸ್ ಮುಂತಾದವುಗಳನ್ನು ವಿದೇಶದ ವಿಶ್ವವಿದ್ಯಾನಿಲಯಗಳಲ್ಲಿ ವ್ಯಾಸಂಗ ಮಾಡಲು ವಿದ್ಯಾರ್ಥಿವೇತನ ನೀಡುವ ಕಾರ್ಯಕ್ರಮವನ್ನು ಕರ್ನಾಟಕ ಸರ್ಕಾರದಿಂದ ಹಮ್ಮಿಕೊಳ್ಳಲಾಗಿದೆ. ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನ 6.00 ಲಕ್ಷಕ್ಕಿಂತ ಕಡಿಮೆ ಇರುವಂತಹ ವಿದ್ಯಾರ್ಥಿಗಳಿಗೆ 2 ವರ್ಷಕ್ಕೆ ಗರಿಷ್ಠ 20.00 ಲಕ್ಷ ಮತ್ತು 6.00 ಲಕ್ಷಕ್ಕಿಂತ ಅಧಿಕ 15.00 ಲಕ್ಷ ವಾರ್ಷಿಕ ವರಮಾನದ ವಿದ್ಯಾರ್ಥಿಗಳಿಗೆ 2 ವರ್ಷಕ್ಕೆ 10.00 ಲಕ್ಷ ವಿದ್ಯಾರ್ಥಿವೇತನವನ್ನು ನೀಡಲಾಗುವುದು. ಈ ವಿದ್ಯಾರ್ಥಿವೇತನವನ್ನು ವಿದ್ಯಾರ್ಥಿಯ 1 ಅಥವಾ 2 ವರ್ಷಗಳ ಅವಧಿಗೆ ಮಾತ್ರ ನೀಡಲಾಗುವುದು. ವಿದ್ಯಾರ್ಥಿವೇತನವನ್ನು ಸರ್ಕಾರದಿಂದ ನೇರವಾಗಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ವರ್ಗಾಯಿಸಲಾಗುವುದು.

ಜಿಲ್ಲಾ ಅಧಿಕಾರಿ,
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಚಿಕ್ಕಮಗಳೂರು.

ಕೃಷಿ ಇಲಾಖೆ,

ವಾರ್ಷಿಕ ಆಡಳಿತ ವರದಿ 2018–19

ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಟ್ಟು ಭೌಗೋಳಿಕ ವಿಸ್ತೀರ್ಣ 722075 ಹೆಕ್ಟೇರ್ ಇದ್ದು, 200485 ಹೆಕ್ಟೇರ್ ಅರಣ್ಯ ಪ್ರದೇಶವನ್ನು, 311833 ಹೆಕ್ಟೇರ್ ಸಾಗುವಳಿ ಪ್ರದೇಶವನ್ನು ಹೊಂದಿರುತ್ತದೆ. ಜಿಲ್ಲೆಯಲ್ಲಿ ಅತಿಸಣ್ಣ ರೈತರ ಸಂಖ್ಯೆ 134046 ಇದ್ದು, ಅವರು 62582 ಹೆಕ್ಟೇರ್ ಪ್ರದೇಶ ಹೊಂದಿರುತ್ತಾರೆ. ಸಣ್ಣ ರೈತರು 55867 ಇದ್ದು, 76814 ಹೆಕ್ಟೇರ್ ಪ್ರದೇಶ ಹೊಂದಿರುತ್ತಾರೆ. ದೊಡ್ಡ ರೈತರು 38747 ಇದ್ದು, 172437 ಹೆಕ್ಟೇರ್ ಪ್ರದೇಶ ಹೊಂದಿರುತ್ತಾರೆ. ಒಟ್ಟು 228660 ರೈತ ಕುಟುಂಬಗಳು 311833 ಹೆಕ್ಟೇರ್ ಪ್ರದೇಶವನ್ನು ಸಾಗುವಳಿ ಮಾಡುತ್ತಿರುತ್ತಾರೆ.

ಜಿಲ್ಲೆಯಲ್ಲಿ ಪ್ರತಿ ಹೋಬಳಿಗೊಂದರಂತೆ ಒಟ್ಟು 34 ರೈತ ಸಂಪರ್ಕ ಕೇಂದ್ರಗಳಿದ್ದು, ಇಲಾಖೆಯ ಎಲ್ಲಾ ಕೃಷಿ ಚಟುವಟಿಕೆಗಳು ಮತ್ತು ಯೋಜನೆಗಳ ಅನುಷ್ಠಾನ ರೈತ ಸಂಪರ್ಕ ಕೇಂದ್ರಗಳ ಮೂಲಕ ನಡೆಯುತ್ತದೆ. 14 ಸಹಾಯಕ ಕೃಷಿ ನಿರ್ದೇಶಕರ ಹುದ್ದೆಯಲ್ಲಿ ಪ್ರಸ್ತುತ 9 ಸಹಾಯಕ ಕೃಷಿ ನಿರ್ದೇಶಕರು ಕಾರ್ಯನಿರ್ವಹಿಸುತ್ತಿದ್ದಾರೆ. 58 ಕೃಷಿ ಅಧಿಕಾರಿಗಳ ಹುದ್ದೆಯಲ್ಲಿ ಪ್ರಸ್ತುತ 38 ಕೃಷಿ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. 81 ಸಹಾಯಕ ಕೃಷಿ ಅಧಿಕಾರಿಗಳ ಹುದ್ದೆಯಲ್ಲಿ ಪ್ರಸ್ತುತ 27 ಸಹಾಯಕ ಕೃಷಿ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.

ಜಿಲ್ಲೆಯ ವಾರ್ಷಿಕ ಸರಾಸರಿ ಮಳೆಯು 1757 ಮಿ.ಮೀ. ಇದ್ದು, ಒಟ್ಟು ಮಳೆಯ ಶೇಕಡಾ 80 ರಷ್ಟು ನೈರುತ್ಯ ಮಾರುತಗಳಿಂದ ಜೂನ್ ಮಾಹೆಯಿಂದ ಸೆಪ್ಟೆಂಬರ್ ತಿಂಗಳವರೆಗೆ ಸ್ವೀಕೃತವಾಗುತ್ತದೆ. ಉಳಿದ ಶೇಕಡ 20 ಭಾಗವು ಈಶಾನ್ಯ ಮಾರುತಗಳಿಂದ ಅಕ್ಟೋಬರ್–ನವೆಂಬರ್ ತಿಂಗಳುಗಳಲ್ಲಿ ಸ್ವೀಕೃತವಾಗುತ್ತದೆ. ಶೃಂಗೇರಿ ತಾಲ್ಲೂಕಿನಲ್ಲಿ ಹೆಚ್ಚು ಮಳೆ ಬೀಳುತ್ತಿದ್ದು (ವಾಡಿಕೆ 4067 ಮಿ.ಮೀ.) ಕಡೂರು ತಾಲ್ಲೂಕಿನಲ್ಲಿ ಅತೀ ಕಡಿಮೆ ಮಳೆ ಅಂದರೆ ವಾರ್ಷಿಕವಾಗಿ 641 ಮಿ.ಮೀ. ಮಳೆ ಬೀಳುತ್ತದೆ. 2018ರಲ್ಲಿ ಜಿಲ್ಲೆಯ ವಾಡಿಕೆ ಮಳೆ 1757 ಮಿ.ಮೀ.ಗೆ 2278 ಮಿ.ಮೀ(130%) ಮಳೆಯಾಗಿರುತ್ತದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ 2018–19 ನೇ ಸಾಲಿನ ವಿವಿಧ ಹಂಗಾಮಿನಲ್ಲಿ ಒಟ್ಟು 187085 ಹೆಕ್ಟೇರ್ ಗುರಿಯನ್ನು ಹೊಂದಿದ್ದು, 163040 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಮಾಡಲಾಗಿರುತ್ತದೆ. 118642 ಹೆಕ್ಟೇರ್ ಪ್ರದೇಶ ದಲ್ಲಿ ಏಕದಳ ಧಾನ್ಯ ಬೆಳೆ, 31610 ಹೆಕ್ಟೇರ್ ಪ್ರದೇಶ ದಲ್ಲಿ ದ್ವಿದಳಧಾನ್ಯ ಬೆಳೆ, 10153 ಹೆಕ್ಟೇರ್ ಎಣ್ಣೆಕಾಳು ಬೆಳೆ, ಹತ್ತಿ ಬೆಳೆ 1410 ಹೆಕ್ಟೇರ್ ಪ್ರದೇಶದಲ್ಲಿ, ಕಬ್ಬು ಬೆಳೆಯನ್ನು 1225 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗಿರುತ್ತದೆ.

ಜಿಲ್ಲಾ ಪಂಚಾಯಿತಿ ಕಾರ್ಯಕ್ರಮಗಳು

ಕೃಷಿ ಯಾಂತ್ರೀಕರಣ ಯೋಜನೆ (ಇತರೆ ಕೃಷಿ ಯೋಜನೆ): ಈ ಯೋಜನೆಗೆ ರೂ. 70.00 ಲಕ್ಷ ಆರ್ಥಿಕ ಕಾರ್ಯಕ್ರಮವಿರುತ್ತದೆ. ಜಿಲ್ಲೆಗೆ ಬಿಡುಗಡೆಯಾದ ರೂ. 70.00 ಲಕ್ಷಗಳಲ್ಲಿ ರೂ. 68.18 ಲಕ್ಷ ವೆಚ್ಚ ಭರಿಸಲಾಗಿದೆ. ಈ ಯೋಜನೆಯಡಿ ರಿಯಾಯಿತಿಯಲ್ಲಿ 10 ಮಿನಿ ಟ್ರ್ಯಾಕ್ಟರ್, 9 ಪವರ್ ಟಿಲ್ಲರ್, 51 ಭೂಮಿ ಸಿದ್ಧತೆ ಉಪಕರಣಗಳು, 113 ಸಸ್ಯ ಸಂರಕ್ಷಣಾ ಉಪಕರಣಗಳು, 2 ಬಿತ್ತನೆ ಉಪಕರಣಗಳು, 94 ಡೀಸೆಲ್ ಪಂಪ್‌ಸೆಟ್‌ಗಳು ಹಾಗೂ 52 ಪವರ್ ವೀಡರ್‌ಗಳನ್ನು ವಿತರಣೆ ಮಾಡಲಾಗಿದೆ.

ಬೇಸಾಯ ಸಂಬಂಧಿತ ಚಟುವಟಿಕೆಗಳು: ಈ ಯೋಜನೆಗೆ ರೂ. 21.00 ಲಕ್ಷ ಆರ್ಥಿಕ ಕಾರ್ಯಕ್ರಮವಿರುತ್ತದೆ. ಈ ಯೋಜನೆಯಡಿ ಬಿಡುಗಡೆಯಾದ ರೂ. 20.99 ಲಕ್ಷಗಳಲ್ಲಿ ರೂ. 20.01 ಲಕ್ಷ ವೆಚ್ಚ ಭರಿಸಲಾಗಿದೆ. ಜಿಲ್ಲೆಯಲ್ಲಿ ಒಟ್ಟು 34 ರೈತ

ಸಂಪರ್ಕ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಈ ಯೋಜನೆಯಡಿ ರೂ.17.74 ಲಕ್ಷ ಅನುದಾನವನ್ನು ರೈತ ಸಂಪರ್ಕ ಕೇಂದ್ರಗಳ ಬಾಡಿಗೆ ಮತ್ತು ರೈತ ಸಂಪರ್ಕಗಳ ನಿರ್ವಹಣಾ ವೆಚ್ಚಕ್ಕೆ ಭರಿಸಲಾಗಿದೆ. ಹಾಗೂ ಲಿಂಗದಹಳ್ಳಿ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ರೈತ/ರೈತ ಮಹಿಳೆಯರಿಗೆ 3 ದಿನಗಳ ಒಟ್ಟು 5 ತರಬೇತಿಗಳನ್ನು ಏರ್ಪಡಿಸಲಾಗಿದ್ದು ಒಟ್ಟು ರೂ. 2.27 ಲಕ್ಷ ವೆಚ್ಚ ಭರಿಸಲಾಗಿದೆ.

ಕೃಷಿ ಕಛೇರಿ ಕಟ್ಟಡಗಳು ಈ ಯೋಜನೆಗೆ ರೂ. 24.00 ಲಕ್ಷ ಆರ್ಥಿಕ ಕಾರ್ಯಕ್ರಮವಿರುತ್ತದೆ. ಈ ಅನುದಾನದಲ್ಲಿ ಸಹಾಯಕ ಕೃಷಿ ನಿರ್ದೇಶಕರು ಚಿಕ್ಕಮಗಳೂರು ಕಛೇರಿಯ ಕಟ್ಟಡ ನಿರ್ಮಾಣಮಾಡಲು ಬಳಕೆ ಮಾಡಿಕೊಳ್ಳಲಾಗಿದ್ದು, ಒಟ್ಟು ರೂ. 24.0 ಲಕ್ಷ ವೆಚ್ಚ ಭರಿಸಲಾಗಿರುತ್ತದೆ.

ಸಾವಯವ ಗೊಬ್ಬರ ಯೋಜನೆ : ಈ ಯೋಜನೆಗೆ ರೂ. 20.00 ಲಕ್ಷ ಆರ್ಥಿಕ ಕಾರ್ಯಕ್ರಮವಿರುತ್ತದೆ. ಬಿಡುಗಡೆಯಾದ ರೂ. 20.00 ಲಕ್ಷಗಳಲ್ಲಿ ರೂ. 19.84 ಲಕ್ಷ ವೆಚ್ಚ ಭರಿಸಲಾಗಿದೆ. ರೈತರಿಗೆ ಶೇ.50 ರಿಯಾಯಿತಿ ದರದಲ್ಲಿ 423 ಹೆಕ್ಟೇರ್ ಎರೆಹುಳು ಗೊಬ್ಬರ, 173 ಹೆಕ್ಟೇರ್ ಸಾವಯವ ಗೊಬ್ಬರ ಹಾಗೂ 208 ಹೆಕ್ಟೇರ್ ಪ್ರದೇಶಕ್ಕೆ ಡಯಾಂಚ ಹಸಿರೆಲೆ ಗೊಬ್ಬರ ಬೀಜವನ್ನು ವಿತರಿಸಲಾಗಿರುತ್ತದೆ. ಒಟ್ಟು 805 ಹೆಕ್ಟೇರ್ ಪ್ರದೇಶದಲ್ಲಿ ಅನುಷ್ಠಾನಗೊಳಿಸಲಾಗಿದೆ.

ಕೃಷಿ ಕ್ಷೇತ್ರ ಮತ್ತು ಅಭಿವೃದ್ಧಿ ಕೇಂದ್ರಗಳು : ಲಿಂಗದಹಳ್ಳಿ ಬೀಜೋತ್ಪಾದನಾ ಕೇಂದ್ರದ ಅಭಿವೃದ್ಧಿಗೆ ರೂ.2.00 ಲಕ್ಷ ಆರ್ಥಿಕ ಕಾರ್ಯಕ್ರಮವಿದ್ದು, ಬಿಡುಗಡೆಯಾದ ರೂ.2.00 ಲಕ್ಷ ಅನುದಾನದಲ್ಲಿ ರೂ.1.86 ಲಕ್ಷವನ್ನು ವೆಚ್ಚ ಭರಿಸಲಾಗಿದ್ದು, ಬೀಜೋತ್ಪಾದನಾ ಕೇಂದ್ರದ ಅಭಿವೃದ್ಧಿಗಾಗಿ (ಟ್ರಾಕ್ಟರ್ ನಿರ್ವಹಣೆ ಹಾಗೂ ತಳಿವರ್ಧಕ ಬೀಜಗಳ ಖರೀದಿಗಾಗಿ) ಬಳಸಿಕೊಳ್ಳಲಾಗಿದೆ.

ಕೃಷಿ ತರಬೇತಿ ಪಾಠಶಾಲೆ : ಈ ಕಾರ್ಯಕ್ರಮಕ್ಕೆ ರೂ.6.87 ಲಕ್ಷ ಆರ್ಥಿಕ ಕಾಯಕ್ರಮವಿರುತ್ತದೆ. ಲಿಂಗದಹಳ್ಳಿಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ 17 ರೈತರ ಸಾಂಸ್ಥಿಕ ತರಬೇತಿ ಗಳನ್ನು (3 ದಿನಗಳ) ಮತ್ತು 2 ಅಧಿಕಾರಿಗಳ ತರಬೇತಿಯನ್ನು ಏರ್ಪಡಿಸಲಾಗಿದ್ದು ಒಟ್ಟು ರೂ. 6.27 ಲಕ್ಷ ವೆಚ್ಚ ಭರಿಸಲಾಗಿದೆ.

ತಾಲ್ಲೂಕು ಪಂಚಾಯಿತಿ ಕಾರ್ಯಕ್ರಮಗಳು

ಕೃಷಿ ಮೇಳ ಹಾಗೂ ವಸ್ತು ಪ್ರದರ್ಶನ : ಈ ಯೋಜನೆಯು ತಾಲ್ಲೂಕು ಪಂಚಾಯಿತಿ ಕಾರ್ಯಕ್ರಮವಾಗಿದ್ದು, ರೂ.1.00 ಲಕ್ಷ ಆರ್ಥಿಕ ಕಾರ್ಯಕ್ರಮವಿರುತ್ತದೆ. ಈ ಯೋಜನೆಯಡಿ ರೂ. 0.99 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಜಾತ್ರೆಗಳು ನಡೆಯುವ ಗ್ರಾಮೀಣ ಪ್ರದೇಶಗಳಲ್ಲಿ 6 ಕೃಷಿ ವಸ್ತು ಪ್ರದರ್ಶನ ಏರ್ಪಡಿಸಲಾಗಿದ್ದು, ರೂ. 0.686 ಲಕ್ಷ ವೆಚ್ಚ ಮಾಡಲಾಗಿದೆ.

ರೈತರಿಗೆ ಸಹಾಯ (ಸಸ್ಯ ಸಂರಕ್ಷಣೆ ಯೋಜನೆ) : ಈ ಯೋಜನೆಯು ತಾಲ್ಲೂಕು ಪಂಚಾಯಿತಿ ಕಾರ್ಯಕ್ರಮವಾಗಿದ್ದು, ರೂ.10.00 ಲಕ್ಷ ಆರ್ಥಿಕ ಕಾರ್ಯಕ್ರಮವಿರುತ್ತದೆ. ಈ ಯೋಜನೆಯಡಿ ಬಿಡುಗಡೆಯಾದ ರೂ.9.75 ಲಕ್ಷ ಅನುದಾನದಲ್ಲಿ ರೂ.9.27 ಲಕ್ಷಗಳ ವೆಚ್ಚ ಭರಿಸಿದ್ದು, ಶೇ.50 ರಿಯಾಯಿತಿ ದರದಲ್ಲಿ ಸಸ್ಯ ಸಂರಕ್ಷಣಾ ಔಷಧಿಗಳ ವಿತರಣೆ (1743 ಹೆಕ್ಟೇರಿಗೆ 8.29 ಲಕ್ಷ ವೆಚ್ಚ ಮಾಡಲಾಗಿದೆ) ಹಾಗೂ ಸಸ್ಯ ಸಂರಕ್ಷಣಾ ಉಪಕರಣಗಳನ್ನು (190 ಸ್ಪ್ರೇಯರ್‌ಗಳನ್ನು ವಿತರಿಸಿದ್ದು, ರೂ. 0.98 ಲಕ್ಷ ವೆಚ್ಚ ಭರಿಸಲಾಗಿದೆ) ರೈತರಿಗೆ ವಿತರಿಸಲಾಗಿದೆ.

ಜಂಟಿ ಕೃಷಿ ನಿರ್ದೇಶಕರು
ಚಿಕ್ಕಮಗಳೂರು.

2018–19 ನೇ ಸಾಲಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿನ ವಿವಿಧ ಯೋಜನೆಗಳ ಅಡಿಯಲ್ಲಿ ಸಾಧಿಸಿದ ಪ್ರಗತಿಯ ಆರ್ಥಿಕ ಮತ್ತು ಭೌತಿಕ ವಿವರಗಳು

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಾರ್ಯಕ್ರಮಗಳನ್ನು ಈ ಜಿಲ್ಲೆಯಲ್ಲಿ ಕಾರ್ಯರೂಪಕ್ಕೆ ತರಲು 7 ಸಾರ್ವಜನಿಕ ಆಸ್ಪತ್ರೆಗಳು (ಜಿಲ್ಲಾ ಆಸ್ಪತ್ರೆಯೂ ಸೇರಿದಂತೆ) 5 ಸಮುದಾಯ ಆರೋಗ್ಯ ಕೇಂದ್ರಗಳು, 89 ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಕುಷ್ಠರೋಗಗಳಿಗೆ ಚಿಕಿತ್ಸೆ ಸಲುವಾಗಿ 1 ಬಹು ಔಷಧಿ ಘಟಕ, ಮಲೇರಿಯಾ ನಿಯಂತ್ರಣ ಸಲುವಾಗಿ 1 ಜಿಲ್ಲಾ ಸರ್ವೇಕ್ಷಣಾ ಘಟಕ ಮತ್ತು ಜಿಲ್ಲಾ ಮಲೇರಿಯಾ ಕೇಂದ್ರವೂ ಮತ್ತು ರೋಗಗಳ ಪರಿಶೋಧನೆಗಾಗಿ 1 Sentinal ಪ್ರಯೋಗ ಶಾಲೆಯೂ ಕಾರ್ಯನಿರ್ವಹಿಸುತ್ತಿದೆ. ಕ್ಷಯ ರೋಗಿಗಳ ಪತ್ತೆ ಮತ್ತು ಚಿಕಿತ್ಸೆಗಾಗಿ ಪರಿಷ್ಕೃತ ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಘಟಕವು ಕಾರ್ಯನಿರತವಾಗಿದೆ. ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ಉಪ ಕೇಂದ್ರಗಳು ಒಟ್ಟು 365 ಇದ್ದು ನಗರ ಪ್ರಾಥಮಿಕ ಆರೋಗ್ಯ ಕೇಂದ್ರ 2 ಇದ್ದು ಮಹಿಳೆ ಮತ್ತು ಮಕ್ಕಳ ಆರೋಗ್ಯ ಹಾಗೂ ಇತರೆ ಚಟುವಟಿಕೆಗಳಲ್ಲಿ ಕಾರ್ಯನಿರ್ವಹಿಸುತ್ತಿದೆ.

ರಾಷ್ಟ್ರೀಯ ಕುಟುಂಬ ಕಲ್ಯಾಣ ಕಾರ್ಯಕ್ರಮ

ಜನಸಂಖ್ಯೆಯ ಸ್ಥಿರತೆ ಮತ್ತು ಅಭಿವೃದ್ಧಿಯನ್ನು ಮೂಲ ಉದ್ದೇಶವಾಗಿರಿಸಿಕೊಂಡು ಸಣ್ಣ ಕುಟುಂಬ ಪರಿಕಲ್ಪನೆಯಲ್ಲಿ ಶಾಶ್ವತ ಸಂತಾನ ನಿಯಂತ್ರಣ ಚಿಕಿತ್ಸೆಗೆ ಒಳ ಪಡುವವರಿಗೆ ಮತ್ತು ತಾತ್ಕಾಲಿಕ ವಿಧಾನಗಳನ್ನು ಅನುಸರಿಸುವವರಿಗೆ ಸೇವಾ ಸೌಲಭ್ಯವನ್ನು ನೀಡಲಾಗುವುದು. 2018–19 ನೇ ಸಾಲಿನಲ್ಲಿ ಸಂತಾನೋತ್ಪತ್ತಿ ಮತ್ತು ಮಗುವಿನ ಆರೋಗ್ಯ ಸೇವೆಗಳ ಕಾರ್ಯಕ್ರಮದ ಅಡಿಯಲ್ಲಿ ಪುರಯುಷರಿಗೆ ವ್ಯಾಸಕ್ಟಮಿ ಶಸ್ತ್ರಚಿಕಿತ್ಸೆ 04 ಹಾಗೂ ಮಹಿಳೆಯರಿಗೆ ಸಂತಾನಹರಣ ಶಸ್ತ್ರ ಚಿಕಿತ್ಸೆ 4387ನಡೆಸಲಾಗಿದೆ. ಅಂತರ ವಿಧಾನದನ್ವಯ 1601 ಮಹಿಳೆಯರಿಗೆ ಕಾಪರ್–ಟಿ ಅಳವಡಿಸಲಾಗಿದೆ.

–: ಸಾರ್ವತ್ರಿಕ ಲಸಿಕಾ ಕಾರ್ಯಕ್ರಮ :–

ಪ್ರತಿ ಗುರುವಾರ ಲಸಿಕಾ ದಿನವೆಂದು 0 ಯಿಂದ 1 ವರ್ಷದ ಮಕ್ಕಳಿಗೆ 8 ಮಾರಕ ರೋಗಗಳ ವಿರುದ್ಧ ಲಸಿಕೆಯನ್ನು ನೀಡುತಿದ್ದು, ಬಿ.ಸಿ.ಜಿ 12707 ಮಕ್ಕಳಿಗೆ ಪೆಂಟಾ ಮತ್ತು ಪೋಲಿಯೋ 15885 ಮಕ್ಕಳಿಗೆ ದಡಾರ 14553 ಮಕ್ಕಳಿಗೆ ಗರ್ಭಿಣಿ ಸ್ತ್ರೀಯರಿಗೆ 12628ಎರಡು ವರಸೆ ಟಿ.ಟಿ ಲಸಿಕೆಯನ್ನು ನೀಡಲಾಗಿದ್ದು, 13589ಗರ್ಭಿಣಿಯರನ್ನು ನೊಂದಾಯಿಸಿಕೊಂಡು ಅಗತ್ಯ ಸೇವೆಯನ್ನು ನೀಡಲಾಗಿದೆ, 2018–19 ನೇ ಸಾಲಿನಲ್ಲಿ 04 ತಾಯಿ ಮರಣಗಳು 79 ಶಿಶು ಮರಣಗಳು ಸಂಭವಿಸಿದ್ದು, ಇವುಗಳ ಕಾರಣಗಳ ಬಗ್ಗೆ ಪರಿಶೋಧನೆ ನಡೆಸಿ ಮರಣ ಪ್ರಮಾಣವನ್ನು ಕಡಿಮೆ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ

– : ಪೋಲಿಯೋ ನಿರ್ಮೂಲನ ಕಾರ್ಯಕ್ರಮ :–

2018–19 ಸಾಲಿನಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ಜಿಲ್ಲೆಯಾದ್ಯಂತ ದಿ: 10.03.2019 ರಿಂದ 13.03.2019ರ ವರೆಗೆ ಹಮ್ಮಿಕೊಂಡಿದ್ದು, 0 ಯಿಂದ 5 ವರ್ಷದೊಳಗಿನ ಮಕ್ಕಳಿಗೆ 96018 ಮಕ್ಕಳಿಗೆ ಪೋಲಿಯೋ ಹನಿ ಹಾಕಲಾಗಿದೆ ಶೇಕಡಾ 104.14 ರಷ್ಟು ಪ್ರಗತಿ ಸಾಧಿಸಲಾಗಿದೆ. ವಿಶ್ವ ಆರೋಗ್ಯ ಸಂಸ್ಥೆಯ ದಿನಾಂಕ: 24.03.2012 ರಂದು ಭಾರತವು ಕಠಟುಠ ಇಟಿ–ಜಜಟುಛಿ ದೇಶಗಳ ಪಟ್ಟಿಯಿಂದ ಹೊರತಾಗಿದ್ದು, ಇದೊಂದು ಮಹತ್ತರವಾದ ಸಾಧನೆಯಾಗಿರುತ್ತದೆ.

–: ಕುಷ್ಠರೋಗ ನಿರ್ಮೂಲನ ಕಾರ್ಯಕ್ರಮ :–

2018–19ಸಾಲಿನಲ್ಲಿ ರಾಷ್ಟ್ರೀಯ ಕುಷ್ಠರೋಗ ನಿಯಂತ್ರಣ ಕಾರ್ಯಕ್ರಮದಲ್ಲಿ ಒಟ್ಟು 11ಹೊಸ ರೋಗಗಿಗಳನ್ನು ಪತ್ತೆಹಚ್ಚಿದ್ದು, 14 ಜನ ಚಿಕಿತ್ಸೆ ಪಡೆಯುತ್ತಿದ್ದು, 7 ಜನ ಗುಣಮುಖರಾಗಿದ್ದಾರೆ.

–: ಕ್ಷಯರೋಗ ನಿಯಂತ್ರಣ ಕಾರ್ಯಕ್ರಮ : –

2018–19 ಸಾಲಿನಲ್ಲಿ ಪರಿಷ್ಕೃತ ಕ್ಷಯ ರೋಗ ನಿಯಂತ್ರಣ ಕಾರ್ಯಕ್ರಮದಲ್ಲಿ ಒಟ್ಟು ರೋಗಿಗಳ ಸಂಖ್ಯೆ 14809 ರೋಗಿಗಳಿಗೆ ಕಫ ಪರೀಕ್ಷೆ ನಡೆಸಲಾಗಿದ್ದು, ಅವರಲ್ಲಿ 893 ರೋಗಿಗಳಲ್ಲಿ ಕ್ಷಯ ರೋಗ ಪತ್ತೆ ಆಗಿದ್ದು ಎಲ್ಲರಿಗೂ ಚಿಕಿತ್ಸೆ ನೀಡಲಾಗಿದೆ 764 ಕ್ಷತ ರೋಗಿಗಳು

ಗುಣಮುಖರಾಗಿದ್ದು, 57 ರೋಗಿಗಳು ಮರಣ ಹೊಂದಿರುತ್ತಾರೆ ಹಾಗೂ ಜಿಲ್ಲೆ ಒಟ್ಟು 29 ಎಂ.ಡಿ.ಆರ್. ರೋಗಿಗಳಿಗೆ ಚಿಕಿತ್ಸೆಯನ್ನು ನೀಡುತ್ತಿದ್ದೆವೆ ಹಾಗೂ ಕ್ಷಯರೋಗ ನಿಯಂತ್ರಣಕ್ಕಾಗಿ ಹಲವಾರು ಅರಿವು ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

–: ಆರ್ಥಿಕ ಪ್ರಗತಿ : –

2018–19 ಸಾಲಿನಲ್ಲಿ ಲೆಕ್ಕಶೀರ್ಷಿಕೆ :– 2210 ವೈದ್ಯಕೀಯ ಮತ್ತು ಜನಾರೋಗ್ಯ ಇದರಡಿಯಲ್ಲಿ ಅನುದಾನ ವಾರ್ಷಿಕ 4008.16 ಲಕ್ಷ ಬಿಡುಗಡೆ ಆಗಿದ್ದು, ಇದರಲ್ಲಿ 3759.07 ಲಕ್ಷ ಖರ್ಚಾಗಿರುತ್ತದೆ.

–: ರಕ್ತ ಸುರಕ್ಷತಾ ಕಾರ್ಯಕ್ರಮ :–

ಜಿಲ್ಲೆಯಲ್ಲಿ 3 ರಕ್ತ ನಿಧಿ ಕೇಂದ್ರಗಳಿದ್ದು 2018–19 ನೇ ಸಾಲಿನಲ್ಲಿ ಒಟ್ಟು 52 ಸ್ವಯಂ ಪ್ರೇರಿತ ರಕ್ತದಾನ ಶಿಬಿರಗಳನ್ನು ಹಮ್ಮಿಕೊಂಡಿದ್ದು ಒಟ್ಟು 3990 ರಕ್ತದ ಯೂನಿಟ್ ಗಳನ್ನು ಸಂಗ್ರಹಿಸಲಾಗಿದ್ದು ರಕ್ತದ ಅವಶ್ಯಕತೆಯಿರುವ 3803 ಜನರಿಗೆ ರಕ್ತವನ್ನು ಪೂರೈಸಲಾಗಿದೆ. 6 ಸಾರ್ವಜನಿಕ ಆಸ್ಪತ್ರೆಗಳಲ್ಲಿ ರಕ್ತ ಶೇಖರಣಾ ಘಟಕಗಳನ್ನು ಪ್ರಾರಂಭಿಸಲಾಗಿದ್ದು, 2018–19 ನೇ ಸಾಲಿನಲ್ಲಿ ರಕ್ತದ ಅವಶ್ಯಕತೆಯಿರುವ 592 ಜನರಿಗೆ ರಕ್ತವನ್ನು ರಕ್ತ ಶೇಖರಣಾ ಘಟಕಗಳ ಮುಖಾಂತರ ಪೂರೈಸಲಾಗಿದೆ. ಮುಂದಿನ ದಿನಗಳಲ್ಲಿ ಉಳಿದ 1 ಸಾರ್ವಜನಿಕ ಆಸ್ಪತ್ರೆಗಳಲ್ಲಿ ರಕ್ತ ಶೇಖರಣಾ ಘಟಕಗಳನ್ನು ಪ್ರಾರಂಭಿಸಲಾಗುವುದು. ಜೂನ್ ಮಾಹೆಯಲ್ಲಿ ವಿಶ್ವ ರಕ್ತದಾನಿಗಳ ದಿನಾಚರಣೆ ಮತ್ತು ಅಕ್ಟೋಬರ್ ಮಾಹೆಯಲ್ಲಿ ರಾಷ್ಟ್ರೀಯ ಸ್ವಯಂ ಪ್ರೇರಿತ ರಕ್ತದಾನ ದಿನಾಚರಣೆಯನ್ನು 2018–19 ನೇ ಸಾಲಿನಲ್ಲಿ ಆಚರಿಸಲಾಯಿತು. ಆಗಸ್ಟ್ ಮಾಹೆಯಲ್ಲಿ ಅಂತರಾಷ್ಟ್ರೀಯ ಯುವ ದಿನಾಚರಣೆಯನ್ನು ಮತ್ತು ಜನವರಿ ಮಾಹೆಯಲ್ಲಿ ರಾಷ್ಟ್ರೀಯ ಯುವ ದಿನವನ್ನು ಯುವಕರಲ್ಲಿ ರಕ್ತದಾನದ ಕುರಿತು ಅರಿವು ಮೂಡಿಸುವ ಸಲುವಾಗಿ ಹಮ್ಮಿಕೊಳ್ಳಲಾಗಿತ್ತು.

– : ರಾಷ್ಟ್ರೀಯ ಏಡ್ಸ್ ನಿಯಂತ್ರಣ ಕಾರ್ಯಕ್ರಮ :–

ಜಿಲ್ಲೆಯಲ್ಲಿ 2018–19 ನೇ ಸಾಲಿನಲ್ಲಿ ಒಟ್ಟು 45,933 ಸಾಮಾನ್ಯ ಜನರಿಗೆ ಹಾಗೂ 16,9123 ಗರ್ಭಿಣಿಯರಿಗೆ ಹೆಚ್ಐವಿ ಆಪ್ತ ಸಮಾಲೋಚನೆ ಮತ್ತು ರಕ್ತ ಪರೀಕ್ಷೆಯನ್ನು ನಡೆಸಲಾಗಿದ್ದು ಅವರಲ್ಲಿ 224 ಜನರಿಗೆ ಹೆಚ್ಐವಿ ಸೋಂಕಿದೆ ಎಂದು ಪತ್ತೆಯಾಗಿದೆ. 2008 ರಿಂದ ಚಿಕಿತ್ಸೆಯನ್ನು ಪ್ರಾರಂಭಿಸಿದ್ದು 4270 ಸೋಂಕಿತರನ್ನು ನೋಂದಾಯಿಸಿಕೊಂಡಿದ್ದು ಅವರಲ್ಲಿ 2999 ಜನರಿಗೆ ಚಿಕಿತ್ಸೆಯನ್ನು ಪ್ರಾರಂಬಿಸಲಾಗಿದೆ. ಚಿಕಿತ್ಸೆ ಪ್ರಾರಂಬಿಸಿದವರಲ್ಲಿ 2112 ಜನರು ಜೀವಂತವಾಗಿದ್ದು ಚಿಕಿತ್ಸೆಯನ್ನು ಪಡೆಯುತ್ತಿದ್ದಾರೆ. ಹೆಚ್ಐವಿ ನಿಯಂತ್ರಣ–ಕ್ಕಾಗಿ ಹಲವಾರು ಅರಿವು ಕಾರ್ಯಕ್ರಮಗಳನ್ನು ಹಾಗೂ ತರಬೇತಿಗಳನ್ನು ನಡೆಸಲಾಗಿದೆ. ಬೀದಿನಾಟಕ ಕಲಾ ತಂಡದ ಮೂಲಕ 2018–19 ನೇ ಸಾಲಿನಲ್ಲಿ ಜಿಲ್ಲೆಯಲ್ಲಿ 15 ಹೆಚ್ಐವಿ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. 148 ಪ್ರೌಢ ಶಾಲೆ ಮತ್ತು 18 ಪದವಿ ಪೂರ್ವ ಕಾಲೇಜುಗಳಲ್ಲಿ ಹದಿಹರೆಯದವರ ಆರೋಗ್ಯ ಮತ್ತು ಹೆಚ್ಐವಿ ಅರಿವು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. 31 ಪದವಿ ಹಾಗೂ ಇತರೆ ಕಾಲೇಜುಗಳಲ್ಲಿ ರೆಡ್ ರಿಬ್ಬನ್ ಕ್ಲಬ್ ಗಳನ್ನು ಸ್ಥಾಪಿಸಿ ಹೆಚ್ಐವಿ/ ರಕ್ತದಾನ ಕುರಿತು ಯುವಕರಲ್ಲಿ ಜಾಗೃತಿ ಮೂಡಿಸಲಾಯಿತು. ಹೆಚ್ಐವಿ ಕಾರ್ಯಕ್ರಮವನ್ನು ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಜಿಲ್ಲೆಯಲ್ಲಿ 2018–19 ನೇ ಸಾಲಿನಲ್ಲಿ 148 ಅರಿವು ಕಾರ್ಯಕ್ರಮಗಳನ್ನು ವಿವಿದ ಇಲಾಖೆಗಳ ಅಧಿಕಾರಿಗಳು ಹಾಗೂ ನೌಕರರುಗಳಿಗೆ ಹಮ್ಮಿಕೊಳ್ಳಲಾಯಿತು.

ಡಿಸಂಬರ್ ಮಾಹೆಯಲ್ಲಿ ವಿಶ್ವ ಏಡ್ಸ್ ದಿನವನ್ನು ಜನಸಾಮಾನ್ಯರಲ್ಲಿ ಹೆಚ್ಐವಿ ಕುರಿತು ಅರಿವು ಮೂಡಿಸುವ ಸಲುವಾಗಿ ಜಾಥಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

–: ಅಂಧತ್ವ ನಿವಾರಣೆ : –

9 ರಿಂದ 10 ತಿಂಗಳಿನ ಮಕ್ಕಳಿಗೆ ಪ್ರತೀ ವರ್ಷ ಜನವರಿ ಮತ್ತು ಜುಲೈ ತಿಂಗಳಲ್ಲಿ ರಾತ್ರಿ ಕುರುಡು ಅಥವಾ ಇರುಳು ಕಣ್ಣು ತಡೆಯಲು ವಿಟಮಿನ್ ಎ ಅನ್ನಾಂಗ ದ್ರಾವಣವನ್ನು ಅಂಗನವಾಡಿ ಕೇಂದ್ರಗಳಲ್ಲಿ ಹಾಗೂ ಉಪ ಕೇಂದ್ರಗಳಲ್ಲಿ ಉಚಿತವಾಗಿ ನೀಡಲಾಗುತ್ತಿದೆ. ಜಿಲ್ಲೆಯಲ್ಲಿ ಈವರೆಗೆ 4514ಜನರಿಗೆ ಕಣ್ಣಿನಲ್ಲಿ ಪೊರೆ ಬಂದ ಅಂಧರಿಗೆ ಕಣ್ಣಿನಲ್ಲಿ ಮಸೂರ ಅಳವಡಿಸುವ (IOL) ಶಸ್ತ್ರ ಚಿಕಿತ್ಸೆ ಮಾಡಲಾಗಿದೆ. ಶಾಲಾ ಮಕ್ಕಳಿಗೆ 1ನೇ ತರಗತಿಯಿಂದ 10ನೇ ತರಗತಿಯವರೆಗೆ ದೃಷ್ಟಿ ದೋಷವುಳ್ಳ ಮಕ್ಕಳಿಗೆ ಒಟ್ಟು 1196 ಮಕ್ಕಳಿಗೆ ಕನ್ನಡಕವನ್ನು ವಿತರಿಸಲಾಗಿದೆ.

– : ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (N.H.M) : –

: ಜನನಿ ಸುರಕ್ಷಾ ಯೋಜನೆ :

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದಡಿಯಲ್ಲಿ ಜನನಿ ಸುರಕ್ಷಾ ಯೋಜನೆಯು ಮಹತ್ವಪೂರ್ಣ ಕಾರ್ಯಕ್ರಮವಾಗಿದ್ದು, ತಾಯಿ ಮತ್ತು ಶಿಶು ಮರಣದ ಪ್ರಮಾಣವನ್ನು ಗಣನೀಯವಾಗಿ ತಗ್ಗಿಸುವುದು. ಇದಲ್ಲದೇ ಕಡು ಬಡ ವರ್ಗಕ್ಕೆ ಸೇರಿದ ಗರ್ಭಿಣಿಯರಿಗೆ ಆಸ್ಪತ್ರೆಗಲ್ಲಿ ಹೆರಿಗೆ ಮಾಡಿಸಿಕೊಳ್ಳುವಂತೆ ಪ್ರೊತ್ಸಾಹಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶ. ಇದಕ್ಕೆ ಸಾಂಸ್ಥಿಕ ಹೆರಿಗೆಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಸಂಸ್ಥೆಯಲ್ಲಿ ಹೆರಿಗೆಯಾಗುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಬಡತನ ರೇಖೆಗಿಂತ ಕೆಳಗಿರುವ ಮಹಿಳೆಯರಿಗೆ ಮನೆ ಹೆರಿಗೆಗೆ 500 ರೂಪಾಯಿ ಆಸ್ಪತ್ರೆ ಹೆರಿಗೆಗೆ 700 ರೂಪಾಯಿಗಳು, ನಗರ ಪ್ರಾದೇಶದಲ್ಲಿ ಹೆರಿಗೆಯಾದವರಿಗೆ 600 ರೂಪಾಯಿಗಳು. 2018–19 ನೇ ಸಾಲಿನಲ್ಲಿ ಈ ಯೋಜನೆಯಲ್ಲಿ 6179 ಮಹಿಳೆಯರಿಗೆ 3,90,1800 ಲಕ್ಷ ಪ್ರೋತ್ಸಾಹಧನ ವಿತರಿಸಲಾಗಿದೆ.

–: ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮ (RBSK) :–

ಗ್ರಾಮಾಂತರ ಹಾಗೂ ನಗರ ಪ್ರದೇಶಗಳ ಎಲ್ಲಾ ಸರ್ಕಾರಿ, ಅನುದಾನಿತ ಶಾಲೆಗಳು, ಸರ್ಕಾರಿ ವಸತಿ ಶಾಲೆಗಳು(ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ), ಕೇಂದ್ರ ಸರ್ಕಾರದ ಶಾಲೆಗಳ 1 ರಿಂದ 12ನೇ ತರಗತಿಯ ಮಕ್ಕಳು ಹಾಗೂ ಅಂಗನವಾಡಿ ಕೇಂದ್ರಗಳಲ್ಲಿನ 0–6 ವರ್ಷದ ಮಕ್ಕಳ ಉಚಿತ ಆರೋಗ್ಯ ತಪಾಸಣೆ ಹಾಗೂ ಚಿಕಿತ್ಸೆಯನ್ನು ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದಡಿಯಲ್ಲಿ ಕಾರ್ಯನಿರ್ವಹಿಸುವ ವೈದ್ಯರ ತಂಡದಿಂದ ಒದಗಿಸಲಾಗುವುದು. 2018–19 ನೇ ಸಾಲಿನಲ್ಲಿ 103038ಶಾಲಾ ಮಕ್ಕಳ ಆರೊಗ್ಯ ತಪಾಸಣೆ ಮಾಡಲಾಗಿದ್ದು ಹಾಗೂ 90136 ಅಂಗನವಾಡಿ ಕೇಂದ್ರಗಳಲ್ಲಿರುವ ಮಕ್ಕಳನ್ನು 2 ಭಾರಿ ಆರೋಗ್ಯ ತಪಾಸಣೆ ಮಾಡಲಾಗಿರುತ್ತದೆ 2018–19 ನೇ ಸಾಲಿನಲ್ಲಿ ತೊಂದರೆ ಇರುವ ಮಕ್ಕಳುಸಂಖ್ಯೆ2711 ಇದುವರೆಗೂ ಶಸ್ತ್ರ ಚಿಕಿತ್ಸೆ ನೀಡಿದ ಮಕ್ಕಳ ಸಂಖ್ಯೆ 39 ಆಗಿರುತ್ತದೆ.

–: ಜನನಿ ಶಿಶು ಸುರಕ್ಷಾ ಕಾರ್ಯಕ್ರಮ :–

ಜನನಿ ಶಿಶು ಸುರಕ್ಷಾ ಕಾರ್ಯಕ್ರಮವು ಜಿಲ್ಲೆಯಲ್ಲಿ ಜಾರಿಗೊಳಿಸಿದ್ದು, ಈ ಕಾರ್ಯಕ್ರಮದಲ್ಲಿ ಎಲ್ಲಾ ಂ.ಕ.ಐ ಮತ್ತು ಃ.ಕ.ಐ ಫಲಾನುಭವಿಗಳಿಗೆ ಉಚಿತ ಹೆರಿಗೆ ಸೇವೆಗಳು, ಪ್ರಸವ ಪೂರ್ವ ತಪಾಸಣೆ, ಉಚಿತ ಔಷಧಿಗಳು, ಪ್ರಯೋಗಶಾಲೆ, ಉಚಿತ ಸಾರಿಗೆ ವ್ಯವಸ್ಥೆ, ಸೇವಾ ಶುಲ್ಕದಿಂದ ವಿನಾಯಿತಿ ನವ ಜಾತ ಶಿಶುಗಳಿಗೆ ಚಿಕಿತ್ಸೆ ಹಾಗೂ ಅಗತ್ಯ ಔಷಧಿಗಳು, ಬಳಕೆ ಸಾಮಾಗ್ರಿಗಳು, ಉನ್ನತ ಆಸ್ಪತ್ರೆಗಳಿಗೆ ಸಾರಿಗೆ ವ್ಯವಸ್ಥೆ, ಸೇವಾ ಶುಲ್ಕದಿಂದ ವಿನಾಯಿತಿ ನೀಡಲಾಗುವುದು. 2018–19 ನೇ ಸಾಲಿನಲ್ಲಿ ಔಷಧಿ11918, ಆಹಾರ 7002, ಪ್ರಯೋಗಾಲಯ 37489, ರಕ್ತ 464, ಸಾಗಾಣಿಕೆ 1230, ಫಲಾನಭವಿಗಳು ಪ್ರಯೋಜನ ಪಡೆದಿದು, ಒಟ್ಟು 10153801ವೆಚ್ಚವಾಗಿರುತ್ತದೆ.

–: 24X7 ಪ್ರಾಥಮಿಕ ಆರೋಗ್ಯ ಕೇಂದ್ರ:–

ಸಮುದಾಯಕ್ಕೆ ಹೆರಿಗೆ ಸೇವೆಗಳನ್ನು ನಿರಂತರವಾಗಿ ಒದಗಿಸುವ ಉದ್ದೇಶದಿಂದ 22ಪ್ರಾಥಮಿಕ ಆರೋಗ್ಯ ಕೇಂದ್ರಗಳು, ದಿನದ 24 ಗಂಟೆಯೂ ಹಾಗೂ ವಾರದ 7 ದಿವಸಗಳು ಉತ್ತಮ ಗುಣಮಟ್ಟದ ಹೆರಿಗೆ ಸೇವೆಯನ್ನು ಒದಗಿಸಲು ಈ ಯೋಜನೆಯನ್ನು ಜಾರಿಗೊಳಿಸಲಾಗಿದೆ. 2018–19 ನೇ ಸಾಲಿನಲ್ಲಿ 517 ಹೆರಿಗೆಗಳು 24ಘಿ7 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಆಗಿರುತ್ತವೆ.

–: ತಾಯಿ ಮಕ್ಕಳ ಅನುಸರಣೆಗೆ ತಂತ್ರಜ್ಞಾನ ಬಳಕೆ ಕಾರ್ಯಕ್ರಮ (M.C.T.S):–

ಗರ್ಭಿಣಿಯರನ್ನು ಶೀಘ್ರವಾಗಿ ದಾಖಲಿಸಿಕೊಂಡು ವಿಶಿಷ್ಟವಾದ ತಾಯಿ ಕಾರ್ಡನ್ನು ನೀಡಿ ಕಾಲ ಕಾಲಕ್ಕೆ ತಾಯಿ ಮಕ್ಕಳು ಪಡೆಯಬೇಕಾದ ಸೇವೆಗಳನ್ನು ಮೋಬೈಲ್ ಬಳಸಿ ಗರ್ಭಿಣಿಗೆ, ಕುಟುಂಬ ವರ್ಗದವರಿಗೆ ಹಾಗೂ ಆರೋಗ್ಯ ಸೇವಾ ಕಾರ್ಯ ಕರ್ತರಿಗೆ ಟಿಕಳುಹಿಸುವ ಮುಖಾಂತರ ಅನುಸರಣೆ ಮಾಡುವ ವಿಶಿಷ್ಟ ತಂತ್ರಜ್ಞಾನದಲ್ಲಿ2018–19 ನೇ ಸಾಲಿಗೆ ತಾಯಂದಿರು 13587ಮಕ್ಕಳು 12382 ನೊಂದಾಯಿಸಲಾಗಿದೆ.

–: ರಾಷ್ಟ್ರೀಯ ಮಧುಮೇಹ, ಕ್ಯಾನ್ಸರ್, ಹೃದಯ ಸಂಬಂಧಿತ (CVD) ಹಾಗೂ ಪಾರ್ಶ್ವವಾಯು ರೋಗಗಳ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಕಾಯಿದೆ :–

ಜಿಲ್ಲೆಯಲ್ಲಿ 2018–19 ನೇ ಸಾಲಿನಲ್ಲಿ ಒಟ್ಟು 4473 ರೋಗಿಗಳಿಗೆ ಮಧುಮೇಹ ಮತ್ತು ರಕ್ತದೊತ್ತಡ ಪರೀಕ್ಷೆಯನ್ನು ನಡೆಸಲಾಯಿತು ಅವರಲ್ಲಿ 6841 ಮಧುಮೇಹ ರೋಗಿಗಳನ್ನು ಹಾಗೂ 1284 ರಕ್ತದೊತ್ತಡ ರೋಗಿಗಳನ್ನು ಗುರುತಿಸಲಾಗಿದೆ ಹಾಗೂ ಕ್ಯಾನ್ಸರ್ 203 ಜನ ಪತ್ತೆ ಆಗಿದ್ದು, ಎಲ್ಲಾ ಶಸ್ತ್ರ ಚಿಕಿತ್ಸೆ ಸೇರಿದಂತೆ ವೈದ್ಯಕೀಯ ಚಿಕಿತ್ಸೆ ನಡೆಸಲಾಗಿದ್ದು, ಹೃದಯ ಸಂಬಂಧಿತ ರೋಗಿಗಳು 141 ಪತ್ತೆ ಆಗಿದ್ದು, ಇವರಲ್ಲಿ ಎಲ್ಲಾ ಮಂದಿಗೆ ವೈದ್ಯಕೀಯ ಚಿಕಿತ್ಸೆ ನೀಡಲಾಗಿರುತ್ತದೆ.

–: ತಾಯಿ ಮಕ್ಕಳ ಅನುಸರಣೆಗೆ ತಂತ್ರಜ್ಞಾನ ಬಳಕೆ ಕಾರ್ಯಕ್ರಮ (M.C.T.S) :–

ಗರ್ಭಿಣಿಯರನ್ನು ಶೀಘ್ರವಾಗಿ ದಾಖಲಿಸಿಕೊಂಡು ವಿಶಷ್ಟವಾದ ತಾಯಿ ಕಾರ್ಡನ್ನು ನೀಡಿ ಕಾಲ ತಾಯಿ ಮಕ್ಕಳು ಪಡೆಯಬೇಕಾದ ಸೇವೆಗಳನ್ನು ಮೊಬೈಲ್ ಬಳಸಿ ಗರ್ಭಿಣಿಗೆ, ಕುಟುಂಬ ವರ್ಗದವರಿಗೆ ಹಾಗೂ ಆರೋಗ್ಯ ಸೇವಾ ಕಾರ್ಯ ಕರ್ತರಿಗೆ ,ಎಸ್.ಎಂ.ಎಸ್. ಕಳುಹಿಸುವ ಮುಖಾಂತರ ಅನುಸರಣೆ ಮಾಡುವ ವಿಶಿಷ್ಟ ತಂತ್ರಜ್ಞಾನದಲ್ಲಿ 2016–17 ನೇ ಸಾಲಿಗೆ ತಾಯಂದಿರು 14692, ಮಕ್ಕಳು 10319 ನೊಂದಾಯಿಸಲಾಗಿದೆ.

ರಾಷ್ಟ್ರೀಯ ಮಧುಮೇಹ, ಕ್ಯಾನ್ಸರ್, ಹೃದಯ ಸಂಬಂಧಿತ (C.V.D) ಹಾಗೂ ಪಾರ್ಶ್ವವಾಯು ರೋಗಗಳ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಕಾರ್ಯಕ್ರಮ

ಜಿಲ್ಲೆಯಲ್ಲಿ 2018–19 ನೇ ಸಾಲಿನಲ್ಲಿ ಒಟ್ಟು 4473 ರೋಗಿಗಳಿಗೆ ಮಧುಮೇಹ ಮತ್ತು ರಕ್ತದೊತ್ತಡ ಪರೀಕ್ಷೆಯನ್ನು ನಡೆಸಲಾಯಿತು ಅವರಲ್ಲಿ 6841 ಮಧುಮೇಹ ರೋಗಿಗಳನ್ನು ಹಾಗೂ 1284 ರಕ್ತದೊತ್ತಡ ರೋಗಿಗಳನ್ನು ಗುರುತಿಸಲಾಗಿದೆ ಹಾಗೂ ಕ್ಯಾನ್ಸರ್ 203 ಜನ ಪತ್ತೆ ಆಗಿದ್ದು, ಎಲ್ಲಾ ಶಸ್ತ್ರ ಚಿಕಿತ್ಸೆ ಸೇರಿದಂತೆ ವೈದ್ಯಕೀಯ ಚಿಕಿತ್ಸೆ ನಡೆಸಲಾಗಿದ್ದು, ಹೃದಯ ಸಂಬಂಧಿತ ರೋಗಿಗಳು 141 ಪತ್ತೆ ಆಗಿದ್ದು, ಇವರಲ್ಲಿ ಎಲ್ಲಾ ಮಂದಿಗೆ ವೈದ್ಯಕೀಯ ಚಿಕಿತ್ಸೆ ನೀಡಲಾಗಿರುತ್ತದೆ.

–: ಸಾಂಕ್ರಾಮಿಕವಲ್ಲದ ರಾಷ್ಟ್ರೀಯ ರೋಗ ನಿಯಂತ್ರಣ ಕಾರ್ಯಕ್ರಮ :–

ರಕ್ತದೊತ್ತಡ ಮತ್ತು ಸಕ್ಕರೆ ಕಾಯಿಲೆ ಹೊಂದಿರುವ 8125 ರೋಗಿಗಳನ್ನು ಪರೀಕ್ಷಿಸಲಾಗಿದ್ದು ಹಾಗೂ ಸಕ್ಕರೆ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳ ಸಂಖ್ಯೆ 6841 ರಕ್ತದೊತ್ತಡದಿಂದ ಬಳಲುತ್ತಿರುವ ರೋಗಿಗಳ ಸಂಖ್ಯೆ 1284 ಕ್ಯಾನ್ಸರ್ ರೋಗದಿಂದ ಬಳಲುತ್ತಿರುವ ರೋಗಿಗಳ ಸಂಖ್ಯೆ 203 ಮೇಲ್ಕಂಡ ಫಲಾನುಭವಿಗಳಿಗೆ ಕಾಯಿಲೆಗಳನ್ನು ಪತ್ತೆ ಹಚ್ಚಿ ನಿರ್ದೇಶಿಸಲಾಗಿದೆ.

–: ಪ್ರಸವಪೂರ್ವ ಭ್ರೂಣ ಲಿಂಗ ಪತ್ತೆ ಕಾರ್ಯಕ್ರಮ :–

ಪ್ರಸವಪೂರ್ವ ಭ್ರೂಣಲಿಂಗ ಪತ್ತೆ ನಿಷೇದ ಶಾಸನ – 946ನ್ನು ಜಿಲ್ಲೆಯಲ್ಲಿ ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದು, ಸರ್ಕಾರದ ಸುತ್ತೋಲೆಯಂತೆ ಜಿಲ್ಲಾ ಸಲಹಾ ಸಮಿತಿಯನ್ನು ಹೊಸದಾಗಿ ರಚಿಸಲಾಗಿದ್ದು, ಈ ಜಿಲ್ಲೆಯಲ್ಲಿಈಗಾಗಲೆ 7 ಸರ್ಕಾರಿ ಹಾಗೂ 56 ಖಾಸಗಿ ಒಳಗೊಂಡ ಒಟ್ಟು 63 ಸ್ಕ್ಯಾನಿಂಗ್ ಕೇಂದ್ರಗಳು ನೊಂದಾವಣೆಗೊಂಡಿದ್ದು, ಇದರಲ್ಲಿ ಸರ್ಕಾರಿ ವಲಯದ 9 ಖಾಸಗಿ ವಲಯದ 1 ಕೇಂದ್ರಗಳು ವಿವಿಧ ಕಾರಣಗಳಿಂದ ರದ್ದುಗೊಂಡಿದ್ದು, ಈಗ ಹಾಲಿ 53 ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ ಈ ಸಾಲಿನಲ್ಲಿ ಎಲ್ಲಾ ಈ ಸಾಲಿನಲ್ಲಿ ಎಲ್ಲಾ ಸ್ಕ್ಯಾನಿಂಗ್ ಕೇಂದ್ರದ ವೈದ್ಯರುಗಳಿಗೆ ಒಂದು ದಿನದ ಕಾರ್ಯಗಾರ ಏರ್ಪಡಿಸಿ ಕೇಂದ್ರದಲ್ಲಿ ದಾಖಲೆಗಳನ್ನು ನಿರ್ವಹಿಸುವ ಹಾಗೂ ಹಾಗೂ Online ನಲ್ಲಿ ಕೇಂದ್ರಗಳನ್ನು ಅಳವಡಿಸುವ ಬಗ್ಗೆ ಹಾಗೂ Online ನಲ್ಲಿ From–ಈ Upload ಮಾಡುವ ಬಗ್ಗೆ ಹಾಗೂ Day end Summary ಮತ್ತು ಮಾಸಿಕ ವರದಿಯನ್ನು Online ನಲ್ಲಿ ದಾಖಲಿಸುವ ಬಗ್ಗೆ ಅವರಿಗೆ PPT ಮೂಲಕ ತರಬೇತಿ ನಿಡಲಾಗಿದೆ ಹಾಗೇಯೆ ಜಿಲ್ಲಾದ್ಯಾಂತ PC & PNDT ಕಾಯಿದೆ ಹಾಗೂ ಹೆಣ್ಣು ಮಗುವಿನ ಮಹತ್ವದ ಬಗ್ಗೆ ವಿವಿಧ ಶಾಲಾ ಕಾಲೇಜುಗಳಲ್ಲಿ ಹಾಗೂ ಸಾರ್ವಜನಿಕರಿಗೆ ಆರೋಗ್ಯ ಶಿಕ್ಷಣಮತ್ತು ಉಪನ್ಯಾಸ ಮೂಲಕ ಅರಿವು ಮೂಡಿಸಲಾಗಿದೆ.

ರಾಷ್ಟ್ರೀಯ ಕೀಟಜನ್ಯ ರೋಗ ನಿಯಂತ್ರಣ ಕಾರ್ಯಕ್ರಮ

–: ರಾಷ್ಟ್ರೀಯಾ ಮಲೇರಿಯಾ ನಿಯಂತ್ರಣ ಕಾರ್ಯಕ್ರಮ :–

ರಾಷ್ಟ್ರೀಯ ಮಲೇರಿಯಾ ನಿಯಂತ್ರಣ ಕಾರ್ಯಕ್ರಮದಲ್ಲಿ 2018–19ನೇ ಸಾಲಿನಲ್ಲಿ ಒಟ್ಟು 140560ರಕ್ತಲೇಪನಗಳನ್ನು ಸಂಗ್ರಹಿಸಿ ಪರೀಕ್ಷಿಸಿ ಪಿ.ವಿ– 17, ಪಿ.ಎಫ್–1, ಮಿಶ್ರ 0 ಒಟ್ಟು 18ಮಲೇರಿಯಾ ಪ್ರಕರಣಗಳನ್ನು ಪತ್ತೆಹಚ್ಚಿ ತೀವ್ರ ಚಿಕಿತ್ಸೆ ನೀಡಲಾಗುತ್ತಿದೆ.

–: ಡೆಂಗ್ಯು ನಿಯಂತ್ರಣ ಕಾರ್ಯಕ್ರಮ :–

2018–19ನೇ ಸಾಲಿನಲ್ಲಿ 275 ಸಂಶಯಾಸ್ಪದ ಪ್ರಕರಣಗಳು ವರದಿಯಾಗಿದ್ದು, 251 ರಕ್ತದ ಮಾದರಿಗಳನ್ನು ಪರೀಕ್ಷಿಸಿದಾಗ 69 ಡೆಂಗ್ಯೂ ಪ್ರಕರಣಗಳು ವರದಿಯಾಗಿರುತ್ತದೆ.

–: ಚಿಕುಂಗುನ್ಯಾ ನಿಯಂತ್ರಣ ಕಾರ್ಯಕ್ರಮ :–

2018–19ನೇ ಸಾಲಿನಲ್ಲಿ 68 ಸಂಶಯಾಸ್ಪದ ಪ್ರಕರಣಗಳು ವರದಿಯಾಗಿದ್ದು, 68ರಕ್ತದ ಮಾದರಿಗಳನ್ನು ಪರೀಕ್ಷಿಸಿದಾಗ 14 ಚಿಕುಂಗುನ್ಯಾಪ್ರಕರಣ ವರದಿಯಾಗಿರುತ್ತದೆ.ಈ ಎಲ್ಲಾ ಕೀಟಜನ್ಯ ರೋಗಗಳ ನಿಯಂತ್ರಣಕ್ಕಾಗಿ ಲಾರ್ವಾ ಸಮೀಕ್ಷೆ ಕೈಗೊಂಡು ಸೊಳ್ಳೆ ಉತ್ಪತ್ತಿ ತಾಣಗಳನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಿ ಸಮುದಾಯಕ್ಕೆ ರೋಗಗಳ ನಿಯಂತ್ರಣದ ಬಗ್ಗೆ ಆರೋಗ್ಯ ಶಿಕ್ಷಣವನ್ನು ನೀಡಿ ಅರಿವು ಮೂಡಿಸಲಾಗುತ್ತಿದೆ. ಆ ಪ್ರತಿನಿಧಿಗಳಿಗೆ ಅಡ್ವೋಕೇಶಿ 38 WMD, VHSC ಸಭೆಗಳ ಮೂಲಕ ನಿಯಂತ್ರಣ ಕಾರ್ಯಕ್ರಮಗಳ ಬಗ್ಗೆ ಅರಿವು ಮೂಡಿಸಿ ಅವರ ಸಹಕಾರವನ್ನು ಪಡೆದು ರೋಗಗಳನ್ನು ನಿಯಂತ್ರಿಸಲಾಗುತ್ತಿದೆ. ನಿಂತ ನೀರಿನ ತಾಣಗಳಿಗೆ ಗಪ್ಪಿ ಮತ್ತು ಗಂಬೂಸಿಯ ಲಾರ್ವಾಹಾರಿ ಮೀನುಗಳನ್ನು ಬಿಡಲಾಗಿದೆ, ಸಮುದಾಯಕ್ಕೆ ಸೊಳ್ಳೆ ಕಡಿತದಿಂದ ಪಾರಾಗುವ ಸ್ವಯಂ ರಕ್ಷಣಾ ವಿಧಾನಗಳಾದ ಜೈವಿಕ ಸಾಂಪ್ರದಾಯಿಕ, ರಾಸಾಯನಿಕ,ವಿಧಾನಗಳ ಬಗ್ಗೆ ಅರಿವು ಮೂಡಿಸಿ ಅಳವಡಿಸಿಕೊಳ್ಳಲು ತಿಳಿಸಲಾಗಿದೆ.

– : H1 N1 (ಹಂದಿಜ್ವರ) :–

2018–19 ನೇ ಸಾಲಿನಲ್ಲಿ ಯಾವುದೇ ಪ್ರಕರಣಗಳು ವರದಿಯಾಗಿಲ್ಲ

– : ಮಂಗನ ಕಾಯಿಲೆ (ಕೆ.ಎಫ್.ಡಿ) :–

2018–19 ನೇ ಸಾಲಿನಲ್ಲಿ ಯಾವುದೇ ಪ್ರಕರಣಗಳು ವರದಿಯಾಗಿಲ್ಲ

– : ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮ :–

ಜಿಲ್ಲೆಯಲ್ಲಿ 2015–16 ನೇ ಸಾಲಿನಲ್ಲಿ ಒಟ್ಟು 13204 ರೋಗಿಗಳಿಗೆ ಕಫ ಪರೀಕ್ಷೆಯನ್ನು ನಡೆಸಲಾಗಿದ್ದು, ಅವರಲ್ಲಿ 949 ರೋಗಿಗಳಲ್ಲಿ ಕ್ಷಯರೋಗವು ಪತ್ತೆಯಾಗಿದ್ದು, ಎಲ್ಲರಿಗೂ ಚಿಕಿತ್ಸೆಯನ್ನು ನೀಡಲಾಗಿದೆ. 2015–16 ನೇ ಸಾಲಿನಲ್ಲಿ 890 ಕ್ಷಯ ರೋಗಿಗಳು ಗುಣಮುಖರಾಗಿದ್ದು, 64 ರೋಗಿಗಳು ಮರಣಹೊಂದಿರುತ್ತಾರೆ. ಹಾಗೂ ಜಿಲ್ಲೆಯಲ್ಲಿ ಒಟ್ಟು 19 ಎಂ.ಡಿ.ಆರ್. ರೋಗಿಗಳಿಗೆ ಚಿಕಿತ್ಸೆಯನ್ನು ನೀಡುತ್ತಿದ್ದೇವೆ. ಕ್ಷಯ ರೋಗ ನಿಯಂತ್ರಣಕ್ಕಾಗಿ ಹಲವಾರು ಅರಿವು ಕಾರ್ಯಕ್ರಮಗಳನ್ನು ನಡೆಸಲಾಗಿದೆ.

–: ರಾಷ್ಟ್ರೀಯ ಕುಷ್ಟರೋಗ ನಿಯಂತ್ರಣ ಕಾರ್ಯಕ್ರಮ :–

ಜಿಲ್ಲೆಯಲ್ಲಿ 2015–16 ನೇ ಸಾಲಿನಲ್ಲಿ ಒಟ್ಟು 23 ಪ್ರಕರಣಗಳು ಕಂಡು ಬಂದಿದ್ದು ಚಿಕಿತ್ಸೆ ನೀಡಲಾಗಿದೆ. 12 ರೋಗಿಗಳು 2015–16ನೇ ಸಾಲಿನಲ್ಲಿ ಗುಣಮುಖರಾಗಿದ್ದಾರೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ
ಕಲ್ಯಾಣಾಧಿಕಾರಿ, ಚಿಕ್ಕಮಗಳೂರು

–: ಆಯುಷ್ ಇಲಾಖೆ : –

ಚಿಕ್ಕಮಗಳೂರು ಜಿಲ್ಲಾ ಪಂಚಾಯಿತಿ ಅಧೀನದಲ್ಲಿ ಆಯುಷ್ ಇಲಾಖೆಯು ಜಿಲ್ಲಾ ಆಯುಷ್ ಕಛೇರಿಯು ಕಾರ್ಯ ನಿರ್ವಹಿಸುತ್ತಿದ್ದು ಜಿಲ್ಲೆಯಲ್ಲಿ 03 ತಾಲ್ಲೂಕು ಮಟ್ಟದ ಆಯುರ್ವೇದ ಆಸ್ಪತ್ರೆಗಳು, 41 ಆಯುರ್ವೇದ ಚಿಕಿತ್ಸಾಲಯಗಳು ಹಾಗೂ 01 ಯುನಾನಿ ಚಿಕಿತ್ಸಾಲಯ 01 ಪ್ರಕೃತಿ ಚಿಕಿತ್ಸಾಲಯ, 01 ಹೋಮಿಯೋಪತಿ ಚಿಕಿತ್ಸಾಲಯವು ಆಯುಷ್ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿವೆ.

2018–19 ನೇ ಸಾಲಿನ ಸಾಧನೆಯ ಕಿರು ಚಿತ್ರ:–

ಹೊರರೋಗಿಗಳ ಮಾಹಿತಿ :–

2018–19 ನೇ ಸಾಲಿನಲ್ಲಿ ಜಿಲ್ಲೆಯಲ್ಲಿರುವ ಸರ್ಕಾರಿ ಆಯುರ್ವೇದ, ಯುನಾನಿ, ಹೊಮಿಯೋಪತಿ, ಪ್ರಕೃತಿ ಚಿಕಿತ್ಸಾಲಯಗಳಲ್ಲಿ ಒಟ್ಟು 2,94,325 ರೋಗಿಗಳನ್ನು ತಪಾಸಣೆ ಮಾಡಿ ಆಯುಷ್ ಪದ್ದತಿಯಲ್ಲಿ ಚಿಕಿತ್ಸೆ ಹಾಗೂ ಔಷಧಿ ವಿತರಣೆ ಮಾಡಲಾಗಿದೆ.

ಐಇಸಿ ಕಾರ್ಯಕ್ರಮ:–

1)2018–19 ನೇ ಸಾಲಿನಲ್ಲಿ ಐಇಸಿ ಕಾರ್ಯಕ್ರವಗಳನ್ನು ಈ ಕೆಳಕಂಡ ಗ್ರಾಮಗಳಲ್ಲಿ ನಡೆಸಿರುವ ಮಾಹಿತಿ

ಕಾರ್ಯಕ್ರಮದ ಹೆಸರು	ಕಾರ್ಯಕ್ರಮ ನಡೆದ ಸ್ಥಳ	ಕಾರ್ಯಕ್ರಮಗಳ ಸಂಖ್ಯೆ
ಮನೆಮದ್ದು ಕಾರ್ಯಕ್ರಮ	ಕೆರೆಕಟ್ಟೆ, ಮೇಗೂರು, ಎಸ್.ಮಾದಾಪುರ, ದೊಡ್ಡಪಟ್ಟಣಗೆರೆ, ಕೆರೆಸಂತೆ, ಅಂತರಘಟ್ಟೆ, ಶಿವನಿ.ಆರ್. ಎಸ್, ಉದ್ದೆಬೋರನಹಳ್ಳಿ, ಬಾವಿಕೆರೆ, ಜಿ.ಯರದಕೆರೆ	10
ಆಯುಷ್ ಆರೋಗ್ಯ ಶಿಬಿರ	ಅಣೇಗೆರೆ, ನಿಡುವಳ್ಳಿ, ನಂದಿ, ನಂದಿಬಟ್ಟಲು, ಹಾದೀಕೆರೆ, ತರೀಕೆರೆ, ದಂದೂರು, ಅಂಬಳೆ, ಹೊಸಹಳ್ಳಿಪೇಟೆ, ಸೋಮನಹಳ್ಳಿ, ಎಮ್ಮೆದೊಡ್ಡಿ, ದೇವವೃಂದ	12
ತಾಲ್ಲೂಕು ಮಟ್ಟದ ಆಯುಷ್ ಸೆಮಿನಾರ್	ಹಾದೀಕೆರೆ, ಮಾಚಗೊಂಡನಹಳ್ಳಿ, ಅಂತರಘಟ್ಟೆ	03
ಅಂತರಾಷ್ಟ್ರೀಯ ಯೋಗ ದಿನಾಚರಣೆ	ಚಿಕ್ಕಮಗಳೂರು	01
	ಒಟ್ಟು	26

1) ಜಿಲ್ಲಾ ಮಟ್ಟದಲ್ಲಿ ಆಯುಷ್ ಆಸ್ಪತ್ರೆಯು ಜಿಲ್ಲಾ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು (CSS Scheme) ಪಂಚಕರ್ಮ, ಹೋಮಿಯೋಪತಿ, ಪ್ರಕೃತಿ ಚಿಕಿತ್ಸೆ, ಯುನಾನಿ ಚಿಕಿತ್ಸೆ, ಮೂಲಕ ರೋಗಿಗಳಿಗೆ ಚಿಕಿತ್ಸೆ ಹಾಗೂ ಔಷಧಿಗಳನ್ನು ನೀಡಲಾಗುತ್ತಿದೆ.

2) ಆಯುಷ್ ವೈದ್ಯಾಧಿಕಾರಿಗಳ ಸಭೆಯನ್ನು ಪ್ರತಿ ತಿಂಗಳು ಜಿಲ್ಲಾ ಆಯುಷ್ ಕಛೇರಿ ಚಿಕ್ಕಮಗಳೂರು ಇಲ್ಲಿ ನಡೆಸಲಾಗಿದೆ.

3) ರಾಷ್ಟ್ರೀಯ ಕಾರ್ಯಕ್ರಮಗಳು :–

ಜಿಲ್ಲೆಯ ಎಲ್ಲಾ ಆಯುಷ್ ವೈದ್ಯರುಗಳು ತಾಲೂಕು ಆರೋಗ್ಯಾಧಿಕಾರಿಗಳ ಮೂಲಕ ನಡೆಯುವ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳಾದ ಪಲ್ಸ್ ಪೋಲಿಯೋ, ಮಲೇರಿಯಾ, ಕ್ಷಯರೋಗ ನಿವಾರಣ, ಕುಷ್ಠರೋಗ ನಿಯಂತ್ರಣ ಇತ್ಯಾದಿ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ. ಅಲ್ಲದೆ ಸುವರ್ಣ ಆರೋಗ್ಯ ಚೈತನ್ಯ ಕಾರ್ಯಕ್ರಮ ಹಾಗೂ ತಮ್ಮ ಚಿಕಿತ್ಸಾಲಯ ವ್ಯಾಪ್ತಿಯಲ್ಲಿ ಬರುವ ಅಂಗನವಾಡಿ, ಶಾಲಾ ಕಾಲೇಜು, ವಿದ್ಯಾರ್ಥಿ ನಿಲಯಗಳಲ್ಲಿ ವಿದ್ಯಾರ್ಥಿಗಳ ಆರೋಗ್ಯ ತಪಾಸಣೆಯನ್ನು ನಿಯಮಿತವಾಗಿ ಮಾಡುತ್ತಿದ್ದಾರೆ.

ಆರ್ಥಿಕ ಪ್ರಗತಿ:–

2018–19 ನೇ ಸಾಲಿನಲ್ಲಿ ವೇತನಕ್ಕಾಗಿ ಜಿಲ್ಲಾ ಪಂಚಾಯಿತಿ ಲೆಕ್ಕ ಶೀರ್ಷಿಕೆ 2210 ವೈದ್ಯಕೀಯ ಮತ್ತು ಜನಾರೋಗ್ಯ ಇದರ ಅಡಿಯಲ್ಲಿ ರೂ.596.65 ಲಕ್ಷ ಬಿಡುಗಡೆ ಆಗಿದ್ದು ಇದರಲ್ಲಿ ರೂ: 486.75 ಲಕ್ಷ ಖರ್ಚಾಗಿರುತ್ತದೆ.

ಔಷಧ ಖರೀದಿ ಬಗ್ಗೆ.

2018–19 ನೇ ಸಾಲಿನಲ್ಲಿ ಜಿಲ್ಲಾ ಪಂಚಾಯಿತಿ ಲೆಕ್ಕ ಶೀರ್ಷಿಕೆ: 2210–00–101–0–37 (ಔಷಧಿ) ಯೋಜನೇತರ ಲೆಕ್ಕ ಶೀರ್ಷಿಕೆಯಡಿ ರೂ.28.89 ಗಳು ಬಿಡುಗಡೆಯಾಗಿರುತ್ತದೆ.

ಈ ಅನುದಾನದಲ್ಲಿ ಸರ್ಕಾರದ ಆದೇಶದ ಅನ್ವಯ ಐಎಂಪಿಸಿಎಲ್, ಬೆಂಗಳೂರು ಹಾಗೂ ಔಷಧಿ, ಕೇರಳ ಇವರು ಔಷಧಿಗಳನ್ನು ಸರಬರಾಜು ಮಾಡಿರುವ ಔಷಧಿಗಳಿಗಾಗಿ ಒಟ್ಟು ರೂ: 30.90 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

2018–19 ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ. 2210–00–105–0–38 (ಯೋಜನೆ) ಗಳಲ್ಲಿ ಚಿಕಿತ್ಸಾಲಯಗಳ ಕಟ್ಟಡ, ಸುಣ್ಣ, ಬಣ್ಣ, ಕಾಂಪೌಂಡ್ ನಿರ್ಮಾಣ ಇತ್ಯಾದಿಗಾಗಿ ರೂ.48.00 ಲಕ್ಷ ಬಿಡುಗಡೆಯಾಗಿರುತ್ತದೆ.

ಸಿಬ್ಬಂದಿ ವಿವರಗಳು :–

ಕ್ರಮ ಸಂಖ್ಯೆ	ಹುದ್ದೆಗಳು	ವೇತನ ಶ್ರೇಣಿ	ಮಂಜೂರಾದ ಹುದ್ದೆಗಳು	ಭರ್ತಿಯಾದ ಹುದ್ದೆಗಳು	ಖಾಲಿಯಿರುವ ಹುದ್ದೆಗಳು
1	ಜಿಲ್ಲಾ ಆಯುಷ್ ಅಧಿಕಾರಿಗಳು	38100–55200	1	1	–
2	ವೈದ್ಯಾಧಿಕಾರಿಗಳು	28100–50100	48	37	11
3	ಸಹಾಯಕ ಆಡಳಿತಾಧಿಕಾರಿಗಳು	40900–78200	1	–	1
4	ಅಧೀಕ್ಷಕರು	37900–70850	1	–	1
5	ಶುಶ್ರೂಷಕರು	17650–32000	5	2	3
6	ಫಾರ್ಮಾಸಿಸ್ಟ್	14550–26700	18	2	16
7	ಕಿ.ಮಆ.ಸ	12500–24000	4	1	3
8	ಪ್ರ.ದ.ಸ	14550–26700	1	1	–
9	ದ್ವಿ.ದ.ಸ	11600–21000	2	–	1
10	ಗ್ರೂಪ್ ಡಿ	9600–14550	50	12	36
	ಒಟ್ಟು		131	56	75

ಜಿಲ್ಲಾ ಆಯುಷ್ ಅಧಿಕಾರಿ
ಚಿಕ್ಕಮಗಳೂರು

–: ತೋಟಗಾರಿಕೆ ಇಲಾಖೆ :–

ಪೀಠಿಕೆ:– ಚಿಕ್ಕಮಗಳೂರು ಜಿಲ್ಲೆಯು ನೈಸರ್ಗಿಕವಾಗಿ ಸಂಪದ್ಭರಿತ ಜಿಲ್ಲೆಯಾಗಿದ್ದು ಪ್ರಸಿದ್ಧವಾದ ಪುಣ್ಯ ಕ್ಷೇತ್ರಗಳನ್ನು, ಪ್ರೇಕ್ಷಣೀಯ ಸ್ಥಳಗಳನ್ನು ಮತ್ತು ಕುದುರೆಮುಖ ಖನಿಜ ಸಂಪತ್ತು ಗಣಿಗಳನ್ನೊಳಗೊಂಡಿದೆ. ಈ ಜಿಲ್ಲೆಯ ಹೆಚ್ಚಿನ ವಿಸ್ತೀರ್ಣವು ಮಲೆನಾಡು ಪ್ರದೇಶಗಳನ್ನು ಒಳಗೊಂಡಿರುವುದರಿಂದ ಮಲೆನಾಡು ಜಿಲ್ಲೆಯೆಂದೇ ಪ್ರಸಿದ್ಧಿಯಾಗಿದೆ. ಜಿಲ್ಲೆಯ ಕೇಂದ್ರ ಸ್ಥಾನವಾದ ಚಿಕ್ಕಮಗಳೂರು ರಾಜ್ಯದ ರಾಜಧಾನಿಯಿಂದ 251 ಕಿಲೋ ಮೀಟರ್ ದೂರದಲ್ಲಿದೆ. ಚಿಕ್ಕಮಗಳೂರು ಜಿಲ್ಲೆಯು ಕರ್ನಾಟಕ ರಾಜ್ಯದ ದಕ್ಷಿಣ ಪಶ್ಚಿಮ ಭಾಗದಲ್ಲಿರುವ ಜಿಲ್ಲೆಯಾಗಿರುತ್ತದೆ. ಈ ಜಿಲ್ಲೆಯು 12.54 ರಿಂದ 13.54 ಉತ್ತರ ಅಕ್ಷಾಂಶ ಮತ್ತು 74.04 ರಿಂದ 72.22 ಪೂರ್ವ ರೇಖಾಂಶದವರೆಗು ಹಬ್ಬಿರುತ್ತದೆ. ಪೂರ್ವ, ಪಶ್ಚಿಮವಾಗಿ 136 ಕಿಲೋ ಮೀಟರ್ ಹಾಗು ಉತ್ತರ ದಕ್ಷಿಣವಾಗಿ 55.5 ಕಿಲೋ ಮೀಟರ್ ವರೆಗು ಆವೃತವಾಗಿದೆ. ಜಿಲ್ಲೆಯು ಪೂರ್ವದಲ್ಲಿ ಹಾಸನ ಮತ್ತು ಚಿತ್ರದುರ್ಗ ಜಿಲ್ಲೆಗಳಿಂದಲೂ, ಪಶ್ಚಿಮದಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಂದಲೂ ಹಾಗು ಉತ್ತರ ಮತ್ತು ದಕ್ಷಿಣದಲ್ಲಿ ಕ್ರಮವಾಗಿ ಶಿವಮೊಗ್ಗ, ದಾವಣಗೆರೆ ಮತ್ತು ಹಾಸನ ಜಿಲ್ಲೆಗಳಿಂದಲೂ ಆವೃತಗೊಂಡಿರುತ್ತದೆ. ಜಿಲ್ಲೆಯ ಬಾಬಾಬುಡನ್‌ಗಿರಿ ದತ್ತಾತ್ರೆಯ ಬೆಟ್ಟದ ಪ್ರದೇಶವು ಸಮುದ್ರ ಮಟ್ಟಕ್ಕಿಂತ 1066.80 ಮೀಟರ್ ಗಳಿಂದ 1219.20 ಮೀಟರ್ ಎತ್ತರದಲ್ಲಿದೆ. ಆದರೆ ಪೂರ್ವ ಮೈದಾನ ಮತ್ತು ಪಶ್ಚಿಮ ಕಣಿವೆಗಳ ಇಳಿಜಾರು ಪ್ರದೇಶಗಳ ಎತ್ತರ ಸಮುದ್ರ ಮಟ್ಟಕ್ಕಿಂತ ಕೇವಲ 790 ಮೀಟರ್ ವರೆಗೆ ಇರುತ್ತದೆ. ಚಿಕ್ಕಮಗಳೂರು ಜಿಲ್ಲೆಯು ಒಟ್ಟು 7 ತಾಲ್ಲೂಕುಗಳನ್ನು ಒಳಗೊಂಡಿದ್ದು, ಇದರಲ್ಲಿ ತರೀಕೆರೆ, ಕಡೂರು ಮತ್ತು ಭಾಗಶಃ ಚಿಕ್ಕಮಗಳೂರು ಮೈದಾನ ಪ್ರದೇಶವಾಗಿರುತ್ತದೆ. ಉಳಿದ ತಾಲ್ಲೂಕುಗಳಾದ ಶೃಂಗೇರಿ, ನರಸಿಂಹರಾಜಪುರ, ಕೊಪ್ಪ, ಮೂಡಿಗೆರೆ ಹಾಗು ಭಾಗಶಃ ಚಿಕ್ಕಮಗಳೂರು ಮಲೆನಾಡು ಪ್ರದೇಶವಾಗಿರುತ್ತದೆ. ಚಿಕ್ಕಮಗಳೂರು ಜಿಲ್ಲೆ 34 ಹೋಬಳಿಗಳು, 227 ಗ್ರಾಮ ಪಂಚಾಯಿತಿಗಳು ಹಾಗು 1117 ಹಳ್ಳಿಗಳನ್ನು ಒಳಗೊಂಡಿರುತ್ತದೆ. 2001 ರ ಜನಗಣತಿಯ ಪ್ರಕಾರ ಜಿಲ್ಲೆಯು ಒಟ್ಟು 11,40,905 ಜನ ಸಂಖ್ಯೆ ಹೊಂದಿದ್ದು, ಪುರುಷರು 5,74,911(50.39%), ಮಹಿಳೆಯರು 5,65,994(49.6%), ಗ್ರಾಮೀಣ ಜನಸಂಖ್ಯೆ 9,18,181 (80.47%), ನಗರ ಜನಸಂಖ್ಯೆ 2,22,724 (19.52%) ಗಳಷ್ಟಿರುತ್ತದೆ. ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣವು 7201 ಚದರ ಮೀಟರ್ (722075 ಹೆಕ್ಟೇರ್) ಗಳಷ್ಟಿರುತ್ತದೆ. ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ಶೇ 27.77 ಭಾಗ ಅಂದರೆ 200485 ಪ್ರದೇಶ ಅರಣ್ಯದಿಂದ ಕೂಡಿದೆ. ಜಿಲ್ಲೆಯಲ್ಲಿ ಬೇಸಾಯಕ್ಕೆ ಯೋಗ್ಯವಾದ ಜಮೀನು 3,19,790 ಹೆಕ್ಟೇರ್ ಗಳಷ್ಟಿರುತ್ತದೆ. ಜಿಲ್ಲೆಯಲ್ಲಿ ತೋಟಗಾರಿಕೆ ಬೆಳೆಗಳನ್ನು 1,28,869 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದ್ದು, ಉತ್ಪಾದನೆ 6,23,292 ಟನ್ ಗಳಷ್ಟಿರುತ್ತದೆ. ಜಿಲ್ಲೆಯಲ್ಲಿ ಒಟ್ಟು 2,10,577 ಸಂಖ್ಯೆ ಭೂ ಹಿಡುವಳಿದಾರರು ಇದ್ದು, ಇದರಲ್ಲಿ ಅತಿಸಣ್ಣ ಭೂ ಹಿಡುವಳಿದಾರರು (<1 ಹೆಕ್ಟೇರ್), 1,18,736 ಸಂಖ್ಯೆ, ಸಣ್ಣ ಭೂ ಹಿಡುವಳಿದಾರರು (1–2 ಹೆಕ್ಟೇರ್) 53800 ಸಂಖ್ಯೆ, ಅರೆ ಮಧ್ಯಮ ಭೂ ಹಿಡುವಳಿದಾರರು (2–4 ಹೆಕ್ಟೇರ್ 26065 ಸಂಖ್ಯೆ, ಮಧ್ಯಮ ಭೂ ಹಿಡುವಳಿದಾರರು (4–10 ಹೆಕ್ಟೇರ್) 9951 ಸಂಖ್ಯೆ, ದೊಡ್ಡ ಭೂ ಹಿಡುವಳಿದಾರರು (>10 ಹೆಕ್ಟೇರ್) 2025 ಸಂಖ್ಯೆಯಷ್ಟಿರುತ್ತಾರೆ.

* ಜಿಲ್ಲೆಯು ಮಲೆನಾಡು ಮತ್ತು ಮೈದಾನ ತಾಲ್ಲೂಕುಗಳನ್ನು ಒಳಗೊಂಡಿದ್ದು, ಮಲೆನಾಡು ತಾಲ್ಲೂಕುಗಳಾದ ಶೃಂಗೇರಿ, ನರಸಿಂಹರಾಜಪುರ, ಕೊಪ್ಪ, ಮೂಡಿಗೆರೆ ಹಾಗೂ ಭಾಗಶಃ ಚಿಕ್ಕಮಗಳೂರಿನಲ್ಲಿ ಅತಿ ಹೆಚ್ಚು ಮಳೆ ಬೀಳುತ್ತದೆ. ಉಳಿದಂತೆ ಮೈದಾನ ತಾಲ್ಲೂಕುಗಳಾದ ತರೀಕೆರೆ, ಕಡೂರು ಹಾಗು ಭಾಗಶಃ ಚಿಕ್ಕಮಗಳೂರು ತಾಲ್ಲೂಕುಗಳಲ್ಲಿ ಕಡಿಮೆ ಮಳೆಯಾಗುತ್ತದೆ. ಜಿಲ್ಲೆಯ ಸರಾಸರಿ ಮಳೆಯ ಪ್ರಮಾಣ 1886.4 ಮಿಲಿ ಮೀಟರ್ ಇರುತ್ತದೆ.
* ಜಿಲ್ಲೆಯ ವಾತಾವರಣವು ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಪ್ರಫುಲ್ಲವಾಗಿರುತ್ತದೆ. ವಾತಾವರಣ ತೇವಾಂಶವು ಸೆಪ್ಟೆಂಬರ್ ತಿಂಗಳಲ್ಲಿ ಹೆಚ್ಚಾಗಿದ್ದು (80%), ಫೆಬ್ರವರಿ ತಿಂಗಳಲ್ಲಿ ಕಡಿಮೆ ಇರುತ್ತದೆ. ವಾತಾವರಣದಲ್ಲಿನ ತೇವಾಂಶ ಬೇಸಿಗೆ ತಿಂಗಳಲ್ಲಿ 35^0C ಇದ್ದರೆ ಚಳಿಗಾಲದ ತಿಂಗಳುಗಳಲ್ಲಿ 8^0C ನಿಂದ 10^0 C ಇರುತ್ತದೆ.

* ಈ ಜಿಲ್ಲೆಯು ಕೆಂಪು ಜೇಡು ಮೇಲ್ಮಣ್ಣನ್ನು ಹೊಂದಿದ್ದು, ಕಬ್ಬಿಣ ಮತ್ತು ಅಲ್ಯೂಮಿನಿಯಂ ಅತಿ ಹೆಚ್ಚಾಗಿ ಹೊಂದಿದೆ. ಮಣ್ಣಿನ ಕ್ಷಾರತೆ 5.5 ನಿಂದ 6 ರಷ್ಟಿರುತ್ತದೆ.
* ಜಿಲ್ಲೆಯಲ್ಲಿ ತುಂಗಾ ಭದ್ರಾ, ಹೇಮಾವತಿ, ವೇದಾವತಿ, ನೇತ್ರಾವತಿ ಹಾಗೂ ಯಗಚಿ ನದಿಗಳು ಹರಿಯುತ್ತವೆ. ಜಿಲ್ಲೆಯಲ್ಲಿ ಕಾಲುವೆಗಳು. ಕೆರೆಗಳು, ಭಾವಿ, ಕೊಳವೆಭಾವಿ ಮತ್ತು ನದಿಗಳು ನೀರಾವರಿಯ ಮುಖ್ಯ ಮೂಲಗಳಾಗಿವೆ.
* ಜಿಲ್ಲೆಯಲ್ಲಿ ಕಬ್ಬಿಣ, ಮ್ಯಾಗ್ನೇಷಿಯಂ ಅದಿರುಗಳು ಹೇರಳವಾಗಿ ದೊರೆಯುತ್ತಿದ್ದು, ಕುದುರೆಮುಖ ಪ್ರದೇಶವು ಕಬ್ಬಿಣದ ಅದಿರಿಗೆ ಪ್ರಖ್ಯಾತವಾಗಿವೆ. ಉಳಿದಂತೆ ಆಹಾರ ಪದಾರ್ಥಗಳ ತಯಾರಿಕೆ. ರಾಸಾಯನಿಕ ವಸ್ತುಗಳ ತಯಾರಿ, ರಬ್ಬರ್ ಉದ್ಯಮಗಳನ್ನು ಈ ಜಿಲ್ಲೆಯಲ್ಲಿ ಸ್ಥಾಪಿಸಲಾಗಿದೆ. ಕಾಫಿ ಉದ್ಯಮ ಅತ್ಯಂತ ಪ್ರಮುಖ ವಾಣಿಜ್ಯ ಉದ್ಯಮವಾಗಿದ್ದು ಈ ಜಿಲ್ಲೆಯಲ್ಲಿ ಒಟ್ಟು 85,465 ಹೆಕ್ಟೇರ್ ಪ್ರದೇಶದಲ್ಲಿ ಕಾಫಿಯನ್ನು ಬೆಳೆಯಲಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ಕೃಷಿ ಆಧಾರಿತ ಉದ್ಯಮಗಳಾದ ಹಣ್ಣು ಮತ್ತು ತರಕಾರಿ ಸಂಸ್ಕರಣೆ, ವೆನಿಲ್ಲಾ ಸಂಸ್ಕರಣೆ, ಆಂಥೂರಿಯಂ ಬೇಸಾಯ, ಅಡಿಕೆ ಸಂಸ್ಕರಣೆ ಮುಂತಾದ ಉದ್ಯಮಗಳು ಹೆಚ್ಚಿನ ಮಹತ್ವ ಪಡೆದಿದೆ.

ಜಿಲ್ಲೆಯ ತೋಟಗಾರಿಕಾ ಬೆಳೆಗಳು

ಬೆಳೆ	ತಳಿಗಳು
ಈರುಳ್ಳಿ	ಬಳ್ಳಾರಿ ರೆಡ್, ಲೋಕಲ್
ಆಲೂಗಡ್ಡೆ	ಕುಫ್ರಿ ಜ್ಯೋತಿ, ಎ.ಟಿ.ಎಲ್–1,2
ಮಾವು	ಮಲ್ಲಿಕಾ, ಆಲಫಾನ್ಸೋ, ನೀಲಮ್
ಸಪೋಟ	ಕಾಲಿಪತ್ತಿ, ಕ್ರಿಕೆಟ್ ಬಾಲ್
ಬಾಳೆ	ಏಲಕ್ಕಿ ಬಾಳೆ, ಡ್ವಾರ್ಫ್ ಕ್ಯಾವೆಂಡಿಶ್, ರೊಬಸ್ಟಾ, ನೇನ್‌ದ್ರನ್, ಜಿ–9
ತೆಂಗು	ತಿಪಟೂರ್ ಟಾಲ್, ಅರಸೀಕರೆ ಟಾಲ್
ಅಡಿಕೆ	ತೀರ್ಥಹಳ್ಳಿ ಲೋಕಲ್
ಕಾಳುಮೆಣಸು	ಪಣಿಯೂರ್–1,2, ಕರಿಮುಂಡಾ
ಏಲಕ್ಕಿ	ಮೂಡಿಗೆರೆ–1, ನೆಲ್ಯಾಣಿ ಗೋಲ್ಡ್
ಶುಂಠಿ	ರಿಯೊ ಡಿ ಜನ್ಯೆರೊ, ಲೋಕಲ್
ವಿಳ್ಯದೆಲೆ	ಮೈಸೂರ್
ವೆನಿಲ್ಲಾ	ಲೋಕಲ್
ಆಂಥೂರಿಯಂ	ಟ್ರಾಪಿಕಲ್ ರೆಡ್, ಡಚ್ ತಳಿಗಳು
ಚೆಂಡುಹೂವು	ಆಫ್ರಿಕನ್ ಹಳದಿ, ಜೈಂಟ್ ಡಬಲ್, ಲೋಕಲ್
ಸೇವಂತಿಗೆ	ಎಲ್ಲೋ ಗೋಲ್ಡ್, ಇಂದಿರಾ ರವಿಕಿರಣ್. ಲೋಕಲ್, ರೆಡ್ ಗೋಲ್ಡ್

2. ಉಪ ನಿರ್ದೇಶಕರ ಕಛೇರಿಯ ವ್ಯಾಪ್ತಿಗೆ ಬರುವ ಕಛೇರಿಗಳು :

ಕ್ರ.ಸಂ.	ಕಛೇರಿಯ ಹೆಸರು	ಕೇಂದ್ರಸ್ಥಾನ
1.	ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾವ.) ಚಿಕ್ಕಮಗಳೂರು	ಚಿಕ್ಕಮಗಳೂರು
2.	ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ.) ಚಿಕ್ಕಮಗಳೂರು	ಚಿಕ್ಕಮಗಳೂರು
3.	ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ.) ಕಡೂರು	ಕಡೂರು
4.	ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ.) ಕೊಪ್ಪ	ಕೊಪ್ಪ
5.	ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ.) ಮೂಡಿಗೆರೆ	ಮೂಡಿಗೆರೆ
6.	ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ.) ತರೀಕೆರೆ	ತರೀಕೆರೆ
7.	ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ.) ನರಸಿಂಹರಾಜ ಪುರ	ನರಸಿಂಹರಾಜ ಪುರ
8.	ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ.) ಶೃಂಗೇರಿ	ಶೃಂಗೇರಿ

ಜಿಲ್ಲೆಯಲ್ಲಿ ತೋಟಗಾರಿಕಾ ಬೆಳೆಗಳ ವಿವರ :

2017–18 ನೇ ಸಾಲಿನಲ್ಲಿ ನ್ಧು ಯು 108075 ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕಾ ಬೆಳೆಯನ್ನು ಬೆಳೆಯಲಾಗುತ್ತಿದ್ದು, ಉತ್ಪಾದನೆ 537896 ಟನ್ ಗಳಷ್ಟಿರುತ್ತದೆ.

ಕ್ರ.ಸಂ.	ಬೆಳೆಗಳು	ವಿಸ್ತೀರ್ಣ (ಹೆ.)	ಉತ್ಪನ (ಟನ್)	ಇಳುವರಿ (ಟನ್/ಹೆ.)	ಮೌಲ್ಯ (ರೂ.ಲಕ್ಷ)
1.	ಹಣ್ಣಿನ ಬೆಳೆಗಳು	11426	194211	17	35006
2.	ತರಕಾರಿ ಬೆಳೆಗಳು	16207	288513	17.80	31668
3.	ಸಾಂಬಾರು ಬೆಳೆಗಳು	15010	26778	1.78	25664
4.	ತೋಟದ ಬೆಳೆಗಳು	80316.72	53475	0.67	144311
5.	ವಾಣಿಜ್ಯ ಪುಷ್ಪಗಳು	121.8	838.2	6.88	214.44
6	ಸುಗಂಧಿತ ಸಸ್ಯಗಳು	2	20	10	16
	ಒಟ್ಟು	**123083.52**	**123083.52**	**563835.2**	**54.13**

ತಾಲ್ಲೂಕುವಾರು ತೋಟಗಾರಿಕೆ ಬೆಳೆಗಳ ಮಾಹಿತಿ

ಕ್ರ.ಸಂ.	ತಾಲ್ಲೂಕು	ವಿಸ್ತೀರ್ಣ (ಹೆ.)	ಉತ್ಪಾದನೆ(ಟನ್)	ಇಳುವರಿ (ಟನ್/ಹೆ.)	ಮೌಲ್ಯ (ರೂ.ಲಕ್ಷ)
1.	ಚಿಕ್ಕಮಗಳೂರು	10919	130569	11.96	20080
2.	ಕಡೂರು	38662	82272	2.13	46348
3.	ಕೊಪ್ಪ	7589	22365	2.95	8727
4.	ಮೂಡಿಗೆರೆ	4726	44605	9.44	19333
5.	ತರೀಕೆರೆ	5107	14957	2.93	11097
6.	ನರಸಿಂಹರಾಜ ಪುರ	3844	19997	5.20	3815
7.	ಶೃಂಗೇರಿ	37227	223132	5.99	102039
	ಒಟ್ಟು	**108074**	**108075**	**537896**	**4.98**

ಚಿಕ್ಕಮಗಳೂರು ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿರುವ ತೋಟಗಾರಿಕೆ ಬೆಳೆಗಳ ವಿವರಗಳು :

1. ಚಿಕ್ಕಮಗಳೂರು : ತೆಂಗು, ಅಡಿಕೆ, ಬಾಳೆ, ಆಲೂಗೆಡ್ಡೆ, ತರಕಾರಿಗಳು ಹಾಗೂ ಅಲಂಕಾರಿಕ ಹೂವುಗಳು ಮತ್ತು ಸಾಂಬಾರು ಬೆಳೆಗಳು.
2. ಕಡೂರು : ತೆಂಗು, ಅಡಿಕೆ, ಬಾಳೆ, ಅರಿಶಿನ, ಶುಂಠಿ ಹಾಗೂ ತರಕಾರಿ ಬೆಳೆಗಳು.
3. ತರೀಕೆರೆ : ತೆಂಗು, ಅಡಿಕೆ, ಬಾಳೆ, ಅರಿಶಿನ, ಶುಂಠಿ, ವಿಳ್ಯೆದೆಲೆ ಹಾಗೂ ತರಕಾರಿ ಬೆಳೆಗಳು.
4. ಮೂಡಿಗೆರೆ : ಏಲಕ್ಕಿ, ಕಾಳು ಮೆಣಸು, ಅಡಿಕೆ. ಕೊಕೊ, ಬಾಳೆ, ಕಿತ್ತಳೆ, ವಿಳ್ಯೆದೆಲೆ ಹಾಗೂ ಸಾಂಬಾರು ಬೆಳೆಗಳು.
5. ಕೊಪ್ಪ : ಅಡಿಕೆ, ಕಾಳು ಮೆಣಸು, ಕೊಕೊ, ವಿಳ್ಯೆದೆಲೆ ಹಾಗೂ ಸಾಂಬಾರು ಬೆಳೆಗಳು.
6. ನರಸಿಂಹರಾಜ ಪುರ : ಏಲಕ್ಕಿ, ಕಾಳು ಮೆಣಸು, ಅಡಿಕೆ. ಕೊಕೊ, ಬಾಳೆ, ಕಿತ್ತಳೆ, ವಿಳ್ಯೆದೆಲೆ ಹಾಗೂ ಸಾಂಬಾರು ಬೆಳೆಗಳು.
7. ಶೃಂಗೇರಿ : ಅಡಿಕೆ, ಕೊಕೊ, ಬಾಳೆ, ಕಿತ್ತಳೆ, ವಿಳ್ಯೆದೆಲೆ, ಕಾಳು ಮೆಣಸು ಹಾಗೂ ಇತರೆ ಸಾಂಬಾರು ಬೆಳೆಗಳು.

ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನಲ್ಲಿ ಕೃಷಿ ಮತ್ತು ತೋಟಗಾರಿಕೆ ವಿಶ್ವ ವಿದ್ಯಾಲಯದ ಪ್ರಾದೇಶಿಕಾ ಸಂಶೋಧನಾ ಕೇಂದ್ರ ಕಾರ್ಯ ನಿರ್ವಹಿಸುತ್ತಿರುತ್ತವೆ. ಹಾಗೂ ಹದಿನಾರು ತೋಟಗಾರಿಕೆ ಕ್ಷೇತ್ರಗಳು ಕರ್ನಾಟಕ ಸರ್ಕಾರದ ತೋಟಗಾರಿಕೆ ಇಲಾಖೆಯಡಿಯಲ್ಲಿ ಇರುತ್ತವೆ. ಈ ಕ್ಷೇತ್ರಗಳಲ್ಲಿ ರೈತರಿಗೆ ಬೇಕಾದ ಉತ್ತಮ ತೆಂಗಿನ ಸಸಿಗಳು, ಕಾಳುಮೆಣಸು ಸಸಿಗಳು, ಮಾವು, ನಿಂಬೆ, ನುಗ್ಗೆ ಹಾಗೂ ಇತರೆ ಗಿಡಗಳನ್ನು ಬೆಳೆಸಿ ರೈತರಿಗೆ ವಿತರಿಸಲಾಗುತ್ತಿದೆ. ಕ್ಷೇತ್ರಗಳ ವಿಸ್ತೀರ್ಣಗಳ ವಿವರ ಈ ಕೆಳಕಂಡಂತಿದೆ.

ಕ್ರ.ಸಂ.	**ತಾಲ್ಲೂಕು**	ತೋಟಗಾರಿಕೆ ಕ್ಷೇತ್ರದ ಹೆಸರು	ವಿಸ್ತೀರ್ಣ (ಎಕರೆಗಳಲ್ಲಿ)
1.	ಚಿಕ್ಕಮಗಳೂರು	ದಂಟರಮಕ್ಕಿ ತೋಟಗಾರಿಕೆ ಕ್ಷೇತ್ರ	11.30
2.		ಕಛೇರಿ ನರ್ಸರಿ, ಚಿಕ್ಕಮಗಳೂರು	1.20
3	ಕಡೂರು	ಸಖರಾಯಪಟ್ಟಣ ತೋಟಗಾರಿಕೆ ಕ್ಷೇತ್ರ	100.00
4		ಬಾಕಿನಕೆರೆ ತೋಟಗಾರಿಕೆ ಕ್ಷೇತ್ರ	25.00
5		ಹರುವನಹಳ್ಳಿ ತೋಟಗಾರಿಕೆ ಕ್ಷೇತ್ರ	5
6		ಬ್ಯಾಗಡೇಹಳ್ಳಿ ತೋಟಗಾರಿಕೆ ಕ್ಷೇತ್ರ	9.36
7		ಕಛೇರಿ ನರ್ಸರಿ	1.03
8	ಕೊಪ್ಪ	ಹರಿಹರಪುರ ತೋಟಗಾರಿಕೆ ಕ್ಷೇತ್ರ	7.30
9		ಬಾಳಗಡಿ ತೋಟಗಾರಿಕೆ ಕ್ಷೇತ್ರ	5.11
10		ಬಿಂತ್ರವಳ್ಳಿ ತೋಟಗಾರಿಕೆ ಕ್ಷೇತ್ರ	2.24
11	ಮೂಡಿಗೆರೆ	ಕಳಸ ತೋಟಗಾರಿಕೆ ಕ್ಷೇತ್ರ	25.00
12		ಬೀಜುವಳ್ಳಿ ತೋಟಗಾರಿಕೆ ಕ್ಷೇತ್ರ	31.32
13	ನ.ರಾ.ಪುರ	ಮೆಣಸೂರು ತೋಟಗಾರಿಕೆ ಕ್ಷೇತ್ರ	11.04
14		ಬಿ.ಕಣಬೂರು ತೋಟಗಾರಿಕೆ ಕ್ಷೇತ್ರ	33.34
15	ಶೃಂಗೇರಿ	ಮೆಣಸೆ ತೋಟಗಾರಿಕೆ ಕ್ಷೇತ್ರ	7.00
16	ತರೀಕೆರೆ	ಬೇಲೇನಹಳ್ಳಿ ತೋಟಗಾರಿಕೆ ಕ್ಷೇತ್ರ	10.04
		ಒಟ್ಟು	**285.28**

ಸಿಬ್ಬಂದಿ ವಿವರಗಳು : ತೋಟಗಾರಿಕೆ ಇಲಾಖೆ, ಚಿಕ್ಕಮಗಳೂರು ಅಧೀನ ಕಛೇರಿಯ ಸಿಬ್ಬಂದಿ ವಿವರ

ಕ್ರ. ಸಂ.	ಪದನಾಮ	ವೇತನ ಶ್ರೇಣಿ	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿ ಇರುವ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ
1	ತೋಟಗಾರಿಕೆ ಉಪನಿರ್ದೇಶಕರು	67550–104600	1	1	0
2	ಕೇಂದ್ರ ಸ್ಥಾನ ಸಹಾಯಕರು	43100–83900	1	1	0
3	ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು	52650–97100	7	3	4
4	ಸಹಾಯಕ ತೋಟಗಾರಿಕೆ ನಿರ್ದೇಶಕರು	43100–83900	2	2	0
5	ಸಹಾಯಕ ತೋಟಗಾರಿಕೆ ಅಧಿಕಾರಿ	40900–78200	46	31	15
6	ಸಹಾಯಕ ಸಾಂಖ್ಯಿಕ ಅಧಿಕಾರಿ	37900–70850	1	0	1
7	ತೋಟಗಾರಿಕೆ ಸಹಾಯಕರು	23500–47650	13	11	2
8	ಅಧೀಕ್ಷಕರು	37900–70850	6	6	0
9	ಪ್ರಥಮ ದರ್ಜೆ ಸಹಾಯಕರು	27650–52650	6	2	4
10	ದ್ವಿತೀಯ ದರ್ಜೆ ಸಹಾಯಕರು	21400–42000	9	4	5
11	ಬೆರಳಚ್ಚುಗಾರರು	21400–42000	1	1	0
12	ವಾಹನ ಚಾಲಕರು	21400–42000	1	1	0
13	ಸೇವಕರು	17000–28950	3	1	2
14	ತೋಟಗಾರ	17000–28950	4	2	2
	ಒಟ್ಟು		**101**	**66**	**35**

ತೋಟಗಾರಿಕೆ ಇಲಾಖೆ, (ರಾಜ್ಯವಲಯ) ಚಿಕ್ಕಮಗಳೂರು ಅಧೀನ ಕಛೇರಿಯ ಸಿಬ್ಬಂದಿ ವಿವರ

ಕ್ರ.	ಪದನಾಮ	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾದ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ
1	ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು	1	1	0
2	ಸಹಾಯಕ ತೋಟಗಾರಿಕೆ ನಿರ್ದೇಶಕರು	4	2	2
3	ಸಹಾಯಕ ತೋಟಗಾರಿಕೆ ಅಧಿಕಾರಿಗಳು	4	2	2
4	ತೋಟಗಾರಿಕೆ ಸಹಾಯಕರು	8	5	3
5	ತೋಟಗಾರರು	4	0	4
	ಲಿಪಿಕ ವೃಂದ			
6	ಪ್ರಥಮ ದರ್ಜೆ ಸಹಾಯಕರು	1	1	0
7	ದ್ವಿತೀಯ ದರ್ಜೆ ಸಹಾಯಕರು	1	0	1
8	ಬೆರಳಚ್ಚುಗಾರರು	1	1	0
9	ವಾಹನ ಚಾಲಕರು	1	1	0
	ಒಟ್ಟು	22	14	8

2018–19 ನೇ ಸಾಲಿನ ಮಾರ್ಚ್ ಅಂತ್ಯಕ್ಕೆ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಯೋಜನೆಗಳ ಪ್ರಗತಿ ವರದಿ

ವಿವರಗಳು (ಆರ್ಥಿಕ ರೂ. ಲಕ್ಷಗಳಲ್ಲಿ)

ಕ್ರ. ಸಂ.	ಯೋಜನೆಗಳ ಹೆಸರು	ವಾರ್ಷಿಕ ಗುರಿ		ಸಂಚಿತ ಸಾಧನೆ		ಬಿಡುಗಡೆ ಅನುದಾನ
		ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ ಹೆ/ಸಂ	
1	ಹನಿ ನೀರಾವರಿ ಯೋಜನೆ (2435–00–101–0–28)	100.00	200 ಹೆ.	99.72	200 ಹೆ.	100.00
2	ತೋಟಗಾರಿಕೆ ಕಟ್ಟಡಗಳು (2435–00–101–0–32)	30.00	5 ಸಂ.	30.00	1 ಸಂ.	30.00
3	ತೋಟಗಾರಿಕ ಕ್ಷೇತ್ರಗಳ ನಿರ್ವಹಣೆ (2435–00–101–0–35)	25.00	6 ಸಂ.	25.00	5 ಸಂ.	24.96
4	ತೆಂಗು ಬೀಜ ಸಂಗ್ರಹಣೆ ಮತ್ತು ಸಸ್ಯಾಭಿವೃದ್ಧಿ (2435–00–101–0–36)	6.00	82538 ಸಂ.	6.00	82538 ಸಂ.	6.00
5	ಪ್ರಚಾರ ಮತ್ತು ಸಾಹಿತ್ಯ (2435–00–101–0–38)	8.00	32009 ಸಂ.	8.00	32009 ಸಂ.	8.00
6	ಜೇನು ಕೃಷಿ ಅಭಿವೃದ್ಧಿ ಯೋಜನೆ (2851–00–107–0–33)	28.29	423 ಸಂ.	14.07	422ಸಂ.	28.29
7	ತಾಳೆ ಬೆಳೆ ಯೋಜನೆ (2435–00–101–0–02)	3.00	69 ಸಂ/ಹೆ.	3.00	69 ಸಂ/ಹೆ.	3.00
8	ಕಾರ್ಯಕಾರಿ ಸಿಬ್ಬಂದಿ (2435–00–101–0–26)	433.74	74 ಸಂ.	422.70	74 ಸಂ	433.74
	ಜಿಪಂ ಒಟ್ಟು	**634.03**	**115324 ಸಂ/ಹೆ.**	**608.49**	**115318 ಸಂ/ಹೆ.**	**633.99**
9	ರೈತರಿಗೆ ತರಬೇತಿ (2435–00–101–0–64)	2.00	500 ಸಂ.	2.00	500 ಸಂ.	2.00
10	ರೈತರಿಗೆ ಸಹಾಯ (ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ, ಅಲಂಕಾರಿಕ ಗಿಡಗಳ ಅಭಿವೃದ್ಧಿ, ಶೇ. 50 ರ ರಿಯಾಯಿತಿ ದರದಲ್ಲಿ ಸಸ್ಯ ಸಂರಕ್ಷಣಾ ಔಷಧಿಗಳ ವಿತರಣೆ, ಸಾಮಾಜಿಕ ತೋಟಗಾರಿಕೆ) (2435–00–0–101–0–64)	15.00	1818 ಸಂ/ಹೆ.	15.00	1818 ಸಂ/ಹೆ.	15.00
	ತಾ ಪಂ ಒಟ್ಟು	**17.00**	**2318 ಸಂ/ಹೆ.**	**17.00**	**2318 ಸಂ/ಹೆ.**	**17.00**
11	ವಿಶೇಷ ಘಟಕ ಯೋಜನೆ (SCP) (2225–00–101–0–64)	5.78	578 ಹೆ.	5.78	578 ಹೆ.	5.78
12	ಗಿರಿಜನ ಉಪಯೋಜನೆ (TSP) (2225–00–102–0–70) ಒಟ್ಟು (SCP+ TSP)	1.47 7.25	147 ಹೆ. 725 ಹೆ.	1.47 7.25	147 ಹೆ. 725 ಹೆ.	1.47 7.25

2018–19 ನೇ ಸಾಲಿನ ರಾಜ್ಯ ವಲಯ ಯೋಜನೆಗಳ ಮಾರ್ಚ್ – 2018 ರ ಅಂತ್ಯಕ್ಕೆ ಸಾಧಿಸಿದ ಪ್ರಗತಿ ವರದಿ (ಆರ್ಥಿಕ ರೂ. ಲಕ್ಷಗಳಲ್ಲಿ)

ಕ್ರ. ಸಂ.	ಯೋಜನೆಗಳ ಹೆಸರು	ವಾರ್ಷಿಕ ಗುರಿ		ಸಂಚಿತ ಸಾಧನೆ		ಅನುದಾನ ಬಿಡುಗಡೆ
		ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ (ಹೆ.ಸಂಖ್ಯೆ)	
1	ಕೃಷಿ ಭಾಗ್ಯ (ಎಸ್–01) (2401–00–001–2–01)	155.32	844.86 ಸಂ/ಹೆ.	155.32	838.10 ಸಂ/ಹೆ.	155.32
2	ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013ರಡಿ ಬಳಕೆಯಾಗದೇ ಇರುವ ಮೊತ್ತ	11.63	67 ಹೆ.	11.63	67 ಹೆ.	11.63
3	ಉತ್ಪಾದನಾ ಸುಧಾರಣಾ ಕಾರ್ಯ ಯೋಜನೆಗಾಗಿ ತೆಂಗಿನಲ್ಲಿ ಸಂಯೋಜಿತ ಬೇಸಾಯ ಕಾರ್ಯಕ್ರಮ (2401–00–108–2–51)	1682.05	839492 ಸಂ/ಹೆ.	1682.044	404340 ಸಂ/ಹೆ.	1682.047
4	ವಿಸ್ತರಣೆ ಮತ್ತು ತರಬೇತಿ (2401–00–111–0–08)	98.07	129ಸಂ.	98.07	129 ಸಂ.	98.07
5	ಸಮಗ್ರ ತೋಟಗಾರಿಕೆ ಅಭಿವೃದ್ಧಿ (2401–00–111–0–08)	571.45	2577 ಸಂ/ಹೆ.	571.23	2576 ಸಂ/ಹೆ.	571.45
6	ಆಲೂಗೆಡ್ಡೆ ವಿಶೇಷ ಪ್ಯಾಕೇಜ್ (2401–00–111–0–08)	70.00	1600 ಹೆ.	70.00	1600 ಸಂ/ಹೆ.	70.00
7	ಕೈತೋಟ ಮತ್ತು ತಾರಸಿ ತೋಟ ಉತ್ತೇಜನ ಕಾರ್ಯಕ್ರಮ (2401–00–111–0–08)	1.00	1ಸಂ.	1.00	1 ಸಂ/ಹೆ.	1.00
8	ರೈತ ಉತ್ಪಾದಕ ಸಂಸ್ಥೆ (2401–00–111–0–08)	8.10	7ಸಂ.	8.10	7 ಸಂ/ಹೆ.	8.10
9	ಗೇರು ಅಭಿವೃದ್ಧಿ ಕಾರ್ಯಕ್ರಮ (2401–00–111–0–08)	22.27	56 ಹೆ.	2227	56 ಸಂ/ಹೆ.	22.26
10	ನೀರಿನ ಟ್ಯಾಂಕರ್ ಸಹಾಯಧನ (2401–00–111–0–08)	46.90	50 ಸಂ.	46.90	50 ಸಂ/ಹೆ.	46.75
11	ತೋಟಗಾರಿಕೆ ಕ್ಷೇತ್ರ ಮತ್ತು ನರ್ಸರಿ ಅಭಿವೃದ್ಧಿ ನಿರ್ವಹಣೆ (ಎಸ್–11) (2401–00–119–4–05)	21.36	1990 ಹೆ.	21.36	1990 ಹೆ.	21.36
12	ತರಕಾರಿ ಬೀಜ ಮಾದರಿ ಸಂಗ್ರಹಣೆ (ಎಸ್–14) (2401–00–119–5–01)	0.60	60 ಸಂ.	0.60	60 ಸಂ.	0.60
13	ತೋಟಗಾರಿಕೆ ಬೆಳೆಗಳ ರೋಗ ಮತ್ತು ಕೀಟಗಳ ಸಮಗ್ರ ನಿಯಂತ್ರಣ (ಎಸ್–15) (2401–00–800–2–80)	85.50	2421078ಸಂ/ಹೆ.	85.47	2421078 ಸಂ/ಹೆ.	85.50
14	ಮಧುವನ ಮತ್ತು ಜೇನು ಸಾಕಾಣಿಕೆ ಅಭಿವೃದ್ಧಿ (ಎಸ್–20) (2851–00–200–0–01)	18.16	328 ಸಂ.	18.12	328 ಸಂ.	18.16
15	ಸುಜಲಾIII (2401–00–800–2–80)	36.19	29ಸಂ/ಹೆ.	36.19	29 ಸಂ/ಹೆ.	36.19
	ಒಟ್ಟು	**2834.63**	**3268308 ಸಂ/ಹೆ.**	**2828.304**	**679313.13 ಸಂ/ಹೆ.**	**2828.437**

2018–19ನೇ ಸಾಲಿನ ಕೇಂದ್ರ ವಲಯ ಯೋಜನೆಗಳ ಮಾರ್ಚ್ – 2018 ರ ಅಂತ್ಯಕ್ಕೆ ಸಾಧಿಸಿದ ಪ್ರಗತಿ ವರದಿ

ಕ್ರ. ಸಂ.	ಯೋಜನೆಗಳ ಹೆಸರು	ವಾರ್ಷಿಕ ಗುರಿ		ಸಂಚಿತ ಸಾಧನೆ		ಅನುದಾನ ಬಿಡುಗಡೆ
		ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ (ಹೆ.ಸಂಖ್ಯೆ)	
1	ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (2401–00–108–2–30)	635.07	985.50 ಹೆ.	588.78	839 ಹೆ.	589.47
2	ಕೇಂದ್ರ ವಲಯ ತೆಂಗು ಅಭಿವೃದ್ಧಿ ಮಂಡಳಿ ಸಹಾಯದಲ್ಲಿ ತೆಂಗು ಉತ್ಪಾದಕತೆ ಅಭಿವೃದ್ಧಿಯ ಸಮಗ್ರ ಬೇಸಾಯ ಯೋಜನೆ (2401–00–108–2–51)	101.44	379 ಹೆ.	73.473	316 ಹೆ.	73.471
3	ರಾಷ್ಟ್ರೀಯ ತೋಟಗಾರಿಕೆ ಮಿಷನ್ (2401–00–119–4–06)	762.42	5555.43 ಸಂ/ಹೆ.	733.45	5823.68 ಸಂ/ಹೆ.	735.41
4	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (2401–00–800–1–57)	17.64	29 ಸಂ/ಹೆ.	11.99	29 ಸಂ/ಹೆ.	12.04
	ಒಟ್ಟು	**1516.57**	**6948.93 ಸಂ/ಹೆ.**	**1407.693**	**7007.68 ಸಂ/ಹೆ.**	**1410.391**

ಚಿಕ್ಕಮಗಳೂರು ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ವಿವಿಧ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ರಾಜ್ಯ ವಲಯ ಮತ್ತು ಕೇಂದ್ರ ವಲಯ ಯೋಜನೆಗಳ ಸಂಕ್ಷಿಪ್ತ ನೋಟ

ಕ್ರ.ಸಂ	ಯೋಜನೆಗಳು	ವಿವರ
I	**ಜಿಲ್ಲಾ ಪಂಚಾಯಿತಿ ಯೋಜನೆಗಳು**	
1	ಹನಿ ನೀರಾವರಿ ಯೋಜನೆ	ತೋಟಗಾರಿಕೆ ಬೆಳೆಗಳಿಗೆ ರೈತರು ಅಳವಡಿಸುವ ಹನಿ ನೀರಾವರಿ ಪದ್ಧತಿಗೆ ಶೇ. 90 ರ ಸಹಾಯಧನ 2 ಹೆಕ್ಟೇರ್ ವರೆಗೆ ನೀಡಲಾಗುವುದು, 2 ಹೆ. ನಿಂದ 5 ಹೆ. ವರೆಗೆ ಶೇ. 50 ರ ಸಹಾಯಧನ ನೀಡಲಾಗುವುದು.
2	ತೋಟಗಾರಿಕೆ ಕಟ್ಟಡಗಳು	ತೋಟಗಾರಿಕೆ ಇಲಾಖೆ ಕಟ್ಟಡಗಳ ನವೀಕರಣ, ಆಧುನೀಕರಣ ಹಾಗೂ ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.
3	ತೋಟಗಾರಿಕೆ ಕ್ಷೇತ್ರ ನಿರ್ವಹಣೆ	ಇಲಾಖೆ ನಿಗದಿಪಡಿಸಿರುವ ದರದಲ್ಲಿ ತೋಟಗಾರಿಕಾ ಕ್ಷೇತ್ರಗಳಲ್ಲಿರುವ ಹಣ್ಣಿನ ಗಿಡಗಳಿಗೆ ಪಾತಿ ಮಾಡುವುದು, ಕಳೆ ತೆಗೆಯುವುದು, ಕ್ಷೇತ್ರದಲ್ಲಿ ಉಳುಮೆ ಮಾಡುವುದು, ನೀರಾವರಿ ನಿರ್ವಹಣೆ, ಔಷಧಿ ಮತ್ತು ಸಾವಯವ ಗೊಬ್ಬರವನ್ನು ಖರೀದಿಸಿ ಹಣ್ಣಿನ ಗಿಡಗಳಿಗೆ ಹಾಕುವುದು, ಮಾವು ಸಪೋಟ ಇತ್ಯಾದಿ ಗಿಡಗಳನ್ನು ಉತ್ಪಾದಿಸಲು ತಾಯಿಗಿಡಗಳನ್ನು ನಿರ್ವಹಣೆ ಮಾಡುವುದು. ಹಾಗೂ ಕ್ಷೇತ್ರದಲ್ಲಿರುವ ಪಂಪ್‌ಸೆಟ್ ಗಳಿಗೆ ವಿದ್ಯುಚ್ಛಕ್ತಿ ವೆಚ್ಚ ಭರಿಸುವುದು. ಹಾಗೂ ಹಣ್ಣಿನ ಗಿಡಗಳಿಗೆ ಸಾವಯವ ಗೊಬ್ಬರ, ಸಸ್ಯ ಸಂರಕ್ಷಣೆ ಔಷಧಿ ಸಿಂಪಡಿಸುವುದು, ಒಟ್ಟಾರೆಯಾಗಿ ಮೂಲಭೂತ ಸೌಕರ್ಯ ಅಭಿವೃದ್ಧಿ ಪಡಿಸ ಲಾಗುವುದು.
4	ತೆಂಗು ಬೀಜ ಸಂಗ್ರಹಣೆ ಹಾಗೂ ಸಸ್ಯಾಭಿವೃದ್ಧಿ	ಉತ್ತಮ ಜಾತಿಯ ತೆಂಗಿನ ಸಸಿಗಳ ಉತ್ಪಾದನೆ ಹಾಗೂ ಕಡಿಮೆ ದರದಲ್ಲಿ ರೈತರಿಗೆ ವಿತರಣೆ ಅಲ್ಲದೆ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ

		ಉಪಯೋಜನೆಯಲ್ಲಿ ರೈತರಿಗೆ ವಿತರಿಸುವುದು ಹಾಗೂ ಇಲಾಖಾ ಯೋಜನೆಗಳಿಗೆ ಉಪಯೋಗಿಸುವುದು, ಇಲಾಖೆಯು ನಿಗಧಿ ಪಡಿಸಿದ ದರದಲ್ಲಿ ಗಿಡಗಳನ್ನು ರೈತರಿಗೆ ವಿತರಿಸಲಾಗುವುದು.
5	ಪ್ರಚಾರ ಮತ್ತು ಸಾಹಿತ್ಯ	ಫಲಪುಷ್ಪ ಪ್ರದರ್ಶನ, ತೋಟಗಾರಿಕೆ ದಿನಾಚರಣೆ ಏರ್ಪಡಿಸುವುದು, ಮೈಸೂರು ದಸರಾ ಅಂಗವಾಗಿ ಸ್ಥಬ್ಧ ಚಿತ್ರ ನಿರ್ಮಾಣ ಮಾಡುವುದು ಮತ್ತು ತೋಟಗಾರಿಕೆ ಬೆಳೆಗಳಿಗೆ ಸಂಬಂಧಿಸಿದಂತೆ ಕರಪತ್ರಗಳನ್ನು ಮುದ್ರಿಸಿ ರೈತರುಗಳಿಗೆ ವಿತರಿಸಲಾಗುವುದು.
6	ಜೇನು ಸಾಕಾಣಿಕೆ ಅಭಿವೃದ್ಧಿ ಯೋಜನೆ	ಜೇನು ಕೃಷಿ ತರಬೇತಿ ಕಾರ್ಯಕ್ರಮ ಏರ್ಪಡಿಸುವುದು, ಇತರೆ ವರ್ಗದ ರೈತ ಫಲಾನುಭವಿಗಳಿಗೆ ಪ್ರತಿ ಜೇನು ಪೆಟ್ಟಿಗೆ ಹಾಗೂ ಜೇನು ಕುಟುಂಬಗಳಿಗೆ ಶೇ.40 ರಂತೆ ರೂ.1800/– ಗಳ ಸಹಾಯಧನ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ರೈತ ಫಲಾಭವಿಗಳಿಗೆ ಶೇ.90 ರಂತೆ ರೂ. 4050/– ಸಹಾಯಧನ ನೀಡಲಾಗುವುದು ಮತ್ತು ಜೇನು ಕೃಷಿ ಕೇಂದ್ರದ ಮಧುವನಗಳ ಕ್ಷೇತ್ರ ನಿರ್ವಹಣೆ ಹಾಗೂ ಅಭಿವೃದ್ಧಿ ಕಾರ್ಯಕ್ರಮವನ್ನು ಕೈಗೊಳ್ಳಲಾಗುವುದು.
7	ಸಾಮರ್ಥ್ಯವುಳ್ಳ ರಾಜ್ಯಗಳಲ್ಲಿ ಎಣ್ಣೆತಾಳೆಯ ವ್ಯವಸಾಯ	ತಾಳೆ ತಾಕಿನಲ್ಲಿ ಡೀಸಲ್ ಪಂಪ್ ಸೆಟ್/ ವಿದ್ಯುತ್ ಚಾಲಿತ ಪಂಪ್ ಸೆಟ್ ಕೊಳ್ಳಲು ಒಟ್ಟು ಖರ್ಚಿನ ಶೇ. 50 ರಷ್ಟು ಅಥವಾ ಗರಿಷ್ಟ ರೂ. 15,000/– ಸಹಾಯಧನ, ಕೊಳವೆ ಬಾವಿ ಮತ್ತು ನೀರು ಸಂಗ್ರಹಣಾ ಸಾಧನಗಳಿಗೆ ತಗುಲುವ ವೆಚ್ಚದ ಶೇ. 50 ರಷ್ಟು ಅಥವಾ ಗರಿಷ್ಟ ರೂ. 25,000/– ಸಹಾಯಧನ, ತಾಳೆ ಬೆಳೆಯಲ್ಲಿ ಅಂತರ ಬೆಳೆಗೆ ರೂ. 5,000/– ಪ್ರತಿ ಹೆಕ್ಟೇರ್ ಗೆ ಸಹಾಯಧನ, ತಾಳೆ ಬೆಳೆಯ ಸಮಗ್ರ ಬೇಸಾಯದ ಬಗ್ಗೆ ರೈತರಿಗೆ ತರಬೇತಿ ಕಾರ್ಯಕ್ರಮ ಹಾಗೂ ಹಣ್ಣು ಕಟಾವು ಮಾಡುವ ಉಪಕರಣಗಳಿಗೆ ರೂ.3000/– ಗಳ ಸಹಾಯಧನ ನೀಡಲಾಗುವುದು.
II	**ತಾಲ್ಲೂಕು ಪಂಚಾಯಿತಿ ಯೋಜನೆಗಳು**	
8	ರೈತರಿಗೆ ತರಬೇತಿ	ಈ ಯೋಜನೆಯಲ್ಲಿ ಒಂದು ದಿನದ ತರಬೇತಿಯಿದ್ದು, ರೈತ ಪುರುಷರಿಗೆ ಹಾಗೂ ರೈತ ಮಹಿಳೆಯರಿಗೆ ತರಬೇತಿ ನೀಡಲಾಗುವುದು. ಈ ಅವಧಿಯಲ್ಲಿ ಪ್ರತಿಯೊಬ್ಬ ರೈತರಿಗೆ ದಿನಭತ್ಯೆ, ಪ್ರವಾಸ ಭತ್ಯೆ, ವಿಷಯ ತಜ್ಞರಿಗೆ ಸಂಭಾವನೆ, ಪ್ರಚಾರ ಮತ್ತು ತಾಂತ್ರಿಕ ಕೈಪಿಡಿ/ ಹಣ್ಣಿನ ಗಿಡ/ ಮಿನಿ ಕಿಟ್ ವಿತರಣೆಗೆ ಭರಿಸಲಾಗುವುದು.
9	ಸಾಮಾಜಿಕ ತೋಟಗಾರಿಕೆ, ಅಲಂಕಾರಿಕೆ ಗಿಡಗಳ ಅಭಿವೃದ್ಧಿ, ತೋಟಗಾರಿಕೆ ಪ್ರದೇಶ ವಿಸ್ತರಣೆ, ಸಸ್ಯ ಸಂರಕ್ಷಣೆ	ಶಾಲಾ ಆವರಣದಲ್ಲಿ, ಸರ್ಕಾರಿ ಸಂಸ್ಥೆಗಳ ಆವರಣದಲ್ಲಿ ಪರಿಸರ ಸಂಪತ್ತನ್ನು ಕಿರು ತೋಟ ನಿರ್ಮಿಸುವುದು. ಅಲಂಕಾರಿಕ ಗಿಡಗಳ ಅಭಿವೃದ್ಧಿ ಯೋಜನೆಯಲ್ಲಿ ಕುಂಡಗಳಲ್ಲಿ ಅಲಂಕಾರಿಕ ಗಿಡಗಳನ್ನು ಅಭಿವೃದ್ಧಿ ಪಡಿಸಿ ಸರ್ಕಾರಿ ಕಛೇರಿಗಳಿಗೆ ಹಾಗೂ ಅಥಿತಿ ಗೃಹಗಳಿಗೆ ನೀಡಲಾಗುವುದು. ಪ್ರದೇಶ ವಿಸ್ತರಣೆ ಕಾರ್ಯಕ್ರಮದಡಿ 01 ಎಕರೆಗೆ ಗರಿಷ್ಟ ರೂ. 1000/– ಗಳಿಗೆ ಸರಿದೂಗುವಂತೆ ಆಸಕ್ತ ರೈತರಿಗೆ ಉಚಿತವಾಗಿ ಗಿಡಗಳನ್ನು ವಿತರಿಸಲಾಗುವುದು, ಸಸ್ಯ ಸಂರಕ್ಷಣಾ ಔಷಧಿಗಳ ವಿತರಣೆ ಯೊಜನೆಯಡಿಯಲ್ಲಿ ತೋಟಗಾರಿಕೆ ಬೆಳೆಗಳಿಗೆ ತಗಲುವ ರೋಗ ಮತ್ತು ಕೀಟ ಹತೋಟಿಗೆ ಸಸ್ಯ ಸಂರಕ್ಷಣಾ ಔಷಧಿಗಳಿಗೆ ಶೇ. 50 ರ ಸಹಾಯಧನ ನೀಡಲಾಗುವುದು.
10	ವಿಶೇಷ ಘಟಕ ಯೋಜನೆ	ಫಲಾನುಭವಿಗಳಿಗೆ ಅರ್ಧ ಎಕರೆ ತೆಂಗಿನ ತೋಟ ನಿರ್ಮಾಣ ಮಾಡುವುದು, ಪಾಲನೆ ಬಾಬ್ತು ಹಾಗೂ ನಿರ್ವಹಣೆ ವೆಚ್ಚ ಭರಿಸಲಾಗುವುದು.
11	ಗಿರಿಜನ ಉಪ ಯೋಜನೆ	ಫಲಾನುಭವಿಗಳಿಗೆ ಅರ್ಧ ಎಕರೆ ತೆಂಗಿನ ತೋಟ ನಿರ್ಮಾಣ ಮಾಡುವುದು, ಪಾಲನೆ ಬಾಬ್ತು ಹಾಗೂ ನಿರ್ವಹಣೆ ವೆಚ್ಚ ಭರಿಸಲಾಗುವುದು.

III	**ರಾಜ್ಯ ವಲಯ ಯೋಜನೆಗಳು**	
12	ಹನಿ ನೀರಾವರಿ ಯೋಜನೆ	ತೋಟಗಾರಿಕೆ ಬೆಳೆಗಳಿಗೆ ರೈತರು ಅಳವಡಿಸುವ ಹನಿ ನೀರಾವರಿ ಪದ್ಧತಿಗೆ ಶೇ. 90 ರ ಸಹಾಯಧನ 2 ಹೆಕ್ಟೇರ್ ವರೆಗೆ ನೀಡಲಾಗುವುದು, 2 ಹೆ. ನಿಂದ 5 ಹೆ. ವರೆಗೆ ಶೇ. 50 ರ ಸಹಾಯಧನ ನೀಡಲಾಗುವುದು.
13	ತೆಂಗು ಅಭಿವೃದ್ಧಿ ಮಂಡಳಿಯ ಅನುದಾನದಲ್ಲಿ ಉತ್ಪಾದನಾ ಸುಧಾರಣಾ ಕಾರ್ಯ ಯೋಜನೆಗಾಗಿ ತೆಂಗಿನಲ್ಲಿ ಸಂಯೋಜಿತಾ ಬೇಸಾಯ ಕಾರ್ಯಕ್ರಮ	ರೈತರು ಸಮಗ್ರ ಬೇಸಾಯ ಪದ್ದತಿಗಳನ್ನು ಅಳವಡಿಸಿಕೊಂಡು ತೆಂಗು ಬೆಳೆಯ ಉತ್ಪಾದಕತೆಯನ್ನು ಹೆಚ್ಚಿಸಲು ಪ್ರೋತ್ಸಾಹ ನೀಡಲು ಹಾಗೂ ಅವರಲ್ಲಿ ಅರಿವು ಮೂಡಿಸಲು, ಗುಚ್ಚಗ್ರಾಮಗಳಲ್ಲಿ ಆಸಕ್ತ ರೈತರನ್ನು ಆಯ್ಕೆ ಮಾಡಿ ಪ್ರಾತ್ಯಕ್ಷತೆ ತಾಕುಗಳ ನಿರ್ಮಾಣ ಮಾಡಲಾಗಿದೆ. ಈ ಕಾರ್ಯಕ್ರಮವು 2 ವರ್ಷದ ಕಾರ್ಯಕ್ರಮವಾಗಿದ್ದು, ಒಂದು ಹೆಕ್ಟೇರಿಗೆ ಒಟ್ಟು ರೂ. 35,000/– ಗಳ ಹಸಿರೆಲೆ ಗೊಬ್ಬರ, ಬೇವಿನ ಹಿಂಡಿ, ರಾಸಾಯನಿಕ ಗೊಬ್ಬರ, ಸಸ್ಯ ಸಂರಕ್ಷಣಾ ಔಷಧಿ, ಇತರೆ ಪರಿಕರಗಳನ್ನು 2 ಸಮಕಂತುಗಳಲ್ಲಿ ಸಹಾಯಧನ ನೀಡಲಾಗುವುದು. ಮತ್ತು ರಾಜ್ಯವಲಯ ಉತ್ಪಾದನಾ ಸುಧಾರಣಾ ಕಾರ್ಯ ಯೋಜನೆಗಾಗಿ ತೆಂಗಿನಲ್ಲಿ ಸಂಯೋಜಿತಾ ಬೇಸಾಯ ಯೋಜನೆಯಡಿ ಗುಚ್ಚಗ್ರಾಮಗಳಲ್ಲಿ ಆಸಕ್ತ ರೈತರನ್ನು ಆಯ್ಕೆ ಮಾಡಿ ಪ್ರಾತ್ಯಕ್ಷತೆ ತಾಕುಗಳ ನಿರ್ಮಾಣ ಮಾಡಲಾಗುವುದು. ಹಾಗೂ ಪ್ರತಿ ಹೆ. ಗೆ ರೂ. 5,250/– ಗಳ ಪರಿಕರಗಳಿಗೆ ಸಹಾಯಧನ ನೀಡಲಾಗುವುದು.
14	ವಿಸ್ತರಣೆ ಮತ್ತು ತರಬೇತಿ ಯೋಜನೆ	ರೈತ ಮಕ್ಕಳಿಗೆ ಬೀಜುವಳ್ಳಿ ತೋಟಗಾರಿಕೆ ಕ್ಷೇತ್ರ, ಮೂಡಿಗೆರೆಯಲ್ಲಿ ತೋಟಗಾರಿಕೆಯ ವಿಷಯದಲ್ಲಿ 10 ತಿಂಗಳ ಸಮಗ್ರ ತರಬೇತಿ ನೀಡಲಾಗುವುದು, ತರಬೇತಿ ಕಾರ್ಯಕ್ರಮದಲ್ಲಿ ಶಿಷ್ಯ ವೇತನ, ಶೈಕ್ಷಣಿಕ ಪ್ರವಾಸ, ಪೂರಕ ತರಬೆತಿ, ತೋಟಗಾರಿಕೆ ಸಲಕರಣೆಗಳು, ಭೋದನಾ ಸಾಮಗ್ರಿಗಳನ್ನು ಹಾಗೂ ಇತರೆ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದು. ಫಲಪುಷ್ಪ ಪ್ರದರ್ಶನ ಹಾಗೂ ತೋಟಗಾರಿಕೆ ಮಾಹಿತಿ ಮತ್ತು ಸಲಹಾ ಕೇಂದ್ರದಿಂದ ಎಲ್ಲಾ ಅಗತ್ಯ ಮಾಹಿತಿಯನ್ನು ತರಬೇತಿ, ಕ್ಷೇತ್ರೋತ್ಸವ, ಮೇಳ, ಪ್ರದರ್ಶನಗಳ ಮೂಲಕ ಲಭ್ಯ ಪಡಿಸಲಾಗುವುದು.
ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ		
15	ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ	ಸದರಿ ಯೋಜನೆಯನ್ನು ಪ್ರತಿ ತಾಲ್ಲೂಕಿನಲ್ಲಿಯೂ 2 ಗುಚ್ಛ ಗ್ರಾಮ ಪ್ರದೇಶಗಳನ್ನು ಆಯ್ಕೆ ಮಾಡಿ ಸಮರ್ಪಣೆ ಬೆಳೆಗಳನ್ನು ತಾಂತ್ರಿಕತೆ ಆಧಾರದ ಮೇಲೆ ಭೌಗೋಳಿಕ ಹಾಗೂ ಹವಾಗುಣಗಳ ಅನುಗುಣ ವೈಜ್ಞಾನಿಕ ತಂತ್ರಜ್ಞಾನ ಅಳವಡಿಕೆಯ ಮೂಲ ತೋಟಗಾರಿಕೆ ಬೆಳೆಗಳ ಉತ್ಪಾದನೆ ಹೆಚ್ಚಿಸುವುದು ಈ ಯೋಜನೆಯ ಉದ್ದೇಶ. ಜಿಲ್ಲೆಯಲ್ಲಿ ಪುಟ್ಟ ಬಾಳೆ, ತರಕಾರಿ ಬೆಳೆ, ಕಾಳುಮೆಣಸು, ಕೋಕೋ, ದಾಳಿಂಬೆ, ಗೋಡಂಬಿ, ಜಾಯಿಕಾಯಿ ಬೆಳೆಗಳಿಗೆ ಆಯ್ಕೆ ಮಾಡಿದ ಗುಚ್ಛ ಗ್ರಾಮಗಳಲ್ಲಿ ಬೆಳೆಯಲು ಪ್ರೋತ್ಸಾಹಿಸಲಾಗುತ್ತಿದೆ. ಸದರಿ ಕಾರ್ಯಕ್ರಮದಡಿ ಇತರೆ ರೈತ ಫಲಾನುಭವಿಗಳಿಗೆ ಶೇ.50 ರಷ್ಟು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತ ಫಲಾನುಭವಿಗಳಿಗೆ ಶೇ.90 ರಂತೆ ಸಹಾಯಧನ ನೀಡಲಾಗುವುದು.
16	ದೃಢೀಕೃತ ಬಿತ್ತನೆ ಆಲೂಗಡ್ಡೆ ಬೀಜ ಸಹಾಯಧನ	ಈ ಕಾರ್ಯಕ್ರಮದಡಿ ರೈತರಿಗೆ ಗುಣಮಟ್ಟಯುಕ್ತ ಬೀಜವನ್ನು ಲಭ್ಯವಾಗುವಂತೆ ಮಾಡಲು, ದೃಢೀಕೃತ ಬಿತ್ತನೆ ಆಲೂಗಡ್ಡೆ ಬೀಜ ಖರೀದಿಸುವ ರೈತರಿಗೆ ಶೇ. 50 ರಂತೆ ಪ್ರತಿ ಕೆ.ಜಿ.ಗೆ ಗರಿಷ್ಠ ರೂ. 10.00 ರಂತೆ ಸಹಾಯಧನವನ್ನು ಪ್ರತಿ ರೈತರಿಗೆ ಗರಿಷ್ಠ 02 ಹೆ. ಪ್ರದೇಶಕ್ಕೆ ಗರಿಷ್ಠ 03 ಟನ್‌ಗಳ ಬೀಜ ಖರೀದಿಗೆ ಸಹಾಯಧನ ನೀಡಲಾಗುವುದು.

17	ಆಲೂಗಡ್ಡೆ ಬೆಳೆಗೆ ವಿಶೇಷ ಪ್ಯಾಕೇಜ್	ಆಲೂಗಡ್ಡೆ ಬೆಳೆಯುವ ರೈತರಿಗೆ ಅಂಗಮಾರಿ ರೋಗವನ್ನು ತಡೆಗಟ್ಟಲು ಜೈವಿಕ ಗೊಬ್ಬರ ಸಸ್ಯ ಸಂರಕ್ಷಣೆ, ಔಷದಿಗಳು ಹಾಗೂ ಸಾವಾಯಾವ ಗೊಬ್ಬರಗಳಿಗೆ ಸಹಾಯಧನ ನೀಡುವುದು. ಆಲೂಗಡ್ಡೆ ಬೆಳೆಯುವ ರೈತರ ಬೆಳೆ ವಿಮೆಗಾಗಿ ಸಹಾಯಧನ ನೀಡುವುದು.
18	ಕೈತೋಟ ಮತ್ತು ತಾರಸಿ ತೋಟಗಳ ಅಭಿವೃದ್ಧಿಗಾಗಿ ಉತ್ತೇಜನ ಕಾರ್ಯಕ್ರಮ	ಕೈತೋಟ ಮತ್ತು ತಾರಸಿ ತೋಟಗಳಲ್ಲಿ ತರಕಾರಿ ಬೆಳೆಯನ್ನು ಸ್ವತ: ಸಾವಯವ ಪದ್ಧತಿಯಲ್ಲಿ ಉತ್ಪಾದಿಸಲು ತಾಂತ್ರಿಕ ಮಾರ್ಗದರ್ಶನ ಮತ್ತು ಉತ್ತೇಜನ ನೀಡುವುದು. ಪ್ರತಿ ಫಲಾನುಭವಿಗೆ ಘಟಕ ಶೇ.50ರಷ್ಟು ಅಂದರೆ ರೂ. 500/– ಮೊತ್ತದ ಕೈತೋಟದ ಅಭಿವೃದ್ಧಿಗೆ ಪೂರಕವಾದ ಸಸಿಗಳು, ತರಕಾರಿ ಬೀಜ ಮತ್ತು ಪರಿಕರಗಳನ್ನು ಕ್ಷೇತ್ರ ಮಟ್ಟದ ತರಬೇತಿ ಸಮಯದಲ್ಲಿ ನೀಡಲಾಗುವುದು.
19	ತರಕಾರಿ ಬೀಜಗಳ ಮಾದರಿ ಸಂಗ್ರಹಣೆ	ತರಕಾರಿ ಬೀಜ ವಿತರಕರು, ಬೀಜ ಮಾರಟಗಾರರು ಹಾಗೂ ವಿವಿಧ ಸಸ್ಯಾಗಾರದಿಂದ ತರಕಾರಿ ಬೀಜ ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆ ಬೀಜ ಪರೀಕ್ಷಾ ಪ್ರಯೋಗಾಲಯ, ಲಾಲ್ ಬಾಗ್ ಗೆ ಕಳುಹಿಸಲಾಗುವುದು. ಇದರಿಂದ ಖಾಸಗಿ ಮಾರಟಗಾರರಿಂದ ಸರಬರಾಜು ಆಗುವ ಬೀಜದ ಗುಣಮಟ್ಟವನ್ನು ಕಾಯ್ದುಕೊಳ್ಳಲು ಹಾಗೂ ಬೆಳೆಗಾರರಿಗೆ ಕಳಪೆ ಬಿತ್ತನೆ ಬೀಜ ಸರಬರಾಜು ಆಗುವುದನ್ನು ನಿಯಂತ್ರಿಸಲಾಗುವುದು.
20	ತೋಟಗಾರಿಕೆ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ	ತೆಂಗಿನ ಕಪ್ಪುತಲೆ ಹುಳುವಿನ ನಿಯಂತ್ರಣಕ್ಕಾಗಿ ಗೋನಿಯೋಜಸ್ ಪರೋಪಜೀವಿಯನ್ನು ಇಲಾಖೆಯ ಪ್ರಯೋಗಾಲಯದಲ್ಲಿ ಅಭಿವೃದ್ಧಿಪಡಿಸಿ ರೈತರಿಗೆ ವಿತರಿಸುವುದು ಹಾಗೂ ಇತರೆ ವರ್ಗದ ರೈತರಿಗೆ ಸಸ್ಯ ಸಂರಕ್ಷಣಾ ಔಷಧಿಗಳಿಗೆ ಶೇ. 50 ರ ಸಹಾಯಧನ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತ ಫಲಾನುಭವಿಗಳಿಗೆ ಶೇ. 90 ರಂತೆ ಸಹಾಯಧನ ನೀಡಲಾಗುವುದು.
21	ತೋಟಗಾರಿಕೆ ಮೂಲಭೂತ ಅಭಿವೃದ್ಧಿ	ತೋಟಗಾರಿಕೆ ಇಲಾಖೆ ಕಟ್ಟಡಗಳ ನವೀಕರಣ, ಆಧುನೀಕರಣ ಹಾಗೂ ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.
22	ಮಧುವನ ಮತ್ತು ಜೇನು ಸಾಕಾಣಿಕೆ ಅಭಿವೃದ್ಧಿ	ಜೇನು ಕೃಷಿಯಲ್ಲಿ ಆಸಕ್ತ ರೈತರಿಗೆ ತರಬೇತಿ ಕಾರ್ಯಕ್ರಮವನ್ನು ಕೈಗೊಂಡು ಜೇನು ಪೆಟ್ಟಿಗೆ ಮತ್ತು ಜೇನು ಕುಟುಂಬಗಳಿಗೆ ಸಾಮಾನ್ಯ ವರ್ಗದ ರೈತರಿಗೆ ಶೇ.40 ರಂತೆ ರೂ.1,800/–ಗಳನ್ನು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ರೈತರಿಗೆ ಶೇ.90 ರಂತೆ ರೂ.4,050/– ಗಳ ಸಹಾಯಧನ ನೀಡಲಾಗುವುದು, ಖಾಸಗಿ ಮಧುವನಗಳ ಸ್ಥಾಪನೆಗೆ ಶೇ.50 ರಂತೆ ರೂ. 50,000/–ಗಳ ಸಹಾಯಧನ ನೀಡಲಾಗುವುದು. ಹಾಗೂ ಇಲಾಖಾ ಮಧುವನಗಳ ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗುವುದು.
23	ಕೃಷಿ ಭಾಗ್ಯ ಯೋಜನೆ	ಕಡೂರು ತಾಲ್ಲೂಕಿನಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಪಾಲಿಮನೆ/ ನೆರಳು ಪರದೆ ಘಟಕಗಳು ಹಾಗೂ ಕೃಷಿಹೊಂಡ ನಿರ್ಮಿಸಿಕೊಂಡು ತೋಟಗಾರಿಕೆ ಬೆಳೆಗಳ ಸಸ್ಯಗಾರ/ ಅಧಿಕ ಮೌಲ್ಯದ ತೋಟಗಾರಿಕೆ ಬೆಳೆಗಳನ್ನು ಬೆಳೆಯುವ ಸಾಮನ್ಯ ವರ್ಗದ ಫಲಾನುಭವಿಗಳಿಗೆ ಶೇ. 50 ಹಾಗೂ ಪರಿಶಿಷ್ಠ ಜಾತಿ ಹಾಗೂ ಪರಿಶಿಷ್ಠ ಪಂಗಡದ ಫಲಾನುಭವಿಗಳಿಗೆ ಶೇ. 90ರ ಸಹಾಯಧನ ನೀಡಲಾಗುವುದು.
24	ಸುಜಲಾ –3	ತೋಟಗಾರಿಕೆಯಲ್ಲಿ ಉತ್ಪಾದಕತೆಯನ್ನು ಹೆಚ್ಚಿಸಲು ವಿಸ್ತರಣೆ ಮತ್ತು ಪ್ರಾತ್ಯಕ್ಷಿಕೆಗಳ ಕಾರ್ಯಕ್ರಮ,ಕಿರು ಜಲಾಯನ ಮಟ್ಟದಲ್ಲಿ ತೋಟಗಾರಿಕೆ ಆಸಕ್ತ ರೈತರ ಗುಂಪುಗಳನ್ನು ರಚಿಸುವುದು, ಗುಂಪಿನ ಸದಸ್ಯರಿಗೆ ತರಬೇತಿ ನೀಡಲಾಗುವುದು, ಹಸಿರು ಮನೆ ಮತ್ತು ಮಳೆ ನೀರು ಕೊಯ್ಲು ಘಟಕ ನಿರ್ಮಾಣ, ತೋಟಗಾರಿಕೆ ಸೇವಾ ಸೌಲಭ್ಯ, ಕ್ಷೇತ್ರೋತ್ಸವಗಳು, ರೈತರ ಪ್ರವಾಸ ಹಾಗೂ ಪ್ರಚಾರ ಮತ್ತು ಸಾಹಿತ್ಯವನ್ನು ಕೈಗೊಳ್ಳಲಾಗುವುದು.

IV	**ಕೇಂದ್ರ ವಲಯ ಯೋಜನೆಗಳು:** **ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ**	
25	ತೋಟಗಾರಿಕೆಯಲ್ಲಿ ಯಾಂತ್ರೀಕರಣ	ಉತ್ಕೃಷ್ಟ ಗುಣಮಟ್ಟದ ಉಪಕರಣಗಳನ್ನು 2015–16 ನೇ ಸಾಲಿನಲ್ಲಿ ಸೂಚಿತ ದರದಲ್ಲಿ ಖರೀದಿಸಿದ ರೈತರಿಗೆ, ಆರ್.ಕೆ.ವಿ.ವೈ ತೋಟಗಾರಿಕೆಯಲ್ಲಿ ಯಾಂತ್ರೀಕರಣ ಯೋಜನೆಯಡಿ ನಿಗದಿತ ದರಕ್ಕೆ ಅನುಗುಣವಾಗಿ ಇತರೆ ವರ್ಗದವರಿಗೆ ಶೇ 50ರ ಸಹಾಯಧನವನ್ನು ಪ್ರತಿ ರೈತ ಫಲಾನುಭವಿಗೆ ಸಹಾಯಧನ ಗರಿಷ್ಟ ಮಿತಿ ರೂ 50,000/–ದ ವರೆಗೆ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಶೇ 90ರ ಸಹಾಯಧನವನ್ನು ಪ್ರತಿ ರೈತ ಫಲಾನುಭವಿಗೆ ಸಹಾಯಧನ ಗರಿಷ್ಟ ಮಿತಿ ರೂ 90,000/–ದ ವರೆಗೆ ಮಾತ್ರ ನೀಡಲಾಗುವುದು.
26	ತೋಟಗಾರಿಕೆ ಬೆಳೆಯಲ್ಲಿ ನಿಖರ ಬೇಸಾಯ	ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ತೋಟಗಾರಿಕೆ ಬೆಳೆಯಲ್ಲಿ ನಿಖರ ಬೇಸಾಯ ಪದ್ಧತಿಯಲ್ಲಿ ಬೆಳೆಯಲು ತಗಲುವ ಒಟ್ಟಾರೆ ವೆಚ್ಚದ ಶೇ. 90 ರಷ್ಟನ್ನು ಗರಿಷ್ಟ ಮಿತಿ ಪ್ರತಿ ಎಕರೆಗೆ ಗರಿಷ್ಟ ರೂ 45,000/– ದಂತೆ, ಪ್ರತಿ ಫಲಾನುಭವಿಗೆ ಗರಿಷ್ಟ 2 ಎಕರೆ ಪ್ರದೇಶಕ್ಕೆ ಮೀರದಂತೆ, ಸಹಾಯಧನವನ್ನು ವಿತರಿಸಲಾವುದು.
27	ಭೂ ಸಮೃದ್ಧಿ ಯೋಜನೆ	ಸಿ.ಜಿ.ಐ.ಎ.ಆರ್. ಸಂಸ್ಥೆಗಳ ಸಹಯೋಗದೊಂದಿಗೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಕ್ಲಸ್ಟರ್ ಮಟ್ಟದಲ್ಲಿ ನೂತನ ತಾಂತ್ರಿಕತೆಗಳನ್ನು ಗುರುತಿಸಿ, ಕಾರ್ಯಕ್ರಮಗಳನ್ನು ರೂಪಿಸಿ, ಬೆಳೆ ಉತ್ಪಾದನೆಯನ್ನು ಶೇ. 20 ರಷ್ಟು ಹೆಚ್ಚಿಸುವುದು ಅದರಂತೆ ರೈತರ ಆರ್ಥಿಕ ಮಟ್ಟವನ್ನು ಹೆಚ್ಚಿಸುವುದು ಹಾಗೂ ರೈತರ ಸಾಮರ್ಥ್ಯ, ಅಭಿವೃದ್ಧಿ ಮತ್ತು ಕೌಶಲ್ಯವನ್ನು ಹೆಚ್ಚಿಸಲಾಗುವುದು.
28	**ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ**	
ಅ	**ಹೊಸ ತೋಟಗಳ ಸ್ಥಾಪನೆ**	
1	ಹಣ್ಣುಗಳು (ವಾರ್ಷಿಕ ಬೆಳೆ) ಬಾಳೆ	ಪ್ರತಿ ಹೆ. ಗೆ ಶೇ. 50 ರಂತೆ 19,500/– ರೂ. ಗಳನ್ನು ನೀಡಲಾಗುವುದು. ನಿರ್ವಹಣೆಗೆ ರೂ. 7500/– ಸಹಾಯಧನ ನೀಡಲಾಗುವುದು. ಪ್ರತಿ ಒಬ್ಬ ಫಲಾನುಭವಿ ಗರಿಷ್ಟ 4 ಹೆ. ವರೆಗೂ ಸಹಾಯಧನಕ್ಕೆ ಅರ್ಹರಾಗಿರುತ್ತಾರೆ.
2	ಸಾಂಬಾರು ಮತ್ತು ಸುಗಂಧ ದ್ರವ್ಯ ಬೆಳೆಗಳು (ಲವಂಗ ಬೆಳೆಗಳು)	ಪ್ರತಿ ಫಲಾನುಭವಿಗೆ ಶೇ. 50 ರಂತೆ ರೂ. 20,000/– ಸಹಾಯಧನ ನೀಡಲಾಗುವುದು.
ಆ	**ಹಳೆಯ ತೋಟಗಳ ಪುನಶ್ಚೇತನ ಅಥವಾ ಬದಲಾವಣೆ**	
1	ಕಾಳುಮೆಣಸು ಪುನಶ್ಚೇತನ	ಪ್ರತಿ ಫಲಾನುಭವಿಗೆ ಶೇ. 50 ರಂತೆ ರೂ. 10,000/– ಗರಿಷ್ಟ 2 ಹೆ ವಿಸ್ತೀರ್ಣದವರೆಗೆ ರೂ. 20,000/– ಸಹಾಯಧನ ನೀಡಲಾಗುವುದು.
ಇ	**ಕೋಯ್ಲೋತ್ತರ ನಿರ್ವಹಣೆ**	
1	ಪ್ಯಾಕ್ ಹೌಸ್	ಪ್ರತಿ ಘಟಕಕ್ಕೆ ಶೇ. 50 ರಂತೆ ಗರಿಷ್ಟ ರೂ. 2.00 ಲಕ್ಷ ಸಹಾಯಧನವನ್ನು ನೀಡಲಾಗುವುದು.
2	ಈರುಳ್ಳಿ ಶೇಖರಣಾ ಘಟಕ	ಪ್ರತಿ ಘಟಕಕ್ಕೆ ರೂ. 87,500/– ರಂತೆ ಸಹಾಯಧನ ನೀಡಲಾಗುವುದು.
3	ಪ್ರಾಥಮಿಕ ಸಂಸ್ಕರಣೆ/ ಸಂಚಾರಿ ಸಂಸ್ಕರಣೆ	ಪ್ರತಿ ಘಟಕಕ್ಕೆ ಶೇ. 40 ರಂತೆ ಗರಿಷ್ಟ ರೂ 10.00 ಲಕ್ಷ ಸಹಾಯಧನ ನೀಡಲಾಗುವುದು.

ಈ	**ಸಂರಕ್ಷಿತ ಬೇಸಾಯ ಕಾರ್ಯಕ್ರಮಗಳು**		
1	ಹಸಿರು ಮನೆ (ಟ್ಯುಬ್ಯುಲರ್ ಸ್ಟ್ರಕ್ಚರ್)	1000.00 (1ರಿಂದ 560 ಚ.ಮೀ ರವರೆಗೆ) 921.00(560ರಿಂದ 1056 ಚ.ಮೀ ವರೆಗೆ) 837.00(1056ರಿಂದ 2080 ಚ.ಮೀ ವರೆಗೆ) 773.00 (2080 ರಿಂದ 4000 ಚ.ಮೀ ವರೆಗೆ)	ರೂ. 500/– ರಂತೆ ಶೇ. 50ರ ಸಹಾಯಧನ ಪ್ರತಿ ಚ.ಮೀ ರೂ. 460.50/– ರಂತೆ ಶೇ. 50ರ ಸಹಾಯಧನ ಪ್ರತಿ ಚ.ಮೀ ರೂ. 418.50/– ರಂತೆ ಶೇ. 50ರ ಸಹಾಯಧನ ಪ್ರತಿ ಚ.ಮೀ ರೂ. 386.5/– ರಂತೆ ಶೇ. 50 ರ ಸಹಾಯಧನ ಪ್ರತಿ ಚ.ಮೀ
2	ನೆರಳು ಪರದೆ (ಟ್ಯುಬ್ಯುಲರ್ ಸ್ಟ್ರಕ್ಚರ್)	384.00/ ಚ.ಮೀ ಗೆರೂ. 192/– ರಂತೆ ಶೇ. 50 ರ ಸಹಾಯಧನ ಪ್ರತಿ ಚ.ಮೀ	
ಉ	**ನೀರು ಸಂಗ್ರಹಣಾ ಘಟಕ**		
1	ಕೃಷಿ ಹೊಂಡ	ತೋಟಗಾರಿಕೆ ಬೆಳೆಗಳ ಉತ್ಪಾದನೆ ಹೆಚ್ಚಿಸಲು 20*20*3 ಮೀ ಅಳತೆಯ ಕೃಷಿ ಹೊಂಡವನ್ನು ನಿರ್ಮಿಸಲು ರೂ. 75000/– ಗಳ ಸಹಾಯಧನವನ್ನು ಪ್ರತಿ ಘಟಕಕ್ಕೆ ನೀಡಲಾಗುವುದು.	
ಊ	ತೋಟಗಾರಿಕೆಯಲ್ಲಿ ಯಾಂತ್ರೀಕರಣ	ಯಾಂತ್ರೀಕರಣ ಕಾರ್ಯಕ್ರಮದಡಿ 20 ಹೆಚ್, ಪಿ. ಗಿಂತ ಕಡಿಮೆ ಸಾಮರ್ಥ್ಯದ ಟ್ರಾಕ್ಟರ್ ಖರೀದಿಗೆ ರೂ. 30000ಗಳ ಸಹಾಯಧನ ನೀಡಲಾಗುವುದು.	
ಋ	ಸಮಗ್ರ ಪೋಷಕಾಂಶ ನಿರ್ವಹಣೆ / ಸಮಗ್ರ ಕೀಟ ನಿರ್ವಹಣೆ	ಪ್ರತಿ ಫಲಾನುಭವಿಗೆ ಶೇ. 30 ರಂತೆ ರೂ 1,200/– ಹೆ ಗೆ ಮಿತಿಗೊಳಿಸಿ ಸಹಾಯಧನ ನೀಡಲಾಗುವುದು.	
30	ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ	ತೋಟಗಾರಿಕೆ ಬೆಳೆಗಳಾದ ತೆಂಗು, ಅಡಿಕೆ, ಕಾಳುಮೆಣಸು, ಮಾವು, ಸಪೋಟ, ನುಗ್ಗೆ, ನಿಂಬೆ, ಕಿತ್ತಳೆ, ಗೋಡಂಬಿ, ಕೋಕೋ ಬೆಳೆಗಳ ಪ್ರದೇಶ ವಿಸ್ತರಣೆಗೆ, ತೆಂಗು, ಅಡಿಕೆ ಮಾವು ಪುನಶ್ಚೇತನಾ, ಈರುಳ್ಳಿ ಶೇಖರಣಾ ಘಟಕ, ಕೊಳವೆ ಬಾವಿ ಪುನಶ್ಚೇತನಾ ಪೌಷ್ಠಿಕ ತೋಟ ನಿರ್ಮಾಣ, ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ ಕಾರ್ಯಕ್ರಮಗಳಲ್ಲಿ ವೈಯಕ್ತಿಕ ಫಲಾನುಭವಿಗೆ ಕೂಲಿ ದರವನ್ನು ಮತ್ತು ಸಾಮಾಗ್ರಿ ವೆಚ್ಚವನ್ನು ಭರಿಸಲಾಗುವುದು.	
31	ಹವಮಾನ ಆಧಾರಿತ ಬೆಳೆ ವಿಮಾ ಯೋಜನೆ	ಹವಮಾನ ಆಧಾರಿತ ಬೆಳೆ ವಿಮೆ ಯೋಜನೆಯನ್ನು ಸರಳಗೊಳಿಸಲು ಮತ್ತು ರೈತರಿಗೆ ಸುಲಭ ದರದಲ್ಲಿ ಪ್ರೀಮಿಯಂ ಹಾಗೂ ಉತ್ತಮ ಸೇವೆ ಒದಗಿಸಲು WBCIS ಯೋಜನೆಯನ್ನು ಜಾರಿಗೊಳಿಸಿ ಅನುಮೋದನೆ ನೀಡಿರುತ್ತದೆ. ಈ ಯೋಜನೆಯಲ್ಲಿ ಒಳಪಡಿಸಲಾಗಿರುವ ಎಲ್ಲಾ ಬೆಳೆಗಳಿಗೆ ಬೆಳೆ ಸಾಲ ಪಡೆಯುವ ರೈತರನ್ನು ಕಡ್ಡಾಯವಾಗಿ ಒಳಪಡಿಸಲಾಗುತ್ತದೆ. ಮುಂಗಾರು ಹಂಗಾಮಿನಲ್ಲಿ ತೋಟಗಾರಿಕೆ ಬೆಳೆಗಳ ವಿಮಾ ಕಂತು ಮೊತ್ತದ ಶೇ. 5 ರಷ್ಟು ಇರುತ್ತದೆ.	

ತೋಟಗಾರಿಕೆ ಉಪನಿರ್ದೇಶಕರು
ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು

ಗ್ರಾಮೀಣ ಕೈಗಾರಿಕೆ ಇಲಾಖೆ

ಭಾಗ : 1 (ಅ)

ಕಛೇರಿ ಪ್ರಾರಂಭಿಸಿದ ದಿನಾಂಕ : 1–4–1987

ಕಟ್ಟಡ : ಸರ್ಕಾರಿಕಟ್ಟಡ

ಕ್ರ.ಸಂ	ಹುದ್ದೆಗಳ ವಿವರ	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾದ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ
ಅ] ಉಪನಿರ್ದೇಶಕರು(ಖಾ.ಗ್ರಾ)ರವರಕಛೇರಿ				
1	ಉಪನಿರ್ದೇಶಕರು(ಖಾ.ಗ್ರಾ)	01	00	01
2	ತಾಲ್ಲೂಕುಕೈಗಾರಿಕಾ ವಿಸ್ತರಣಾಧಿಕಾರಿಗಳು	07	00	07
3	ಪ್ರಥಮದರ್ಜೆ ಸಹಾಯಕರು	01	00	01
4	ಟೈಪಿಸ್ಟ್	01	00	01
5	ಗ್ರೂಪ್–ಡಿ	01	00	01
	ಒಟ್ಟು	**11**	**00**	**11**
ಆ] ಕುಶಲಕರ್ಮಿತರಬೇತಿ ಸಂಸ್ಥೆ				
1	ಸಹಾಯಕ ನಿರ್ದೇಶಕರು	01	00	01
2	ಕಮ್ಮಾರಿಕೆ ಭೋದಕರು	01	01	00
3	ಬೆತ್ತದ ಭೋದಕರು	01	01	00
	ಒಟ್ಟು	**03**	**02**	**01**
	ಒಟ್ಟು (ಅ+ಆ)	**14**	**02**	**12**

ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ವಿವರಗಳು

ಕ್ರಸಂ	ಹೆಸರು ಮತ್ತು ಪದನಾಮ	ಯಾವ ದಿನಾಂಕದಿಂದ
1	ಶ್ರೀ ಎನ್‌ಚಂದ್ರಶೇಖರ್, ಪ್ರಭಾರಉಪನಿರ್ದೇಶಕರು(ಖಾ.ಗ್ರಾ)	01.08.2018
2	ಎಸ್.ಬಿ ಪರಮೇಶ್ವರಪ್ಪ, ಬೆತ್ತದ ಬೋಧಕರು	21.11.1984
3	ಶ್ರೀ ಡೇವಿಡ್‌ಅಮೋಸ್, ಕಮ್ಮಾರಿಕೆ ಭೋದಕರು	27.11.1984

ಭಾಗ : 1(ಆ) **ಸಿಬ್ಬಂದಿ ವೆಚ್ಚದ ವಿವರಗಳು: ಮಾರ್ಚ್–2019ರವರೆಗೆ**

ಲೆಕ್ಕಶೀರ್ಷಿಕೆ	ವೇತನ ಮತ್ತು ಭತ್ಯೆ	ಪ್ರವಾಸ ಭತ್ಯೆ	ಕಛೇರಿ ವೆಚ್ಚ	ಒಟ್ಟು
2851–00–107–0–27 ಯೋಜನೇತರ	218512–00	62032–00	662337–00	942881–00
2852–00–101–0–26 ಯೋಜನೇತರ	1922166–00	31573–00	252253–00	2205992–00
ಒಟ್ಟು	**2140678–00**	**93605–00**	**914590–00**	**3148873–00**

ಭಾಗ : –2 ಅಭಿವೃದ್ಧಿ ಯೋಜನೆಗಳ ವಿವರ

2018–19 ನೇ ಸಾಲಿನಲ್ಲಿಉಪನಿರ್ದೇಶಕರು(ಖಾ.ಗ್ರಾ)ರವರಕಛೇರಿ, ಗ್ರಾಮೀಣಕೈಗಾರಿಕೆ, ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು ರವರು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ವಿವರಗಳು.

ಜಿಲ್ಲಾ ಪಂಚಾಯಿತಿ ಕಾರ್ಯಕ್ರಮಗಳು

1. ಜಿಲ್ಲಾಉದ್ಯಮಕೇಂದ್ರ (ಗ್ರಾಮೀಣಕುಶಲಕರ್ಮಿಯೋಜನೆ):

1. ಜಿಲ್ಲಾ ಉದ್ಯಮಕೇಂದ್ರ (ಗ್ರಾಮೀಣಕುಶಲಕರ್ಮಿಯೋಜನೆ):

2018–19ನೇ ಸಾಲಿನ ಈ ಯೋಜನೆಯಲ್ಲಿರೂ 30,000–00 ಯೋಜನಾ ವೆಚ್ಚದೊಳಗಿನ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದಅತಿ ಸಣ್ಣ ಕೈಗಾರಿಕೆಗಳಿಗೆ ಶೇ.60 ರಷ್ಟುಗರಿಷ್ಟರೂ 10,000–00 ಸಹಾಯಧನದಂತೆ 100 ಅತಿ ಸಣ್ಣ ಕೈಗಾರಿಕೆಗಳಿಗೆ ಸಹಾಯಧನ ನೀಡಲುರೂ 10.00 ಲಕ್ಷ ಅನುದಾನವಿರಿಸಿ ಕಾರ್ಯಕ್ರಮರೂಪಿಸಲಾಗಿದ್ದು, ಜಿಲ್ಲಾ ಪಂಚಾಯಿತಿಯಿಂದ ಈ ಯೋಜನೆಗಾಗಿರೂ 10.00 ಲಕ್ಷ ಹಣ ಬಿಡುಗಡೆಯಾಗಿದ್ದು, 76 ಅತಿ ಸಣ್ಣ ಕೈಗಾರಿಕೆಗಳಿಗೆ ರೂ 7.60 ಲಕ್ಷ ಹಣ ವೆಚ್ಚ ಮಾಡಲಾಗಿದೆ.

2. ವಂಶ ಪಾರಂಪರ್ಯ ಕುಶಲಕರ್ಮಿಗಳಿಗೆ ಉಚಿತ ಸುಧಾರಿತಉಪಕರಣ ವಿತರಣೆ :

2018–19ನೇ ಸಾಲಿನ ಈ ಯೋಜನೆಯಡಿ ವಂಶ ಪಾರಂಪರ್ಯ ಕುಶಲಕರ್ಮಿಗಳಾದ ಮರಗೆಲಸ, ಗಾರೆಕೆಲಸ, ದೋಬಿ, ಕಮ್ಮಾರಿಕೆ, ಕ್ಷೌರಿಕ, ಚಮ್ಮಾರಿಕೆ ಹಾಗೂ ಟೈಲರಿಂಗ್ ಮುಂತಾದ ಕಸುಬುಗಳನ್ನು ನಡೆಸುವಕಸುಬುದಾರರಿಗೆತಲಾರೂ 8,000–00 ಮೌಲ್ಯದ ಸುಧಾರಿತ ಉಪಕರಣಗಳನ್ನು ನೀಡುವಕಾರ್ಯಕ್ರಮಕ್ಕಾಗಿರೂ 20.00 ಲಕ್ಷ ನಿಗದಿಪಡಿಸಿದ್ದು, 250 ಫಲಾನುಭವಿಗಳಿಗೆ ಸೌಲಭ್ಯ ನೀಡುವಗುರಿ ಹೊಂದಲಾಗಿದೆ.

ಜಿಲ್ಲಾ ಪಂಚಾಯಿತಿಯಿಂದರೂ 20.00 ಲಕ್ಷಅನುದಾನ ಬಿಡುಗಡೆಯಾಗಿದ್ದು 250 ಫಲಾನುಭವಿಗಳಿಗೆ ಸುಧಾರಿತಉಪಕರಣ ಖರೀದಿಸಿ 20.00 ಲಕ್ಷರೂ ವೆಚ್ಚ ಭರಿಸಲಾಗಿದೆ.

ತಾಲ್ಲೂಕು ಪಂಚಾಯಿತಿ ಕಾರ್ಯಕ್ರಮಗಳು

1. ವಿಶೇಷ ಘಟಕಯೋಜನೆ :–

ಈ ಯೋಜನೆಯಲ್ಲಿಒಟ್ಟುರೂ 4.65 ಲಕ್ಷಅನುದಾನ ನಿಗಧಿಪಡಿಸಿದ್ದು ಪರಿಶಿಷ್ಟ ಜಾತಿಯ 91 ಫಲಾನುಭವಿಗಳಿಗೆ ತಲಾ 5,000–00 ಮೌಲ್ಯದ ಸುಧಾರಿತಉಪಕರಣವನ್ನು ನೀಡುವಕಾರ್ಯಕ್ರಮರೂಪಿಸಲಾಗಿದೆ.

ತಾಲ್ಲೂಕು ಪಂಚಾಯಿತಿಗಳಿಂದ ರೂ 4.65 ಲಕ್ಷ ಬಿಡುಗಡೆಯಾಗಿದ್ದು 91 ಫಲಾನುಭವಿಗಳಿಗೆ ಸುಧಾರಿತಉಪಕರಣ ನೀಡಿಒಟ್ಟುರೂ 4.65 ಲಕ್ಷರೂ ವೆಚ್ಚ ಭರಿಸಲಾಗಿದೆ

2. ಗಿರಿಜನ ಉಪಯೋಜನೆ :–

ಈ ಯೋಜನೆಯಲ್ಲಿಒಟ್ಟುರೂ 1.80 ಲಕ್ಷಅನುದಾನ ನಿಗಧಿಪಡಿಸಿದ್ದು ಪರಿಶಿಷ್ಟ ಪಂಗಡದ 34 ಫಲಾನುಭವಿಗಳಿಗೆ ತಲಾ 5,000–00 ಮೌಲ್ಯದ ಸುಧಾರಿತಉಪಕರಣವನ್ನು ನೀಡುವಕಾರ್ಯಕ್ರಮರೂಪಿಸಲಾಗಿದೆ.

ತಾಲ್ಲೂಕು ಪಂಚಾಯಿತಿಗಳಿಂದ ರೂ 1.80 ಲಕ್ಷ ಬಿಡುಗಡೆಯಾಗಿದ್ದು 34 ಫಲಾನುಭವಿಗಳಿಗೆ ಸುಧಾರಿತಉಪಕರಣ ನೀಡಿಒಟ್ಟುರೂ 1.80 ಲಕ್ಷರೂ ವೆಚ್ಚ ಭರಿಸಲಾಗಿದೆ.

ಉಪ ನಿರ್ದೇಶಕರು (ಖಾ. ಗ್ರಾ.)
ಗ್ರಾಮೀಣ ಕೈಗಾರಿಕೆಗಳು, ಜಿ. ಪಂ. ಚಿಕ್ಕಮಗಳೂರು

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಕ್ರೀಡಾ ಚಟುವಟಿಕೆ :

2018–19ನೇ ಸಾಲಿನ ವಿಶ್ವ ವಿಕಲಚೇತನರ ದಿನಾಚರಣೆಯನ್ನು ಸಂಘಟಿಸಲು ರೂ.80,000–00 ಗಳನ್ನು ಜಿಲ್ಲಾ ಅಂಗವಿಕಲರ ಮತ್ತು ಹಿರಿಯ ನಾಗರೀಕರ ಕಲ್ಯಾಣಾಧಿಕಾರಿಗಳು ಇವರಿಗೆ ನೀಡಲಾಗಿದೆ.

2018–19ನೇ ಸಾಲಿನ ರಾಜ್ಯ ಮಟ್ಟದ ಯುವಜನೋತ್ಸವವನ್ನು ದಿನಾಂಕ:07–12–2018 ರಿಂದ 09–12–2018ರ ವರೆಗೆ ತುಮಕೂರು ಜಿಲ್ಲೆಯಲ್ಲಿ ಸಂಘಟಿಸಲಾಗಿದೆ. ಇದರಲ್ಲಿ ಭಾಗವಹಿಸಿದ ಜಿಲ್ಲಾ ತಂಡಕ್ಕೆ ಟಿ.ಎ/ ಡಿ.ಎ ರೂ. 33,975–00 ಗಳನ್ನು ನೀಡಲಾಗಿದೆ.

2018–19ನೇ ಸಾಲಿನ ಚದುರಂಗ ತರಬೇತಿ ಶಿಬಿರವನ್ನು ಸಂಘಟಿಸಲು ರೂ. 40,000–00 ಗಳನ್ನು ಮಂಡ್ಯ ಚೆಸ್ ಅಕಾಡೆಮಿ, ಮಂಡ್ಯ ಇವರಿಗೆ ನೀಡಲಾಗಿದೆ.

2018–19ನೇ ಸಾಲಿನಲ್ಲಿ ಸಾಹಸ ಕ್ರೀಡೆ ಮತ್ತು ಚಾರಣ ಶಿಬಿರವನ್ನು ಸಂಘಟಿಸಲು ರೂ.60,000–00ಗಳನ್ನು ಪ್ರತಿಬಿಂಬ ಯುವ ಪ್ರತಿಷ್ಠಾನ, ಮೂಡಿಗೆರೆ ಇವರಿಗೆ ನೀಡಲಾಗಿದೆ.

2018–19ನೇ ಸಾಲಿನಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ತರಬೇತಿ ಸಂಘಟಿಸಲು ಯುರೇಕಾ ಅಕಾಡೆಮಿ ಇವರಿಗೆ ರೂ.9700–00ಗಳನ್ನು ನೀಡಲಾಗಿದೆ.

2018–19ನೇ ಸಾಲಿನಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಕ್ರೀಡಾ ಸಾಧನೆ ಮಾಡಿದ ಅಂಗವಿಕಲ ಕ್ರೀಡಾಪಟುಗಳಿಗೆ ತಲಾ ರೂ.10,000/–ಗಳಂತೆ 5 ಕ್ರೀಡಾಪಟುಗಳಿಗೆ ಒಟ್ಟು ರೂ.50,000/–ಗಳನ್ನು ಸನ್ಮಾನಿಸಿ ನೀಡಲಾಗಿದೆ.

2018–19ನೇ ಸಾಲಿನಲ್ಲಿ ರಾಷ್ಟ್ರ ಮತ್ತು ರಾಜ್ಯ ಮಟ್ಟದ ಕ್ರೀಡಾಕೂಟಗಳಲ್ಲಿ ಪದಕ ವಿಜೇತರಾದ 37 ಕ್ರೀಡಾಪಟುಗಳಿಗೆ ತಲಾ ರೂ.6,189/–ಗಳಂತೆ ಒಟ್ಟು ರೂ.2,28,993–00 ಗಳನ್ನು ವೆಚ್ಚಭರಿಸಲಾಗಿದೆ.

2018–19ನೇ ಸಾಲಿನಲ್ಲಿ ಜಿಲ್ಲಾ ಮಟ್ಟದ ಯುವ ತರಬೇತಿ ಕಾರ್ಯಾಗಾರವನ್ನು ಸಂಘಟಿಸಲು ಮಿತ್ರ ಜಾನಪದ ಕಲಾ ಸಂಘ (ರಿ), ಮೂಡಿಗೆರೆ ಇವರಿಗೆ ರೂ.20,000/–ಗಳನ್ನು ನೀಡಲಾಗಿದೆ.

2018–19ನೇ ಸಾಲಿನಲ್ಲಿ ಬಾಲಮಂದಿರಗಳಲ್ಲಿರುವ ಬಾಲಕಿಯರಿಗೆ ಮತ್ತು ಇತರರಿಗೆ ಆತ್ಮ ರಕ್ಷಣಾ ತರಬೇತಿಯನ್ನು ಸಂಘಟಿಸಲು ಚಿಕ್ಕಮಗಳೂರು ಜಿಲ್ಲಾ ಟೇಕ್ವಾಂಡೊ ಸಂಸ್ಥೆ (ನೋಂ.) ಇವರಿಗೆ ರೂ.37,500/– ಗಳನ್ನು ನೀಡಲಾಗಿದೆ.

2018–19ನೇ ಸಾಲಿನಲ್ಲಿ ವಾಲಿಬಾಲ್, ಅಥ್ಲೆಟಿಕ್ಸ್, ಹ್ಯಾಂಡ್‌ಬಾಲ್ ಬ್ಯಾಸ್ಕೆಟ್‌ಬಾಲ್ ತರಬೇತಿ ಶಿಬಿರಗಳನ್ನು ಸಂಘಟಿಸಲು ತಲಾ ರೂ.10,000/–ಗಳಂತೆ ಒಟ್ಟು ರೂ.50,000/–ಗಳನ್ನು ಅಸೋಸಿಯೇಷನ್ ಗಳಿಗೆ ನೀಡಲಾಗಿದೆ.

7. ಯುವಜನ ಸಂಘಗಳು :

ಸರ್ಕಾರಿ ಆದೇಶ ಸಂಖ್ಯೆ:ಯುಸೇಇ/77/ಯುಸೇಕ್ರೀ/2010 ಬೆಂಗಳೂರು, ದಿ:2–2–11ರನ್ವಯ ಜಿಲ್ಲಾ ಯುವಜನ ಸೇವಾ ಮತ್ತು ಕ್ರೀಡಾ ಮಂಡಳಿಯೊಂದಿಗೆ ನೋಂದಾವಣೆಗೊಳ್ಳುವ ಯುವಕ ಸಂಘ ಮತ್ತು ಯುವತಿ ಮಂಡಳಿಗಳು ಸಹಕಾರ ಸಂಘಗಳ ನೋಂದಾವಣೆ ಇಲಾಖೆಯಲ್ಲಿ ನೋಂದಾವಣೆ ಮಾಡಿಸಿ ಯುವಜನ ಸಂಘಗಳಿಗೆ ರೂ.100/–ಗಳ ಚಲನ್ ಅನ್ನು ಮತ್ತು ಯುವಜನೇತರ ಸಂಘಗಳಿಗೆ ರೂ.500/–ಗಳ ಚಲನ್ ಅನ್ನು ಜಿಲ್ಲಾ ಖಜಾನೆಗೆ ಪಾವತಿಸಿ ನಂತರ ಯುವಜನಸೇವಾ ಮತ್ತು ಕ್ರೀಡಾ ಇಲಾಖೆಯಲ್ಲಿ ನವೀಕರಣ ಅಥವಾ ಹೊಸದಾಗಿ ನೋಂದಾವಣೆಮಾಡಿಕೊಳ್ಳುವಂತೆ ತಿಳಿಸಲಾಗಿದ್ದು ಮಾಹಿತಿ ಯನ್ನು ಸಂಘ ಸಂಸ್ಥೆಗಳಿಗೆ ತಿಳಿಸಲಾಗಿದ್ದು ಸದರಿ ಮಾದರಿಯನ್ನು ಅನುಸರಿಸಲಾಗುತ್ತಿದೆ. ಸದರಿ ಸಾಲಿನಲ್ಲಿ 192 ಯುವಕ/ಯುವತಿ ಸಂಘ ಗಳು ನೊಂದಾವಣೆಗೊಂಡಿರುತ್ತದೆ.

8. ಯುವಜನೋತ್ಸವ :

2018–19ನೇ ಸಾಲಿನ ಜಿಲ್ಲಾ ಮಟ್ಟದ ಯುವಜನೋತ್ಸವವನ್ನು ದಿನಾಂಕ:03–11–2018ರಂದು ಕುವೆಂಪು ಕಲಾಮಂದಿರ, ಚಿಕ್ಕಮಗಳೂರಿನಲ್ಲಿ ನಡೆಸಲಾಯಿತು. ಸದರಿ ಕಾರ್ಯಕ್ರಮಕ್ಕೆ ರೂ.2,47,500–00 ಗಳನ್ನು ವೆಚ್ಚಭರಿಸಲಾಗಿದೆ.

9. ಯುವಜನಮೇಳ :

2018–19ನೇ ಸಾಲಿನ ಜಿಲ್ಲಾ ಮಟ್ಟದ ಯುವಜನಮೇಳವನ್ನು ದಿ:01–02–2019 ರಿಂದ 03–02–2019ರವರೆಗೆ ಹಿರೇಮಗಳೂರಿನಲ್ಲಿ ನಡೆಸಲಾಯಿತು. ಸದರಿ ಕಾರ್ಯಕ್ರಮಕ್ಕೆ ರೂ. 6,02,000–00 ಗಳನ್ನು ವೆಚ್ಚಭರಿಸಲಾಗಿದೆ.

10. ಕ್ರೀಡಾಶಾಲೆ :

2018–19ನೇ ಸಾಲಿನಲ್ಲಿ ಇಲಾಖೆಯಿಂದ (5ನೇ ತರಗತಿಯಿಂದ 7ನೇ ತರಗತಿವರೆಗೆ) ಕ್ರೀಡಾವಸತಿ ನಿಲಯವನ್ನು ಅಥ್ಲೆಟಿಕ್, ವಾಲಿಬಾಲ್ ವಿಭಾಗಗಳಲ್ಲಿ ನಡೆಸುತ್ತಿದ್ದು, 45 ಕ್ರೀಡಾಪಟುಗಳು ಕ್ರೀಡಾ ವಸತಿ ನಿಲಯದಲ್ಲಿ ಪ್ರವೇಶ ಪಡೆದಿದ್ದು, ಅವರುಗಳಿಗೆ ಇಲಾಖೆಯ ವತಿಯಿಂದ ಊಟೋಪಹಾರ, ಕ್ರೀಡಾ ತರಬೇತಿ ನೀಡಲಾಗುತ್ತಿದೆ.

ಕ್ರೀಡಾಪಟು ಯೋಗಕ್ಷೇಮಕ್ಕಾಗಿ ಮಹಿಳಾ ಸಹಾಯಕರನ್ನು, ಬಟ್ಟೆ ತೊಳೆಯುವವರನ್ನು ಹಾಗೂ ಪಾಠ ಹೇಳಿಕೊಡಲು ಶಿಕ್ಷಕರನ್ನು ನೇಮಿಸಿಕೊಳ್ಳಲಾಗಿದೆ.

11. ಜಿಲ್ಲಾ ಕ್ರೀಡಾಂಗಣ :

ಜಿಲ್ಲಾ ಶತಮಾನೋತ್ಸವ ಕ್ರೀಡಾಂಗಣ ಮತ್ತು ಸುಭಾಷ್ ಚಂದ್ರಬೋಸ್ ಜಿಲ್ಲಾ ಆಟದ ಮೈದಾನಗಳು ಕ್ರೀಡಾ ಚಟುವಟಿಕೆಗಳಿಗೆ ಲಭ್ಯ ಇರುತ್ತವೆ. ಒಳಾಂಗಣ ಕ್ರೀಡಾಂಗಣ, ಪೆವಿಲಿಯನ್ ಕಟ್ಟಡ, 400 ಮೀ ಸಿಂಡರ್ ಟ್ರ್ಯಾಕ್, ಬಾಕ್ಸ್ ಚರಂಡಿಗಳು, ಬ್ಯಾಸ್ಕೆಟ್ ಬಾಲ್ ಅಂಕಣ, ಪ್ರೇಕ್ಷಕರ ಗ್ಯಾಲರಿ, ವಾಲಿಬಾಲ್, ಖೋಖೋ, ಕಬ್ಬಡ್ಡಿ, ಫುಟ್‌ಬಾಲ್ ಅಂಕಣಗಳು ಮತ್ತು ಮಲ್ಟಿಜಿಮ್ ಸೌಲಭ್ಯಗಳು ಇರುತ್ತದೆ.

12. ಈಜುಕೊಳ :

ಜಿಲ್ಲಾ ಕ್ರೀಡಾಂಗಣದಲ್ಲಿ ಈಜುಕೊಳವನ್ನು ರೂ. 65.00 ಲಕ್ಷಗಳಲ್ಲಿ ನಿರ್ಮಿಸಲಾಗಿದ್ದು, ಸದರಿ ಈಜುಕೊಳವನ್ನು ಇಲಾಖೆಯ ವತಿಯಿಂದ ನಡೆಸಲಾಗುತ್ತಿದೆ. ಸಾರ್ವಜನಿಕರು, ವಿದ್ಯಾರ್ಥಿಗಳು ಈಜುಕೊಳವನ್ನು ಸಕ್ರೀಯವಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ.

13. ಮೂಡಿಗೆರೆ ತಾಲ್ಲೂಕು ಕ್ರೀಡಾಂಗಣ: :

ಮೂಡಿಗೆರೆ ತಾಲ್ಲೂಕು ಕ್ರೀಡಾಂಗಣದ ಪೂರ್ಣ ಮರು ನಿರ್ಮಾಣಕ್ಕೆ ರೂ.1.20 ಕೋಟಿಗಳ ಪ್ರಸ್ತಾವನೆಯನ್ನು ಅಧ್ಯಕ್ಷರು ತಾಲ್ಲೂಕು ಕ್ರೀಡಾಂಗಣ ಸಮಿತಿ ಇವರ ಮುಖಾಂತರ ಕೇಂದ್ರ ಕಛೇರಿಗೆ ಸಲ್ಲಿಸಲಾಗಿದೆ.

14. ಕಡೂರು ತಾಲ್ಲೂಕು ಕ್ರೀಡಾಂಗಣ :

ಕಡೂರು ತಾಲ್ಲೂಕು ಕ್ರೀಡಾಂಗಣ ನಿರ್ವಹಣೆಗೆ 4.00 ಲಕ್ಷ ರೂ ಅನುದಾನವಿದ್ದು ಇದರಲ್ಲಿ ಬೋರ್‌ವೆಲ್, ಓವರ್ ಹೆಡ್‌ಟ್ಯಾಂಕ್ ಮತ್ತು ಕುಡಿಯುವ ನೀರಿನ ನಲ್ಲಿ ಘಟಕ ಅಳವಡಿಸುವುದು ಹಾಗೂ ಕ್ರೀಡಾಂಗಣ ದುರಸ್ಥಿ ಮಾಡಲಾಗಿದೆ.

15. ನ.ರಾ.ಪುರ ತಾಲ್ಲೂಕು :

ನ.ರಾ.ಪುರ ತಾಲ್ಲೂಕು ಕ್ರೀಡಾಂಗಣ ನಿರ್ವಹಣೆಗೆ 4.00 ಲಕ್ಷ ರೂ ಅನುದಾನವಿದ್ದು ಇದರಲ್ಲಿ ನರಸಿಂಹರಾಜಪುರ ತಾಲ್ಲೂಕು ಕ್ರೀಡಾಂಗಣಕ್ಕೆ ಬೋರ್‌ವೆಲ್, ಓವರ್ ಹೆಡ್‌ಟ್ಯಾಂಕ್ ಮತ್ತು ಕುಡಿಯುವ ನೀರಿನ ನಲ್ಲಿ ಘಟಕ ಅಳವಡಿಸುವುದು ಹಾಗೂ ಕ್ರೀಡಾಂಗಣ ದುರಸ್ಥಿ ಮಾಡಲಾಗಿದೆ.

16. ಮಾಜಿ ಕುಸ್ತಿಪಟುಗಳಿಗೆ ಮಾಸಾಶನ :

ಜಿಲ್ಲೆಯಲ್ಲಿರುವ ಒಟ್ಟು 110 ಕಷ್ಟಪರಿಸ್ಥಿತಿಯಲ್ಲಿರುವ ಕುಸ್ತಿ ಕ್ರೀಡಾಪಟುಗಳಿಗೆ ಮಾಸಾಶನ ಬಿಡುಗಡೆ ಮಾಡಲಾಗುತ್ತಿದೆ. 109 ಕುಸ್ತಿಪಟುಗಳಿಗೆ ರೂ.2500–00 ಗಳಂತೆ ಒಬ್ಬ ಕುಸ್ತಿಪಟುವಿಗೆ ರೂ.3000/– ಗಳಂತೆ ಜಿಲ್ಲಾ ಪಂಚಾಯಿತಿಯಿಂದ ಮಾಸಾಶನವನ್ನು ಪಾವತಿಸಲಾಗುತ್ತಿದೆ.

17. ರಾಜ್ಯ ವಲಯದ ಕಾರ್ಯಾಗಾರ ಕಾರ್ಯಕ್ರಮಗಳು :

ರಾಜ್ಯವಲಯದ ಕಾರ್ಯಕ್ರಮಗಳಾದ ಯುವ ಸಮ್ಮೇಳನ, ಯುವ ಸಪ್ತಾಹ, ನಮ್ಮೂರ ಶಾಲೆ ನಮ್ಮೂರ ಯುವಜನರು, ಯುವ ಶಕ್ತಿ ಮುಂತಾದ ಕಾರ್ಯಕ್ರಮಗಳಿಗೆ ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು ಇವರು ನೀಡುವ ಸೂಚನೆಯಂತೆ ಚಿಕ್ಕಮಗಳೂರು ಜಿಲ್ಲೆಯಲ್ಲಿ 2018–19ನೇ ಸಾಲಿನ ರಾಜ್ಯವಲಯದ ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ. ಲೆಕ್ಕಪತ್ರಗಳನ್ನು ಸಲ್ಲಿಸಲಾಗಿದೆ.

ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು
2018–19ನೇ ಸಾಲಿನ ಆರ್ಥಿಕ ಮತ್ತು ಭೌತಿಕ ಪ್ರಗತಿ ವರದಿ

ಕ್ರ. ಸಂ.	ಲೆಕ್ಕ ಶೀರ್ಷಿಕೆ ಮತ್ತು ಕಾರ್ಯಕ್ರಮ	ವಾರ್ಷಿಕ ಗುರಿ		ಜಿಲ್ಲಾಪಂಚಾಯಿತಿ ಯಿಂದ ಬಿಡುಗಡೆ ಯಾದ ಅನುದಾನ	ಖರ್ಚು		ಷರಾ
		ಆ	ಭೌ		ಆ	ಭೌ	
1	2205–00–104–0–26 ಕ್ರೀಡಾ ಕೂಟ,ರ್‍ಯಾಲಿಗಳ ಸಂಘಟನೆ ಅದರಲ್ಲಿ ಭಾಗವಹಿಸುವವರಿಗೆ ಟಿಎ/ ಡಿಎ	40.00	42	40.00	40.00	42	ತಾಲ್ಲೂಕು, ಜಿಲ್ಲಾ, ವಿಭಾಗ ಹಾಗೂ ಯುವಜನ ಮೇಳ, ಯುವಜನೋತ್ಸವ ಸ್ಪರ್ಧೆಗಳ ಸಂಘಟನೆಗೆ ಹಾಗೂ ಭಾಗವಹಿಸುವ ಸ್ಪರ್ಧಿಗಳಿಗೆ ದಿನಭತ್ಯೆ ಹಾಗೂ ಪ್ರಯಾಣ ಭತ್ಯೆಗಾಗಿ ವೆಚ್ಚಮಾಡಲಾಗಿದೆ. ತಾಲ್ಲೂಕು ದೈಹಿಕ ಶಿಕ್ಷಣ ಸಂಯೋಜಕರಿಗೆ ನಿಗದಿತ ಪ್ರಯಾಣಭತ್ಯೆ ನೀಡುವುದು, ದೈನಂದಿನ ಕ್ರೀಡಾಭ್ಯಾಸಕ್ಕೆ ಕ್ರೀಡಾ ಸಾಮಗ್ರಿಗಳನ್ನು ಖರೀದಿಸಲು, ಜಿಲ್ಲಾ ಮಟ್ಟದ ಯುವಜನಮೇಳದಲ್ಲಿ ಭಾಗವಹಿಸಿ, ವಿಜೇತರಾದವರಿಗೆ ನಗದು ಬಹುಮಾನ, ಮೈಸೂರು ವಿಭಾಗಮಟ್ಟದ ಹಾಗೂ ರಾಜ್ಯ ಮಟ್ಟದ ಯುವಜನಮೇಳದಲ್ಲಿ ಭಾಗವಹಿಸುವ ಜಿಲ್ಲಾ ಸ್ಪರ್ಧಿಗಳಿಗೆ ಪ್ರಯಾಣಭತ್ಯೆ/ ದಿನಭತ್ಯೆ, ಜಿಲ್ಲಾ & ರಾಜ್ಯಮಟ್ಟದ ಯುವಜಜನೋತ್ಸವದಲ್ಲಿ ಭಾಗವಹಿಸುವ ಜಿಲ್ಲಾ ತಂಡದ ಸ್ಪರ್ಧಿಗಳಿಗೆ ಪ್ರಯಾಣಭತ್ಯೆ/ ದಿನಭತ್ಯೆ ವಿತರಿಸಲು, ಯುವ ತರಬೇತಿ ಮತ್ತು ಕಾರ್ಯಾಗಾರ, ಸಾಹಸ ಕ್ರೀಡೆ ಮತ್ತು ಚಾರಣ ಶಿಬಿರಕ್ಕೆ ವೆಚ್ಚ ಭರಿಸಲಾಗಿದೆ.
2	2205–00–104–0–27 ಸಹಾಯಕ ಯುವಜನ ಸೇವಾಧಿಕಾರಿ	15.43	1	15.43	15.03	1	ಅಧಿಕಾರಿಗಳ, ಸಿಬ್ಬಂದಿಗಳ ವೇತನಕ್ಕಾಗಿ ಹಾಗೂ ದೂರವಾಣಿ ವೆಚ್ಚ, ಕಛೇರಿ ವೆಚ್ಚಕ್ಕಾಗಿ ವೆಚ್ಚ ಭರಿಸಲಾಗಿದೆ.
3	2205–00–104–0–28 ಕ್ರೀಡಾಂಗಣ ಮತ್ತು ಇತರೆಗಳ ನಿರ್ಮಾಣ ಮತ್ತು ನಿರ್ವಹಣೆ	60.00	8	60.00	60.00	8	ಜಿಲ್ಲಾಕ್ರೀಡಾಂಗಣ, ಸುಭಾಷ್‌ಚಂದ್ರಬೋಸ್ ಆಟದ ಮೈದಾನ ನಿರ್ವಹಣೆಗೆ, ಕಡೂರು, ಮೂಡಿಗೆರೆ ಮತ್ತು ನ.ರಾ.ಪುರ ತಾಲ್ಲೂಕು ಕ್ರೀಡಾಂಗಣಗಳ ನಿರ್ವಹಣೆಗೆ, ಜಿಲ್ಲಾ ಶತಮಾನೋತ್ಸವ ಕ್ರೀಡಾಂಗಣದಲ್ಲಿ ಹೈಮಾಸ್ಕ್ ಲೈಟ್ ಅಳವಡಿಸಲು, ಜಿಲ್ಲಾ ಶತಮಾನೋತ್ಸವ ಕ್ರೀಡಾಂಗಣದಲ್ಲಿ ಬಾಕ್ಸ್ ಚರಂಡಿಯನ್ನು ಸಂಪೂರ್ಣ ನವೀಕರಿಸುವುದು. ಸುಭಾಷ್‌ಚಂದ್ರಬೋಸ್ ಜಿಲ್ಲಾ ಆಟದ ಮೈದಾನದಲ್ಲಿ ಬೋರ್‌ವೆಲ್ ಕೊರೆಸುವುದು ಹಾಗೂ ಮೋಟಾರ್ ಪಂಪ್ ಅಳವಡಿಸುವುದು, ಜಿಲ್ಲಾ ಶತಮಾನೋತ್ಸವ ಕ್ರೀಡಾಂಗಣದಲ್ಲಿರುವ ಷಟಲ್‌ಕೋರ್ಟ್ ಮತ್ತು ಈಜುಕೊಳಕ್ಕೆ ನೀರಿನ ಅವಶ್ಯಕತೆ ಇದ್ದು, ಬೋರ್‌ವೆಲ್ ಕೊರೆಸಲು ಹಾಗೂ ಮೋಟಾರ್ ಅಳವಡಿಸಲು ವೆಚ್ಚ ಭರಿಸಲಾಗಿದೆ.
4	2205–00–104–0–29 ಕ್ರೀಡಾಶಾಲೆಗಳು	18.00	1	18.00	18.00	1	ಕ್ರೀಡಾಶಾಲೆಯಲ್ಲಿ 50 ಕ್ರೀಡಾಪಟುಗಳು ಪ್ರವೇಶ ಪಡೆದಿದ್ದು ಕ್ರೀಡಾಶಾಲೆಯ ನಿರ್ವಹಣೆಗಾಗಿ ಸಹಾಯಕರು, ಸ್ವೀಪರ್, ಕಾವಲುಗಾರರು, ಕಂಪ್ಯೂಟರ್ ಅಪರೇಟರ್ ಅಂಕಣ ಗುರುತುಗಾರರು, ಶಿಕ್ಷಕರು, ಬಟೆ ತೊಳೆಯುವವರು ಮತ್ತು ವೈದ್ಯರು ಹೊರಗುತ್ತಿಗೆ ಆಧಾರದ ಮೇಲೆ ನೇಮಕ, ಕ್ರೀಡಾ ಶಾಲೆಯ ಅಗತ್ಯ ಸ್ವಚ್ಛತೆ ಹಾಗೂ ದುರಸ್ಥಿಗಾಗಿ ವೆಚ್ಚಗೊಳಿಸಲಾಗಿದೆ. ಕ್ರೀಡಾಶಾಲೆಯ ಕ್ರೀಡಾಪಟುಗಳಿಗೆ ಸ್ಪೋರ್ಟ್ಸ್ ಕಿಟ್, ಪ್ರಸ್ತುತ್ತ ಕ್ರೀಡಾಶಾಲೆಗೆ 5, 6 & 7ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳನ್ನು ವಾಲಿಬಾಲ್ ಆಥ್ಲೆಟಿಕ್ಸ್ ಮತ್ತು ಜುಡೋ ವಿಭಾಗಗಳಲ್ಲಿ ಆಯ್ಕೆ ಮಾಡಿ ವೆಚ್ಚ ಭರಿಸಲಾಗಿದೆ.

5	2205–00–104–0–30 ಕಷ್ಟಪರಿ ಸ್ಥಿತಿ ಯಲ್ಲಿರುವ ಕ್ರೀಡಾಪಟುಗಳು ಮತ್ತು ಕುಸ್ತಿದಾರರಿಗೆ ಆರ್ಥಿಕ ನೆರವು	36.00	120	36.00	33.12	110	ಜಿಲ್ಲೆಯಲ್ಲಿರುವ ಒಟ್ಟು 110 ಜನ ಮಾಜಿ ಕುಸ್ತಿ ಪಟುಗಳಿಗೆ ಮಾಸಾಶನವನ್ನು ನೀಡಲಾಗುತ್ತಿದೆ (109 ಜನ ಕುಸ್ತಿಪಟುಗಳಿಗೆ ತಲಾ ರೂ. 2,500–00 ರೂ. ಗಳು ಹಾಗೂ ಒಬ್ಬ ಕುಸ್ತಿಪುಟುವಿಗೆ ರೂ. 3,000–00 ಗಳು)
6	2205–00–104–0–31 ಗ್ರಾಮೀಣ ಕ್ರೀಡಾ ಕೇಂದ್ರಗಳು	7.50	31	7.50	7.50	31	ತಾಲ್ಲೂಕುಗಳಲ್ಲಿ ಸಂಘ ಸಂಸ್ಥೆಗಳು ಸಂಘಟಿಸುವ ಕ್ರೀಡಾ ಸ್ಪರ್ಧೆಗಳಿಗೆ ಅನುದಾನ, ಬೇಸಿಗೆ ತರಬೇತಿ ಶಿಬಿರ ನಡೆಸಲು, ಕ್ರೀಡಾ ಶಾಲೆ/ಕ್ರೀಡಾ ನಿಲಯಗಳಿಗೆ ಆಯ್ಕೆ ಪ್ರಕ್ರಿಯೆ ನಡೆಸಲು ಹಾಗೂ ತಾಲ್ಲೂಕು ಕ್ರೀಡಾಂಗಣಗಳಿಗೆ ಕ್ರೀಡಾ ಸಾಮಗ್ರಿಗಳ ಖರೀದಿಗೆ ಹಾಗೂ ಅಂಕವಿಕಲ ಕ್ರೀಡಾಕೂಟವನ್ನು ಸಂಘಟಿಸಲು ವಿಕಲ ಚೇತನ ಇಲಾಖೆಗೆ ವೆಚ್ಚ ಭರಿಸಲಾಗಿದೆ.
7	2205–00–104–0–32 ವಿದ್ಯಾರ್ಥಿಗಳು, ವಿದ್ಯಾರ್ಥಿಯೇತರರಿಗೆ ಸಹಾಯ	2.29	46	2.29	2.29	46	ಚಿಕ್ಕಮಗಳೂರು ಜಿಲ್ಲೆಯಿಂದ ರಾಷ್ಟ್ರ ಮತ್ತು ರಾಜ್ಯ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಿ, ಪದಕ ವಿಜೇತ ಕ್ರೀಡಾಪಟುಗಳಿಗೆ ಪ್ರೋತ್ಸಾಹ ಧನ ಹಾಗೂ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಯುವಜನೋತ್ಸವ/ ಯುವಜನಮೇಳದಲ್ಲಿ ಭಾಗವಹಿಸಿ, ವಿಜೇತರಾದ ಕಲಾಸ್ಪರ್ಧಿಗಳಿಗೆ ಪ್ರೋತ್ಸಾಹಧನ ನೀಡಲು ವೆಚ್ಚ ಭರಿಸಲಾಗಿದೆ.
8	2205–00–104–0–33 ಕ್ರೀಡಾ ಸಾಮಗ್ರಿಗಳನ್ನು ಕೊಳ್ಳಲು, ಆಟದ ಬಯಲುಗಳನ್ನು ಅಭಿವೃದ್ಧಿ ಪಡಿಸಲು ವಿದ್ಯಾ ಮತ್ತು ಇತರೆ ಸಂಸ್ಥೆಗಳಿಗೆ ಸಹಾಯ	2.29	46	2.29	2.29	46	45 ಯುವಕ/ಯುವತಿ ಸಂಘಗಳಿಗೆ ತಲಾ 5,000/– ರೂ. ಗಳಂತೆ ಹಾಗೂ ಒಂದು ಸಂಘಕ್ಕೆ 4,000/– ರೂ. ಗಳಂತೆ ಕ್ರೀಡಾ ಸಲಕರಣೆಗಳನ್ನು ನೀಡಲು ವೆಚ್ಚ ಭರಿಸಲಾಗಿದೆ.
9	2205–00–104–0–34 ಒಳಾಂಗಣ ಕ್ರೀಡಾಂಗಣ ಮತ್ತು ಬಯಲು ರಂಗ ಮಂದಿರ ನಿರ್ಮಾಣ	6.00	2	5.99	5.95	2	ಚಿಕ್ಕಮಗಳೂರು ಜಿಲ್ಲಾ ಶತಮಾನೋತ್ಸವ ಫೆವಿಲಿಯನ್ ಕಟ್ಟಡ ಮತ್ತು ಒಳಾಂಗಣ ಕಟ್ಟಡದ ಸಂಪೂರ್ಣ ದುರಸ್ಥಿಗೆ ಮತ್ತು ಒಳಾಂಗಣ ಕ್ರೀಡಾಂಗಣದ ಜಿಮ್‌ಗೆ ಕ್ರೀಡಾ ಸಲಕರಣೆ ಖರೀದಿಸಲು ವೆಚ್ಚ ಭರಿಸಲಾಗಿದೆ
10	2205–00–104–0–35 ಗ್ರಾಮಾಂತರ ಪ್ರದೇಶದಲ್ಲಿ ಕ್ರೀಡೆಗಳಿಗೆ ಪ್ರೋತ್ಸಾಹ	1.14	2	1.14	1.14	2	ಕ್ರೀಡಾ ತರಬೇತಿಗಾಗಿ ಅಗತ್ಯ ಕ್ರೀಡಾ ಸಾಮಗ್ರಿಗಳನ್ನು ಖರೀದಿಸಲು ಹಾಗೂ ಗ್ರಾಮೀಣ ಕ್ರೀಡೆಗಳನ್ನು ಆಯೋಜಿಸುವ ಸಂಘಗಳಿಗೆ ಪ್ರೋತ್ಸಾಹಧನಕ್ಕೆ ವೆಚ್ಚ ಭರಿಸಲಾಗಿದೆ.
11	2205–00–104–0–36 ಕ್ರೀಡಾ ಸಾಮಗ್ರಿ ಖರೀದಿಗಾಗಿ ಜಿಲ್ಲಾ, ವಿಭಾಗೀಯ ಯುವಜನ ಸೇವೆಗಳ ಮಂಡಳಿಗೆ ಸಹಾಯ	1.14	2	1.14	1.14	2	ಯುವ ಸಪ್ತಾಹ ಕಾರ್ಯಕ್ರಮಕ್ಕೆ ವೆಚ್ಚ ಭರಿಸಿದೆ.
	ಒಟ್ಟು	**189.79**	**301**	**189.78**	**186.46**	**291**	

ಸಹಾಯಕ ನಿರ್ದೇಶಕರು,
ಯುವ ಸಬಲೀಕರಣ ಮತ್ತುಕ್ರೀಡಾ ಇಲಾಖೆ,
ಚಿಕ್ಕಮಗಳೂರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಚಿಕ್ಕಮಗಳೂರು

ಜಿಲ್ಲಾ ವಲಯದ ಕಾರ್ಯಕ್ರಮಗಳು

1.ಸಮಗ್ರ ಶಿಶುಅಭಿವೃದ್ಧಿ ಸೇವೆಗಳ ಯೋಜನೆ

ಚಿಕ್ಕಮಗಳೂರು ಜಿಲ್ಲೆಯ 7 ತಾಲ್ಲೂಕುಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ 6 ಸೇವಾ ಘಟಕಗಳನ್ನು ಗರ್ಭಿಣಿ, ಬಾಣಂತಿ, 6 ತಿಂ– 3 ವರ್ಷದ ಫಲಾನುಭವಿಗಳಿಗೆ ಜಿಲ್ಲೆಗೆ ಮಂಜೂರಾಗಿರುವ 1825 ಅಂಗನವಾಡಿ ಕೇಂದ್ರಗಳ ಮೂಲಕ ನೀಡಲಾಗುತ್ತಿದೆ. ಸಮಗ್ರ ಶಿಶುಅಭಿವೃದ್ಧಿ ಸೇವೆಗಳಲ್ಲಿ ಪೂರಕ ಪೌಷ್ಟಿಕ ಆಹಾರ ಕಾರ್ಯಕ್ರಮವೂ ಒಂದು ಸೇವೆಯಾಗುತ್ತಿದೆ.

2. ಶಾಲಾ ಪೂರ್ವ ಮಕ್ಕಳಿಗೆ ಉಣಿಸುವ ಕಾರ್ಯಕ್ರಮ

ಈ ಕಾರ್ಯಕ್ರಮವು ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯಲ್ಲಿರುತ್ತದೆ. 6 ತಿಂಗಳಿಂದ 3 ವರ್ಷದ ಮತ್ತು 3–6 ವರ್ಷದ ಮಕ್ಕಳಿಗೆ ರೂ. 8.00 (ಎಂಟು ರೂಪಾಯಿ)ಗಳ ಘಟಕ ವೆಚ್ಚದಲ್ಲಿ ಮತ್ತು ಗರ್ಭಿಣಿ, ಬಾಣಂತಿಯರಿಗೆ ರೂ. 21.00(ಇಪ್ಪತ್ತೊಂದು ರೂಪಾಯಿ) ಗಳ ವೆಚ್ಚದಲ್ಲಿ ಪೂರಕ ಪೌಷ್ಟಿಕ ಆಹಾರವನ್ನು ಆರ್ಥಿಕ ವರ್ಷದ 300 ದಿನಗಳು ವಿತರಿಸುವ ಕಾರ್ಯಕ್ರಮ ಇದಾಗಿರುತ್ತದೆ. ಜಿಲ್ಲೆಯಲ್ಲಿರುವ 1825 ಅಂಗನವಾಡಿ ಕೇಂದ್ರಗಳ ಮೂಲಕ ಪೂರಕ ಪೌಷ್ಟಿಕ ಆಹಾರವನ್ನು ವಿತರಿಸಲಾಗುತ್ತಿದೆ. 2018–19 ನೇ ಸಾಲಿನಲ್ಲಿ ಈ ಕಾರ್ಯಕ್ರಮದಡಿ ಗುರಿ 71987ಭೌತಿಕ ಸಾಧನೆ 64392 ಶೇ. 85 ಪ್ರಗತಿ ಸಾಧಿಸಲಾಗಿದೆ. ಈ ಕಾರ್ಯಕ್ರಮದಡಿ 3102.93 ಆರ್ಥಿಕ ಗುರಿ ನಿಗದಿಪಡಿಸಿದ್ದು, ರೂ. 2202.95 ಲಕ್ಷಗಳ ಆರ್ಥಿಕ ಪ್ರಗತಿ ಶೇ. 86 ರಷ್ಟು ಸಾಧಿಸಲಾಗಿದೆ.

3. ತೀವ್ರ ಅಪೌಷ್ಟಿಕ ಮಕ್ಕಳಿಗೆ ಹಾಲು ಮತ್ತು ಮೊಟ್ಟೆ ಸರಬರಾಜು

ವಿಪರೀತ ಕಡಿಮೆ ತೂಕವುಳ್ಳ ಅಂಗನವಾಡಿ ಮಕ್ಕಳಿಗೆ ಪೂರಕ ಪೌಷ್ಟಿಕ ಆಹಾರದ ಜೊತೆಗೆ ವಾರದಲ್ಲಿ 5 ದಿನಗಳು ಮೊಟ್ಟೆಯನ್ನು 3 ದಿನ 200 ಎಂ.ಎಲ್. ಹಾಲನ್ನು ಹಾಗೂ ಮೊಟ್ಟೆ ಉಪಯೋಗಿಸದ ಮಕ್ಕಳಿಗೆ 5 ದಿನ ಹಾಲು ನೀಡಲು ಸರ್ಕಾರದ ಮಂಜೂರಾತಿ ನೀಡಿದೆ. ಅದರಂತೆ, 2018–19 ನೇ ಸಾಲಿಗೆ ವೈದ್ಯಕೀಯ ವೆಚ್ಚದಡಿ ರೂ. 2.22 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಒಟ್ಟು 111 ಮಕ್ಕಳಿಗೆ ಪ್ರತಿ ಮಗುವಿಗೆ ರೂ. 2000/– ದಂತೆ ಒಂದು ವರ್ಷಕ್ಕೆ ವೈದ್ಯರ ಸಲಹೆಯ ಮೇರೆಗೆ ಔಷದೋಪಚಾರಕ್ಕಾಗಿ ಒದಗಿಸಲಾಗಿರುತ್ತದೆ.

4. ಕೇಂದ್ರ ಪುರಸ್ಕೃತ ಶಿಶುಅಭಿವೃದ್ಧಿ ಯೋಜನೆ

ಈ ಯೋಜನೆಯಡಿಯಲ್ಲಿ ಜಿಲ್ಲೆಯ ಸಿಬ್ಬಂದಿ ವರ್ಗದ ವೇತನ ಅಂಗನವಾಡಿ ಕಾರ್ಯಕರ್ತೆಯರ ಹಾಗೂ ಸಹಾಯಕಿಯರ ಗೌರವಧನ ಪಾವತಿಸಲಾಗಿದೆ. ರೂ. 2410.27 ಲಕ್ಷ ರೂ.ಗಳಿದ್ದು ರೂ. 2898.02 ಲಕ್ಷ ರೂ.ಗಳನ್ನು ವೇತನ ಬಾಬಿಗೆ ವೆಚ್ಚ ಮಾಡಲಾಗಿದೆ. ಭೌತಿಕ ಗುರಿ 3617 ಕ್ಕೆ ಸಾಧನೆ 3547 ಆಗಿರುತ್ತದೆ. ಅಂಗನವಾಡಿ ಕಾರ್ಯಕರ್ತೆ ಮಾಸಿಕ ಗೌರವಧನ ರೂ. 8000/, ಅಂಗನವಾಡಿ ಸಹಾಯಕಿ ರೂ. 4000/– , ಮಿನಿ ಅಂಗನವಾಡಿ ಕಾರ್ಯಕರ್ತೆ ರೂ.4750/– ಆಗಿದೆ.

5.ಅಂಗನವಾಡಿ ಕಟ್ಟಡಗಳ ನಿರ್ಮಾಣ

ಜಿಲ್ಲೆಯಲ್ಲಿ ಒಟ್ಟು 1825 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, 1537 ಸ್ವಂತ ಕಟ್ಟಡ ಹೊಂದಿವೆ. ಉಳಿದ ಕೇಂದ್ರಗಳನ್ನು ಪಂಚಾಯತ್, ಮಹಿಳಾ ಕಲ್ಯಾಣ , ಶಾಲಾ ಕಟ್ಟಡ ಮತ್ತು ಇತರೆ ಕಟ್ಟಡಗಳಲ್ಲಿ ನಡೆಸಲಾಗುತ್ತಿದೆ. ಈ ಯೋಜನೆಯಡಿಯಲ್ಲಿ 2018–19 ನೇ ಸಾಲಿಗೆ ಕಟ್ಟದ ದುರಸ್ಥಿಗೆ ರೂ. 68.00 ಲಕ್ಷಗಳ ಗುರಿ ನಿಗದಿಪಡಿಸಿದ್ದು, ಅನುದಾನ ಬಿಡುಗಡೆಯಾಗಿರುತ್ತದೆ. ಸದರಿ ಅನುದಾನದಲ್ಲಿ 209 ಕಟ್ಟಡಗಳನ್ನು ದುರಸ್ಥಿಪಡಿಸಲಾಗಿದೆ. ವಿಶೇಷ ಅಭಿವೃದ್ಧಿ ಯೋಜನೆಯಡಿ ಎಸ್ ಸಿ ಪಿ/ಟಿ ಎಸ್ ಪಿ ಕಟ್ಟಡಗಳ ಉನ್ನತೀಕರಣಕ್ಕೆ ರೂ. 32.00 ಲಕ್ಷಗಳು ಬಿಡುಗಡೆಯಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.

ವಿಶೇಷ ಅಭಿವೃದ್ಧಿ ಯೋಜನೆಯಡಿ ಅಂಗನವಾಡಿ ಕಟ್ಟಡ ನಿರ್ಮಾಣಕ್ಕೆ ರೂ. 18.00 ಲಕ್ಷಗಳ ಅನುದಾನ ಸ್ವಚ್ಛಭಾರತ ಮಿಷನ್ (ಗ್ರಾ) ಶೌಚಾಲಯ ದುರಸ್ಥಿಗಾಗಿ ರೂ. 13.86 ಲಕ್ಷಗಳ ಅನುದಾನ ಬಿಡುಗಡೆಯಾಗಿದುದ,ನಿರ್ಮಾಣ ಏಜೆನ್ಸಿ ಗ್ರಾಮಪಂಚಾಯಿತಿಯಾಗಿರುತ್ತದೆ. ಶೌಚಾಲಯ ನಿಮರ್ನಾಣ, ಉನ್ನತೀಕರಣ ಮತ್ತು ಕುಡಿಯುವ ನೀರಿನ ಸಂಪರ್ಕಕ್ಕಾಗಿ ರೂ. 38.20 ಲಕ್ಷಗಳ ಅನುದಾನವು ಮಾರ್ಚ್ ೯ 2019 ರ ಅಂತ್ಯಕ್ಕೆ ಬಿಡುಗಡೆಗೊಳಿಸಿದ್ದು, ನಿರ್ಮಾಣ ಏಜೆನ್ಸಿಯಾಗಿ ನಿರ್ಮಿತಿ ಕೇಂದ್ರವನ್ನು ಗುರುತಿಸಿದೆ.

.

6. ಮಾತೃಪೂರ್ಣ ಯೋಜನೆ

ಜಿಲ್ಲೆಯಲ್ಲಿ 1825 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಗರ್ಭಿಣಿಯರು 5592 ಹಾಗೂ ಬಾಣಂತಿಯರು 5633 ಇದ್ದು, ಒಟ್ಟು 11225 ಫಲಾನುಭವಿಗಳು ಅಂಗನವಾಡಿ ಕೇಂದ್ರದಲ್ಲಿ ನೊಂದಣಿಯಾಗಿರುತ್ತಾರೆ.. ಸದರಿ ಕಾರ್ಯಕ್ರಮವು ರಾಜ್ಯಾದ್ಯಂತ ಅಕ್ಟೋಬರ್ 2 ರಿಂದ ಅನುಷ್ಠಾನಗೊಳ್ಳುತ್ತಿದ್ದು, ಜಿಲ್ಲೆಯಲ್ಲಿ 2018–19 ನೇ ಸಾಲಿಗೆ ಒಟ್ಟು 6936 ಗರ್ಭಿಣಿ, ಬಾಣಂತಿಯರು ಬಿಸಿಯೂಟಕ್ಕೆ ಹಾಜರಾಗುತ್ತಿದ್ದು, ಶೇ. 76 ರಷ್ಟು ಸಾಧನೆಯಾಗಿರುತ್ತದೆ.

ಗರ್ಭಿಣಿ ಬಾಣಂತಿ ಫಲಾನುಭವಿಗಳಿಗೆ ರೂ. 21.00 ರ ಘಟಕ ವೆಚ್ಚದಲ್ಲಿ ಅನ್ನ , ಸಾಂಬಾರು, ಮೊಟ್ಟೆ , ಶೇಂಗಾ ಚಿಕ್ಕಿ, ಹಾಲು 200 ಎಂ.ಎಲ್. ಸ್ಥಳೀಯ ತರಕಾರಿಗಳಿಂದ ಮಾಡಿದ ಪಲ್ಯ ಇವುಗಳನ್ನು ಅಂಗನವಾಡಿ ಕೇಂದ್ರಗಳಲ್ಲಿ ವಿತರಿಸಲಾಗುತ್ತಿದೆ.

7. ನಿರ್ಗತಿಕ ಮಕ್ಕಳ ಕುಟೀರ

ನಿರ್ಗತಿಕ ಮಕ್ಕಳಿಗೆ ಪಾಲನೆ, ಪೋಷಣೆ, ರಕ್ಷಣೆ ಹಾಗೂ ಪುನರ್ವಸತಿ ಒದಗಿಸುವುದು, ಸಾಮಾಜಿಕ ಜೀವನಮಟ್ಟ ಸುಧಾರಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಚೌಡೇಶ್ವರಿ ನಿರ್ಗತಿಕ ಮಕ್ಕಳ ಕುಟೀರ, ಬಾಳೆಹೊನ್ನೂರಿನಲ್ಲಿ ನಡೆ–ಯುತ್ತಿದೆ. ಪ್ರತಿ ಮಗುವಿಗೆ ಪ್ರತಿ ತಿಂಗಳು ರೂ. 1000/– ಗಳಂತೆ ಸಿಬ್ಬಂದಿ ವೆಚ್ಚ, ಆಹಾರ, ವಸತಿ, ಶಿಕ್ಷಣ ಹಾಗೂ ಬಾಡಿಗೆಗಾಗಿ ಅನುದಾನ ನೀಡುತ್ತಿದ್ದು, 2018–19 ನೇ ಸಾಲಿನಲ್ಲಿ 25 ಮಕ್ಕಳಿಗೆ ರೂ. 2,70,000/–ಖರ್ಚು ಭರಿಸಲಾಗಿದೆ.

ರಾಜ್ಯವಲಯ ಕಾರ್ಯಕ್ರಮ

1. ಭಾಗ್ಯಲಕ್ಷ್ಮಿ ಯೋಜನೆ:–

ಹೆಣ್ಣು ಮಗುವಿನ ಬ್ರೂಣ ಹತ್ಯೆ ತಡೆಯಲು, ಬಾಲ್ಯ ವಿವಾಹ ತಡೆಗಟ್ಟಲು, ಹಾಗೂ ಸರ್ವತೋಮುಖ ಬೆಳವಣಿಗೆಗಾಗಿ ಭವಿಷ್ಯದಲ್ಲಿ ಆರ್ಥಿಕ ಭದ್ರತೆ ಒದಗಿಸಲು ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದೆ.

ಸರ್ಕಾರವು ದಿ:31.03.2006 ರ ನಂತರ ಬಡತನ ರೇಖೆಗಿಂತ ಕೆಳಗಿನ ಕುಟುಂಬದಲ್ಲಿ ಜನಿಸಿದ ಎರಡು ಹೆಣ್ಣು ಮಕ್ಕಳಿಗೆ ಸರ್ಕಾರಿ ಆದೇಶ ಸಂಖ್ಯೆ ಮಮಅಇ:99:ಮಭಾಅ:2006: ದಿನಾಂಕ:17.10.2006 ರೂ. 10000/– ಗಳ ಠೇವಣಿಯನ್ನು 18 ವರ್ಷಗಳು ಪೂರ್ಣಗೊಂಡ ನಂತರ ಬಡ್ಡಿ ಸಮೇತ ಮೊದಲನೇ ಮಗುವಿಗೆ ರೂ. 30751/–ನ್ನು ಮತ್ತು 2ನೇ ಮಗುವಿಗೆ 40918/– ನ್ನು ನೀಡಲಾಗುವುದಲ್ಲದೆ ವಿದ್ಯಾರ್ಥಿ ವೇತನ , ವಿಮಾ ಸೌಲಭ್ಯ ಮುಂತಾದ ಮಧ್ಯಂತರ ಸಂದಾಯಗಳನ್ನು ಯೋಜನೆಯಡಿ ತಿಳಿಸಲಾದ ಅರ್ಹ ಮಾನದಂಡನೆಗಳನ್ನು ಪೂರೈಸುತ್ತಿದ್ದಲ್ಲಿ ನೀಡಲಾಗುವುದು.

ದಿನಾಂಕ : 31.07.2008 ರ ನಂತರ ಜನಿಸಿದ ಮಗುವಿಗೆ ಸರ್ಕಾರಿ ಆದೇಶ ಸಂಖ್ಯೆ ಮಮಅಇ:152:ಮಮಅ: 2008 ಮೇರೆಗೆ 1ನೇ ಮಗುವಿಗೆ ರೂ.19300/–ಗಳನ್ನು ಮತ್ತು 2ನೇ ಮಗುವಿಗೆ ರೂ. 18350/– ರಂತೆ 18 ವರ್ಷಗಳವರೆಗೆ ನಿಶ್ಚಿತ ಠೇವಣಿಗೆ ಮೊದಲನೆ ಮಗುವಿಗೆ ರೂ. 100097 ಮತ್ತು 2 ನೇ ಮಗುವಿಗೆ 100052/– ಪರಿಪಕ್ವ ಮೊತ್ತ ದೊರೆಯುತ್ತದೆ. ಅಲ್ಲದೆ, ಯಾವುದೇ ಮಧ್ಯಂತರ ಸಂದಾಯ ದೊರೆಯುವುದಿಲ್ಲ ಹಾಗೂ ಫಲಾನುಭವಿಗೆ 15 ವರ್ಷ ತುಂಬಿದ ನಂತರ ಮುಂದಿನ ವಿದ್ಯಾಭ್ಯಾಸಕ್ಕಾಗಿ ಸದರಿ ಬಾಂಡ್‌ನಡಿ ಗರಿಷ್ಟ ರೂ. 50000/– ಗಳವರೆಗೆ ಸಾಲವನ್ನು ಪಡೆಯಬಹುದಾಗಿದೆ.

ಮಗು ಜನಿಸಿದ 1 ವರ್ಷದೊಳಗೆ ಅವಶ್ಯಕ ದಾಖಲಾತಿಗಳೊಂದಿಗೆ ಯೋಜನೆಗೆ ನೋಂದಾಯಿಸಲಾಗುತ್ತದೆ. ಯೋಜನೆಯನ್ವಯ ಇಲ್ಲಿಯವರೆಗೆ 51800 ಪ್ರಸ್ತಾವನೆಗಳನ್ನು ಸಲ್ಲಿಸಿದ್ದು, ಅದರಲ್ಲಿ 44538 ಎಲ್.ಐ.ಸಿ. ಯಿಂದ ಬಾಂಡ್ ವಿತರಿಸಲಾಗಿದೆ.

2. ಸ್ತ್ರೀಶಕ್ತಿ ಯೋಜನೆ

ಸ್ತ್ರೀಶಕ್ತಿ ಯೋಜನೆಯಡಿ ಜಿಲ್ಲೆಯಲ್ಲಿ 3571 ಗುಂಪುಗಳು ರಚನೆಯಾಗಿದ್ದು ಒಟ್ಟು 59005 ಸದಸ್ಯರನ್ನು ಒಳಗೊಂಡಿದೆ. ಇದರಲ್ಲಿ ಪರಿಶಿಷ್ಟ ಜಾತಿಯ ಗುಂಪು 530 ಹಾಗೂ ಪರಿಶಿಷ್ಟ ಪಂಗಡ ಗುಂಪುಗಳು 79, ಅಲ್ಪಸಂಖ್ಯಾತರು 94 , ಇತರೆ 2868 ಗುಂಪುಗಳಿವೆ. 2018–19 ನೇ ಸಾಲಿನಲ್ಲಿ ರೂ. 14.56 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಸುತ್ತುನಿಧಿ ಐಜಿಎ ಪ್ರೋತ್ಸಾಹಧನ, ಅಧಿಕ ಉಳಿತಾಯ ಪ್ರೋತ್ಸಾಹಧನ, ಶೇಕಡ 6%ರ ಬಡ್ಡಿ ಸಹಾಯಧನ ಬಾಬ್ತು ಗುಂಪುಗಳ ಖಾತೆಗೆ ಜಮೆ ಮಾಡಿದೆ ಹಾಗೂ ಸ್ತ್ರೀಶಕ್ತಿ ಸಮಾವೇಶ, ವಸ್ತುಪ್ರದರ್ಶನ ಮಾರಾಟ ಮೇಳ, ತರಬೇತಿ ಬಾಬ್ತು ಖರ್ಚು ಭರಿಸಿದೆ.

3. ವಿಶೇಷ ಮಹಿಳಾ ಚಿಕಿತ್ಸಾ ಘಟಕ:–

ನೊಂದ ಮಹಿಳೆಯರಿಗೆ ಒಂದೇ ಸೂರಿನಡಿ ಕಾನೂನು, ಪೋಲೀಸ್, ವೈದ್ಯಕೀಯ ಸೌಲಭ್ಯ ಒದಗಿಸಲು ಜಿಲ್ಲೆಯಲ್ಲಿ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದೆ.

ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯಲ್ಲಿ ಈ ನಿಮಿತ್ತ ಸೀಮಿತ ಸಿಬ್ಬಂದಿಯನ್ನು ಇಲಾಖೆ ನೇಮಿಸಿದ್ದು, ನೊಂದ ಮಹಿಳೆಯರಿಗೆ ಅಗತ್ಯ ನೆರವುಗಳನ್ನು ಕಲ್ಪಿಸಲಾಗುತ್ತಿದೆ. 2018–19 ನೇ ಸಾಲಿನಲ್ಲಿ 88 ಪ್ರಕರಣಗಳು ದಾಖಲಾಗಿವೆ ಹಾಗೂ ನೊಂದ ಮಹಿಳೆಯರಿಗೆ ನಿಯಮಾನುಸಾರ ಸ್ಥೈರ್ಯ ಯೋಜನೆಯಡಿ ಅಗತ್ಯ ತುರ್ತು ಚಿಕಿತ್ಸೆಗಾಗಿ ಆರ್ಥಿಕ ಸಹಾಯ ಒದಗಿಸುವ ಕಾರ್ಯಕ್ರಮವಾಗಿದೆ.

4. ಸ್ಥೈರ್ಯ ನಿಧಿ:–

ದಿನಾಂಕ: 31–07–2015ರಿಂದ ಕಾರ್ಯಕ್ರಮ ಜಾರಿಯಲ್ಲಿದ್ದು, ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಮರಣ ಪರಿಹಾರ ಹಾಗೂ ತುರ್ತು ವೈದ್ಯಕೀಯ ನೆರವು ನೀಡಲು ಸ್ಥೈರ್ಯನಿಧಿ ಸ್ಥಾಪಿಸಲಾಗಿದೆ. ಇದುವರೆಗೆ ಒಟ್ಟು 22 ಪ್ರಕರಣಗಳಲ್ಲಿ ರೂ. 4.75 ಲಕ್ಷ ವೆಚ್ಚ ಭರಿಸಿದ್ದು, ಇದರಲ್ಲಿ 1 ಪ್ರಕರಣಕ್ಕೆ ರೂ.1.00 ಲಕ್ಷ ಮರಣ ಪರಿಹಾರ ಹಾಗೂ 21 ಪ್ರಕರಣಗಳಿಗೆ ರೂ.3.75 ಲಕ್ಷಗಳನ್ನು ತುರ್ತು ವೈದ್ಯಕೀಯ ಪರಿಹಾರ ನೀಡಲಾಗಿದೆ.

5. ಬಾಲಕಿಯರ ವಸತಿಗಾಗಿ ವಸತಿ ನಿಲಯ

ಮೆಟ್ರಿಕ್ ಮತ್ತು ಪೋಸ್ಟ್ ಮೆಟ್ರಿಕ್ ಅಭ್ಯಾಸ ಮಾಡುತ್ತಿರುವ ಆದಾಯ ರೂ. 10000/– ಮಿತಿಯೊಳಗಿರುವ ಕುಟುಂಬಗಳ ಹೆಣ್ಣುಮಕ್ಕಳಿಗೆ ವ್ಯಾಸಾಂಗ ಮಾಡಲು ವಸತಿಗಾಗಿ ಸರ್ಕಾರಿ ಬಾಲಕಿಯರ ವಸತಿ ನಿಲಯ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.ಈ ವಸತಿ ನಿಲಯವನ್ನು ದಿನಾಂಕ:01.12.2006 ರಿಂದ ಕಸ್ತೂರಿ ಬಾ ಸದನ ಸ್ವಯಂಸೇವಾ ಸಂಸ್ಥೆಯನ್ನು ವಸತಿ ನಿಲಯ ನಡೆಸಲು ಸರ್ಕಾರಿ ಆದೇಶದಂತೆ ಗುರುತಿಸಲಾಗಿದೆ. 2018–19 ನೇ ಸಾಲಿನಲ್ಲಿ 50 ಬಾಲಕಿಯರು ವಸತಿ ಸೌಲಭ್ಯ ಪಡೆದಿದ್ದು, ಇವರಿಗೆ ಉಚಿತ ಊಟ ವಸತಿ ಮತ್ತು ಇತರೆ ವೆಚ್ಚಕ್ಕಾಗಿ ನಿರ್ದೇಶನಾಲಯದಿಂದ ಈ ಸಂಸ್ಥೆಗೆ ರೂ. 10,10,000/– ಅನುದಾನ ಬಿಡುಗಡೆಯಾಗಿರುತ್ತದೆ. ಸಂಸ್ಥೆಗೆ ವಿದ್ಯಾರ್ಥಿನಿಯರ ಊಟ, ವಸತಿ, ಸಿಬ್ಬಂದಿ ವೆಚ್ಚಕ್ಕಾಗಿ ರೂ. 10,10,000/– ಗಳನ್ನು ವೆಚ್ಚ ಮಾಡಲಾಗಿದೆ.

6.ಸಾಂತ್ವನ

ಜಿಲ್ಲೆಯಲ್ಲಿ ಅತ್ಯಾಚಾರ ಹಾಗೂ ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಉಚಿತ ಆಶ್ರಯ , ಕಾನೂನು ಸಲಹೆ ಮತ್ತು ಆಪ್ತಸಮಾಲೋಚನೆ ಮತ್ತು ಆರ್ಥಿಕ ಪರಿಹಾರ ಒದಗಿಸಲು 7 ತಾಲ್ಲೂಕುಗಳಲ್ಲಿ ಸಾಂತ್ವನ ಮಹಿಳಾ ಸಹಾಯವಾಣಿಯನ್ನು ಸರ್ಕಾ–ರೇತರ ಸಂಸ್ಥೆಗಳಾದ ಸಂಚಿಹೊನ್ನಮ್ಮ ಮಹಿಳಾ ಸಮಾಜ ,ಮೂಡಿಗೆರೆ ,ಕಸ್ತೂರಿ ಬಾ ಸದನ ಚಿಕ್ಕಮಗಳೂರಿನಲ್ಲಿ, ಜನಚಿಂತನ ಸಂಸ್ಥೆ, ತರೀಕೆರೆ ,ವೀರಭದ್ರೇಶ್ವರ ವಿದ್ಯಾಸಂಸ್ಥೆ, ಕಡೂರು, ಸಹರಾ ಸಂಸ್ಥೆ, ಶೃಂಗೇರಿ, ಸೋಷಿಯಲ್ ವೆಲ್‌ಫೇರ್ ಸೊಸೈಟಿ , ಎನ್. ಆರ್.ಪುರ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ , ಕೊಪ್ಪ ತಾಲ್ಲೂಕುಗಳಲ್ಲಿ ನಡೆಯುತ್ತಿವೆ. 2018–19 ನೇ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆಯಾದ ರೂ. 28.00 ಲಕ್ಷ ಸಿಬ್ಬಂದಿ, ಇತರೆ ವೆಚ್ಚ ಹಾಗೂ ಕೇಂದ್ರ ದೂರವಾಣಿಗಾಗಿ ಬಿಡುಗಡೆಯಾಗಿರುತ್ತದೆ. ರೂ. 28.00 ವೆಚ್ಚ ಭರಿಸಿದೆ.

ಮಹಿಳಾ ಸಹಾಯವಾಣಿ 1091(ತಾಲ್ಲೂಕು ವ್ಯಾಪ್ತಿ ಮಾತ್ರ)

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

ಉದ್ಯೋಗಿನಿ ಯೋಜನೆ

ಮಹಿಳೆಯರು ಆದಾಯ ಉತ್ಪನ್ನಕರ ಚಟುವಟಿಕೆಗಳಲ್ಲಿ ತೊಡಗಿ ಸ್ವಯಂ ಉದ್ಯೋಗಿಗಳಾಗಲು ಬ್ಯಾಂಕಿನಿಂದ ಸಾಲ ಮತ್ತು ನಿಗಮದಿಂದ ಸಹಾಯಧನ ನೀಡುವ ಯೋಜನೆ. ರೂ.1.00 ಲಕ್ಷದಿಂದ ರೂ.3.00ಲಕ್ಷದವರೆಗೆ ಬ್ಯಾಂಕ್ ಸಾಲ ಒದಗಿಸಲಾಗುವುದು. ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರಿಗೆ ಸಾಲದ ಮೊತ್ತದ ಶೇ.50ರಷ್ಟು, ವಿಶೇಷ ವರ್ಗ ಮತ್ತು ಸಾಮಾನ್ಯ ವರ್ಗದ ಮಹಿಳೆಯರಿಗೆ ಸಾಲದ ಗರಿಷ್ಠ ಮಿತಿಯನ್ನು ರೂ. 1.00 ಲಕ್ಷದಿಂದ ರೂ.3.00 ಲಕ್ಷಗಳ ಸಹಾಯಧನ ನೀಡಲಾಗುವುದು. ಕುಟುಂಬದ ವಾರ್ಷಿಕ ಆದಾಯ ಪ.ಜಾತಿ ಪಂಗಡದ ಮಹಿಳೆಯರಿಗೆ ರೂ.2.00 ಲಕ್ಷ ಮತ್ತು ವಿಶೇಷ ವರ್ಗ ಮತ್ತು ಸಾಮಾನ್ಯ ವರ್ಗದ ಮಹಿಳೆಯರಿಗೆ ರೂ.1.50ಲಕ್ಷಗಳಿಗೆ ಮಿತಿಗೊಳಿಸಲಾಗಿದೆ. ವಯೋಮಿತಿ 45 ರಿಂದ 55 ವರ್ಷಕ್ಕೆ ಹೆಚ್ಚಿಸಲಾಗಿದೆ. 2018–19ನೇ ಸಾಲಿನಲ್ಲಿ ಒಟ್ಟು ಭೌತಿಕ ಗುರಿ 32, ಆರ್ಥಿಕ ಗುರಿ 34.44ಲಕ್ಷ ನಿಗದಿಪಡಿಸಲಾಗಿದೆ. ಒಟ್ಟು 47 ಮಹಿಳೆಯರಿಗೆ ರೂ. 30.91 ಲಕ್ಷಗಳಲ್ಲಿ ಇಡಿಪಿ ತರಬೇತಿ ನಡೆಸಿ ಸಹಾಯಧನ ನೀಡಲಾಗಿದೆ.

ಕಿರುಸಾಲ ಯೋಜನೆ

ಸ್ತ್ರೀಶಕ್ತಿ ಗುಂಪುಗಳು ಸಣ್ಣ ಉದ್ದಿಮೆ ಅಥವಾ ಉತ್ಪಾದನಾ ಘಟಕವನ್ನು ಸಾಧಿಸಿ ಆರ್ಥಿಕ ಮತ್ತು ಸಾಮಾಜಿಕ ಸುಧಾರಣೆ ಹೊಂದಲು ಪ್ರತಿ ಗುಂಪಿಗೆ ತಲಾ ರೂ.200000/–ಗಳ ಬಡ್ಡಿರಹಿತ ಸಾಲವನ್ನು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಒದಗಿಸಲಾಗುತ್ತಿದೆ. 2018–19 ನೇ ಸಾಲಿನಲ್ಲಿ ಭೌತಿಕ 5, ಆರ್ಥಿಕ ರೂ.10.00 ಲಕ್ಷ ಗುರಿ ನಿಗದಿಪಡಿಸಲಾಗಿತ್ತು. ಅದರಂತೆ 4 ಗುಂಪುಗಳಿಗೆ ರೂ. 8.00ಲಕ್ಷಗಳಲ್ಲಿ ಸಾಲ ಸೌಲಭ್ಯ ಒದಗಿಸಲಾಗಿದೆ

ಚೇತನ ಯೋಜನೆ

ಈ ಯೋಜನೆಯಡಿ ಲೈಂಗಿಕ ಕಾರ್ಯಕರ್ತೆಯರಿಗೆ ಸ್ವಯಂ ಉದ್ಯೋಗಕ್ಕಾಗಿ ಸಾಲ ಮತ್ತು ಸಹಾಯಧನ ಹಾಗೂ ಆಸಕ್ತಿಯುಳ್ಳ ಲೈಂಗಿಕ ಕಾರ್ಯಕರ್ತೆಯರಿಗೆ ಕೌಶಲ್ಯ ತರಬೇತಿ ಕೊಡಿಸಿ ಇವರು ವೃತ್ತಿಯಿಂದ ಹೊರಬಂದು ಗೌರವಾನ್ವಿತ ಜೀವನವನ್ನು ನಡೆಸಲು ಅನುಕೂಲ ಕಲ್ಪಿಸಲಾಗುತ್ತಿದೆ. 2018–19ನೇ ಸಾಲಿನಲ್ಲಿ ಭೌತಿಕ ಗುರಿ 8, ಆರ್ಥಿಕ ರೂ. 4.06 ಲಕ್ಷ ಗುರಿ ನಿಗದಿಯಾಗಿತ್ತು. ಅದರಂತೆ 8 ಜನ ಫಲಾನುಭವಿಗಳಿಗೆ ರೂ.4.06ಲಕ್ಷಗಳಲ್ಲಿ ಪ್ರತಿ ಫಲಾನುಭವಿಗೆ ರೂ.25000/– ಸಾಲ, ರೂ.25000/– ಸಹಾಯಧನ ಒದಗಿಸಲಾಗಿದೆ.

ಸಮೃದ್ಧಿ ಯೋಜನೆ:–

ನಿಗಮದಿಂದ 2018–19ನೇ ಸಾಲಿನಿಂದ ಬೀದಿಬದಿಯಲ್ಲಿ ಸಣ್ಣ ವ್ಯಾಪಾರ ನಡೆಸುತ್ತಿರುವ ಬಡತನ ರೇಖೆಗಿಂತ ಕೆಳಗಿರುವ ಮಹಿಳೆಯರಿಗೆ ಸಮೃದ್ಧಿ ಎಂಬ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ನಗರ ಮತ್ತು ಗ್ರಾಮೀಣ ಪ್ರದೇಶದ ಬೀದಿಬದಿ ಮಹಿಳಾ ವ್ಯಾಪಾರಿಗಳು ಹೆಚ್ಚಿನ ಬಡ್ಡಿ ನೀಡಿ ಸಾಲ ಪಡೆಯುವುದನ್ನು ತಡೆಗಟ್ಟಿ ಶೋಷಣೆಯಿಂದ ಮುಕ್ತಗೊಳಿಸುವುದು. ಮಹಿಳೆಯರ ನಿರುದ್ಯೋಗ ಸಮಸ್ಯೆಯನ್ನು ನಿವಾರಣೆ ಮಾಡುವುದು ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯಡಿ ಬೀದಿಬದಿ ಮಹಿಳಾ ವ್ಯಾಪಾರಿಗಳಿಗೆ ತಲಾ ರೂ.10000/–ಗಳಂತೆ ಪ್ರೋತ್ಸಾಹಧನ ನೀಡಲಾಗುತ್ತಿದೆ. ಚಿಕ್ಕಮಗಳೂರು ಜಿಲ್ಲೆಗೆ 2018–19 ನೇ ಸಾಲಿಗೆ ಈ ಯೋಜನೆಯಡಿ ಭೌತಿಕ 89 ಗುರಿ ಆರ್ಥಿಕ ರೂ. 8.90 ಲಕ್ಷ ನಿಗದಿಯಾಗಿದೆ. ಒಟ್ಟು 89 ಫಲಾನುಭವಿಗಳಿಗೆ ರೂ.8.90ಲಕ್ಷ ಪ್ರೋತ್ಸಾಹಧನ ಒದಗಿಸಲಾಗಿದೆ

ಧನಶ್ರೀ ಯೋಜನೆ:

2018–19ನೇ ಸಾಲಿನಿಂದ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದ್ದು, 18 ರಿಂದ 60 ವಯೋಮಿತಿಯ ಹೆಚ್.ಐ.ವಿ. ಸೋಂಕಿತ ಮಹಿಳೆಯರಿಗೆ ಸ್ವಯಂ ಉದ್ಯೋಗ ಕೈಗೊಂಡು ಆರ್ಥಿಕ ಸ್ವಾವಲಂಬನೆ ಹೊಂದಲು ಪ್ರೇರೇಪಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. 2018–19 ನೇ ಸಾಲಿಗೆ ಭೌತಿಕ 11, ಆರ್ಥಿಕ ರೂ.5.58 ಗುರಿ ನಿಗದಿಯಾಗಿದ್ದು, ರೂ.50000/– (ರೂ.25,000/– ಸಾಲ ಮತ್ತು ರೂ. 25,000/– ಪ್ರೋತ್ಸಾಹಧನ) ನೀಡಲಾಗುತ್ತದೆ. ಗುರಿ ಪ್ರಕಾರ 11 ಫಲಾನುಭವಿಗಳಿಗೆ ರೂ.5.58ಲಕ್ಷಗಳಲ್ಲಿ ಪ್ರತಿ ಫಲಾನುಭವಿಗೆ ರೂ.25000/– ಸಾಲ, ರೂ.25000/– ಸಹಾಯಧನ ಒದಗಿಸಲಾಗಿದೆ.

ಲಿಂಗತ್ವ ಅಲ್ಪಸಂಖ್ಯಾತರಿಗೆ ಪುನರ್ವಸತಿ ಯೋಜನೆ:–

ಈ ಯೋಜನೆಯಡಿ ಲಿಂಗತ್ವ ಅಲ್ಪಸಂಖ್ಯಾತರು ಗೌರವಾನ್ವಿತ ಜೀವನ ನಡೆಸಲು ಹಾಗೂ ಸಮಾಜದ ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ನಿಗಮದಿಂದ 2012–13ನೇ ಸಾಲಿನಿಂದ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ರೂ.25,000/– ಸಾಲ ಮತ್ತು ರೂ. 25,000/– ಪ್ರೋತ್ಸಾಹಧನ ನೀಡಲಾಗುವುದು. 2018–19 ನೇ ಸಾಲಿನಲ್ಲಿ ಜಿಲ್ಲೆಗೆ ಭೌತಿಕ 20 ಗುರಿ ಇದ್ದು, ಆರ್ಥಿಕ ರೂ. 10.15 ಲಕ್ಷ ನಿಗದಿಯಾಗಿದ್ದು, ಒಟ್ಟು 09 ಫಲಾನುಭವಿಗಳಿಗೆ ರೂ.2.31ಲಕ್ಷಗಳಲ್ಲಿ ಪ್ರತಿ ಫಲಾನುಭವಿಗೆ ರೂ.25000/– ಸಾಲ, ರೂ.25000/– ಸಹಾಯಧನ ಒದಗಿಸಲಾಗಿದೆ.

ಉಪನಿರ್ದೇಶಕರು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಚಿಕ್ಕಮಗಳೂರು.

ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ

ಅನುಷ್ಠಾನಗೊಳಿಸಿರುವ ಯೋಜನೆಗಳ ವಿವರ 2018–19

1. **ಅರ್ಹ ವಿಕಲಚೇತನರಿಗೆಗುರುತಿನ ಚೀಟಿ ಹಾಗೂ ವೈದ್ಯಕೀಯ ಪ್ರಮಾಣ ಪತ್ರ :** ಶೇಕಡ 40 ಕ್ಕಿಂತ ಹೆಚ್ಚಿನ ಪ್ರಮಾಣ ವಿಕಲಚೇತನ ಫಲಾನುಭವಿಗಳಿಗೆ ತಾಲ್ಲೂಕು, ಜಿಲ್ಲಾ ಮಟ್ಟದ ವೈದ್ಯಕೀಯ ಮಂಡಳಿಗಳ ಶಿಫಾರಸ್ಸು ಮೇರೆಗೆಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿಯವರು 2018–19ನೇ ಸಾಲಿಗೆ ಒಟ್ಟು 2246 ವಿಕಲಚೇತನರಿಗೆಗುರುತಿನ ಚೀಟಿಗಳನ್ನು ವಿತರಿಸಿದೆ.

2. **ಪೋಷಣಾ ಭತ್ಯೆ :** ಕುಟುಂಬದ ವಾರ್ಷಿಕಆದಾಯ 12,000/–ರಿಂದ 17,000/–ಕ್ಕಿಂತಕಡಿಮೆಇರುವ ಶೇ.40ರಿಂದ ಶೇ.74ರ ವರೆಗಿನ ವಿಕಲಚೇತನ ಪ್ರಮಾಣ ಹೊಂದಿರುವವರಿಗೆ ತಿಂಗಳಿಗೆ ರೂ.600/– ರಂತೆ ಮತ್ತು ಶೇ.75 ಮತ್ತುಅದಕ್ಕಿಂತ ಹೆಚ್ಚಿನ ಪ್ರಮಾಣದವರಿಗೆ ತಿಂಗಳಿಗೆ ರೂ.1,400/– ರಂತೆ ಮಾನ್ಯ ತಹಶೀಲ್ದಾರರು ಮಂಜೂರಾತಿ ನೀಡುವರು.

3. **ವಿಕಲಚೇತನರ ವಿದ್ಯಾರ್ಥಿ ವೇತನ ಮತ್ತು ಪ್ರತಿಭಾ ಪುರಸ್ಕಾರ :** ಸರ್ಕಾರದಿಂದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾಬ್ಯಾಸ ಮಾಡುವ ವಿಕಲಚೇತನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ರೂ.7.6 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದುಅದರಲ್ಲಿಒಟ್ಟು ರೂ.7.6 ಲಕ್ಷಗಳನ್ನು ಜಿಲ್ಲಾಅಂಗವಿಕಲರ ಮತ್ತು ಹಿರಿಯ ನಾಗರೀಕರಕಲ್ಯಾಣಾಧಿಕಾರಿ ಯವರಕಚೇರಿಯಿಂದ ವಿದ್ಯಾರ್ಥಿ ವೇತನ ಹಾಗೂ ಪ್ರತಿಭಾ ಪುರಸ್ಕಾರ ಪಬ್ಲಿಕ್ ಪರೀಕ್ಷೆಗಳಲ್ಲಿ ಶೇ.60ಕ್ಕಿಂತ ಹೆಚ್ಚು ಅಂಕ ಪಡೆದ ವಿಕಲಚೇತನ ವಿದ್ಯಾರ್ಥಿಗಳು ಅರ್ಹರಾಗಿದ್ದು ಖಜಾನೆ–2 ಮುಖಾಂತರ ವಿಕಲಚೇತನ ವಿದ್ಯಾರ್ಥಿಗಳ ಖಾತೆಗೆಜಮಾ ಮಾಡಲಾಗಿದೆ.

4. **ಶುಲ್ಕ ಮರುಪಾವತಿ :** ಉನ್ನತ ಶಿಕ್ಷಣ (ಪಿ.ಯು.ಸಿ) ನಂತರ ವಿದ್ಯಾಭ್ಯಾಸ ಪಡೆಯುತ್ತಿರುವ ವಿಕಲಚೇತನ ವಿದ್ಯಾರ್ಥಿಗಳಿಗೆ ಶಾಲಾ ಮುಖ್ಯಸ್ಥರ ಶಿಫಾರಸ್ಸು ಮೇರೆಗೆಜಿಲ್ಲಾಅಂಗವಿಕಲರ ಮತ್ತು ಹಿರಿಯ ನಾಗರೀಕರ ಕಲ್ಯಾಣಾಧಿಕಾರಿಗಳಕಛೇರಿಗೆ ರೂ.4.3 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದುಅದರಲ್ಲಿಒಟ್ಟು ರೂ.2.94 ಲಕ್ಷಗಳನ್ನು ಖಜಾನೆ–2 ಮುಖಾಂತರ ವಿಕಲಚೇತನ ವಿದ್ಯಾರ್ಥಿಗಳ ಖಾತೆಗೆಜಮಾ ಮಾಡಲಾಗಿದೆ.

5. **ಸಾಧನೆ ಪ್ರತಿಭೆ :** ರಾಷ್ಟ್ರ ಮತ್ತುಅಂತರರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸುವ ವಿಕಲಚೇತನರಿಗೆ ಸಾಧನೆ ಪ್ರತಿಭೆ ನೀಡುವಯೋಜನೆಯಾಗಿದ್ದು 2018–19ನೇ ಸಾಲಿಗೆ ಈ ಯೋಜನೆಗೆಯಾವುದೇಅನುಧಾನ ಬಿಡುಗಡೆಯಾಗಿರುವುದಿಲ್ಲ.

6. **ಆಧಾರ್‌ಯೋಜನೆ :** ಈ ಯೋಜನೆಯಡಿಯಲ್ಲಿ ಲೋಹದ ಪೆಟ್ಟಿಗೆ ಹಾಗೂ 20,000/– ಬಡ್ಡಿರಹಿತ ಸಾಲವನ್ನು ನೀಡಲಾಗುವುದು ರೂ.12,000/– ರಿಂದ 17,000/– ಕ್ಕಿಂತಕಡಿಮೆಆದಾಯದ 18 ರಿಂದ 60 ವರ್ಷದ ಒಳಗಿನ ವಿಕಲಚೇತನ ವ್ಯಕ್ತಿಗಳಿಗೆ ನೀಡುವಯೋಜನೆಯಾಗಿದ್ದು2018–19ನೇ ಸಾಲಿಗೆ ಈ ಯೋಜನೆಗೆಯಾವುದೇಅನುಧಾನ ಬಿಡುಗಡೆಯಾಗಿರುವುದಿಲ್ಲ.

7. **ವಿಕಲಚೇತನರ ಬಸ್‌ಪಾಸ್ :** ಕೆ.ಎಸ್.ಆರ್.ಟಿ.ಸಿ ವೇಗದೂತ ಬಸ್‌ನಲ್ಲಿ (ಅಂತರ್‌ರಾಜ್ಯ ಹೊರತು ಪಡಿಸಿ) ಸ್ವ–ಂತ ವಿಳಾಸದಿಂದ 100 ಕಿ.ಮೀ. ವ್ಯಾಪ್ತಿಯಲ್ಲಿಉಚಿತ ಪ್ರಯಾಣ, ವಾರ್ಷಿಕ ರೂ.660 ಶುಲ್ಕವನ್ನು ಭರಿಸಬೇಕಾಗುವುದು. ಕೆ.ಎಸ್.ಆರ್.ಟಿ.ಸಿ ಇಲಾಖೆಗೆ ಅರ್ಜಿ ಸಲ್ಲಿಸಿ ಬಸ್‌ಪಾಸ್ ಪಡೆಯಬಹುದು ಹಾಗೂ ಸರ್ಕಾರಿಉದ್ಯೋಗಿಯಾಗಿರಬಾರದು, ಆದಾಯಮಿತಿಇಲ್ಲದೇ ಪ್ರತಿ ವರ್ಷ ಶುಲ್ಕ ತುಂಬಿ ನವೀಕರಿಸಬೇಕು.

8. **ಸಾಧನ ಸಲಕರಣೆಗಳು :** 2018–19ನೇ ಸಾಲಿಗೆ ರೂ.6 ಲಕ್ಷ ಬಿಡುಗಡೆಯಾಗಿದ್ದುಕುಟುಂಬದ ವಾರ್ಷಿಕಆದಾಯ 12,000/– ರಿಂದ 17,000/– ಕ್ಕಿಂತಕಡಿಮೆಆದಾಯ ಬಿ.ಪಿ.ಎಲ್‌ಕಾರ್ಡ್, ವಿಕಲಚೇತನರಗುರುತಿನಚೀಟಿ ಹೊಂದಿರುವವರು ಇಲಾಖೆಗೆ ಅರ್ಜಿ ಸಲ್ಲಿಸಿರುವ 118 ಫಲಾನುಭವಿಗಳಿಗೆ ಒಟ್ಟು ರೂ.5.99 ಲಕ್ಷಗಳನ್ನು ಗಾಲಿಕುರ್ಚಿ, ಮೂರುಚಕ್ರದ ಸೈಕಲ್, ವಾಕರ್, ಶ್ರವಣ ಸಾಧನ, ಎಲ್ಬೋಕ್ರಚ್ಚಸ್, ಕಂಕುಳ ದೊಣ್ಣೆ, ಅಂಧರ ಬಿಳಿಕೋಲು, ಬ್ರೈಲ್ ವಾಚ್, ಎಂ.ಆರ್.ಕಿಟ್ ಮುಂತಾದ ಸಾಧನ ಸಲಕರಣೆಗಳನ್ನು ಖರೀದಿಸಿ ವಿತರಿಸಲಾಗುತ್ತಿದೆ.

9. **ನಿವಾರಣಾ ಶಸ್ತ್ರಚಿಕಿತ್ಸೆಗೆ ವೈದ್ಯಕೀಯ ನೆರವು :** 2018–19ನೇ ಸಾಲಿಗೆ ರೂ.0.50ಲಕ್ಷಗಳು ಬಿಡುಗಡೆಯಾಗಿದ್ದುಕುಟುಂಬದ ವಾರ್ಷಿಕಆದಾಯ 12,000/– ರಿಂ 17,000/– ಕ್ಕಿಂತಕಡಿಮೆಇರುವ ವಿಕಲಚೇತನ ವ್ಯಕ್ತಿಗಳು ಶಸ್ತ್ರಚಿಕಿತ್ಸೆಯನ್ನು ಮಾಡಿಸಿ ಗುಣಮುಖರಾದಲ್ಲಿ ರೂ.1.00 ಲಕ್ಷದವರೆಗಿನ ವೈದ್ಯಕೀಯ ಪರಿಹಾರ ನೆರವನ್ನುಇಲಾಖೆಯಿಂದ ಪಡೆಯಲುಜಿಲ್ಲಾಅಂಗವಿಕಲರ ಮತ್ತು ಹಿರಿಯ ನಾಗರೀಕರಕಲ್ಯಾಣಾಧಿಕಾರಿಯವರು ನಿಗದಿತ ನಮೂನೆಯಲ್ಲಿಅರ್ಜಿಸಲ್ಲಿಸಿದ ಫಲಾನುಭವಿಗಳಿಗೆ ನೀಡಲಾಗುವುದು.

10. **ವಿಶೇಷ ಶಾಲೆ :** 2018–19ನೇ ಸಾಲಿಗೆ ರೂ.101.00 ಲಕ್ಷ ಬಿಡುಗಡೆಯಾಗಿದ್ದು ವಿಶೇಷ ಮಕ್ಕಳಿಗಾಗಿ ಚಿಕ್ಕಮಗಳುರು ಜಿಲ್ಲೆಯಲ್ಲಿಅಂಧ ಮಕ್ಕಳಿಗಾಗಿ 1 ರಿಂದ 10ನೇ ತರಗತಿಯ ವರೆಗೆವಸತಿಯುತ ವಿಶೇಷ ಶಾಲೆಯಲ್ಲಿರುವ 77 ಫಲಾನುಭವಿಗಳಿಗೆ ರೂ.93.32 ಲಕ್ಷಗಳನ್ನು ಖಜಾನೆ–2 ಮುಖಾಂತರಖಾತೆಗೆಜಮಾ ಮಾಡಲಾಗಿದೆ.

11. **ಶಿಶು ಕೇಂದ್ರೀಕೃತ ಶಾಲೆಗಳು :** 2018–19ನೇ ಸಾಲಿನ ಶಾಲೆಗೆ ರೂ.107.22 ಲಕ್ಷ ಬಿಡುಗಡೆಯಾಗಿದ್ದು ಶ್ರವಣದೋಷ ಮತ್ತು ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆಯಿಂದ 180 ಮಕ್ಕಳಿಗೆ ರೂ.106.92ಲಕ್ಷಗಳನ್ನು ಖಜಾನೆ–2 ಮುಖಾಂತರಖಾತೆಗೆಜಮಾ ಮಾಡಲಾಗಿದೆ.

12. **ಗ್ರಾಮೀಣ ಪುನರ್ವಸತಿಯೋಜನೆ :** 2018–19ನೇ ಸಾಲಿಗೆ ವಿವಿದ್ದೋದ್ದೇಶ ಪುನರ್ವಸತಿಕಾರ್ಯಕರ್ತರು ಹಾಗೂ ಗ್ರಾಮೀಣಪುನರ್ವಸತಿಕಾರ್ಯಕರ್ತರಿಗೆರೂ.60.75 ಲಕ್ಷಅನುಧಾನ ಬಿಡುಗಡೆಯಾಗಿದ್ದು, ಒಟ್ಟು ರೂ.60.45 ಲಕ್ಷಗಳನ್ನು ವಿವಿದ್ದೋದ್ದೇಶ ಪುನರ್ವಸತಿಕಾರ್ಯಕರ್ತರು ಹಾಗೂ ಗ್ರಾಮೀಣ ಪುನರ್ವಸತಿಕಾರ್ಯಕರ್ತರಿಗೆ ಖಜಾನೆ–2 ಮುಖಾಂತರಖಾತೆಗೆಜಮಾ ಮಾಡಲಾಗಿದೆ.

13. **ನಿರಾಮಯಯೋಜನೆ :** ನಿರಾಮಯಯೋಜನೆಯಡಿ ಬುದ್ಧಿಮಾಂದ್ಯ ಸೆರಬಲ್ ಪಾಲ್ಸಿ, ಆರ್ಟಿಸಂ ಮತ್ತು ಬಹುವಿಧ ಬಡತನರೇಖೆಗಿಂತ ಕೆಳಗಿರುವ ವಿಕಲಚೇತನರಿಗೆ ನಿರಾಮಯಆರೋಗ್ಯ ವಿಮಾಯೋಜನೆಯಡಿ ಸರ್ಕಾರವು ಪ್ರತೀ ಫಲಾನುಭವಿಗೆ ನ್ಯಾಷನಲ್‌ಟ್ರಸ್ಟ್ ಅಡಿ ನಿರಾಮಯಖಾತೆಗೆ ರೂ.250/–ರಂತೆಆರೋಗ್ಯ ವಿಮೆಯ ವೈಯಕ್ತಿಕಗುರುತಿನಚೀಟಿ ಪಡೆಯಲು 2018–19ನೇ ಸಾಲಿಗೆ ರೂ.16,000/–ಗಳು ಬಿಡುಗಡೆಯಾದಅನುಧಾನದಲ್ಲಿ ಫಲಾನಿಭವಿಗಳಿಗೆ ನೆರವನ್ನುಇಲಾಖೆಯಿಂದ ಪಡೆಯಲುಜಿಲ್ಲಾಅಂಗವಿಕಲರ ಮತ್ತು ಹಿರಿಯ ನಾಗರೀಕರಕಲ್ಯಾಣಾಧಿಕಾರಿಯವರು ನಿಗದಿತ ನಮೂನೆಯಲ್ಲಿ ಫಲಾನುಭವಿಗಳಿಗೆ ನೀಡಲಾಗುವುದು.

14. **ವಸತಿ ನಿಲಯ :** ಚಿಕ್ಕಮಗಳೂರು ಜಿಲ್ಲೆಯಲ್ಲಿಉದ್ಯೋಗಸ್ಥ ಮಹಿಳೆಯರ ಮತ್ತು ವಿದ್ಯಾರ್ಥಿನಿಯರ ವಸತಿ ನಿಲಯವು ವಿದ್ಯಾರ್ಥಿಗಳ ದಾಖಲಾತಿಕೊರತೆಯಿಂದ ಮುಚ್ಚಲಾಗಿದೆ.

15. **ವಿಶ್ವ ವಿಕಲಚೇತನ ದಿನಾಚರಣೆ :** ಪ್ರತೀ ವರ್ಷಡಿಸೆಂಬರ್ 3 ರಂದುಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ವಿಶ್ವವಿಕಲಚೇತನರ ದಿನಾಚರಣೆಗೆ ರೂ.60,000/–ಗಳು ಬಿಡುಗಡೆಯಾದಅನುದಾನವನ್ನು ಸಂಪೂರ್ಣವಾಗಿಖರ್ಚು ಭರಿಸಲಾಗಿದೆ.

16. **ಹಿರಿಯನಾಗರೀಕರಗುರುತಿನಚೀಟಿ :** ಜಿಲ್ಲೆಯಅರ್ಹ ಸಂಸ್ಥೆಗಳಿಂದ ಹಿರಿಯ ನಾಗರೀಕರಿಗೆ 6513ಗುರುತಿನ ಚೀಟಿಗಳನ್ನು ವಿತರಿಸಲಾಗುತ್ತದೆ.

17. **ವೃದ್ಧಾಶ್ರಮ :** ಈ ಜಿಲ್ಲೆಯಲ್ಲಿ 2 ವೃದ್ಧಾಶ್ರಮಗಳಿದ್ದು ಕೇಂದ್ರ ಸರ್ಕಾರದಡಿ ನಡೆಯುತ್ತಿರುವ ವೃದ್ಧಾಶ್ರಮಕ್ಕೆ 2018–19ನೇ ಸಾಲಿಗೆರಾಜ್ಯಅನುದಾನದಲ್ಲಿ ನಡೆಯುತ್ತಿರುವ ವೃದ್ಧಾಶ್ರಮಕ್ಕೆ ಬಿಡುಗಡೆಯಾದ ರೂ.7.99 ಲಕ್ಷಅನುಧಾನವನ್ನು ಸಂಪೂರ್ಣವಾಗಿಖರ್ಚು ಭರಿಸಲಾಗಿದೆ.

18. **ರಾಜ್ಯ ಪ್ರಶಸ್ತಿ :** ವಿಕಲಚೇತನರಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿ ಹಾಗೂ ಸಂಸ್ಥೆಗೆ ರಾಜ್ಯ ಪ್ರಶಸ್ತಿ ಯೋಜನೆಯಾಗಿದ್ದುಯೋಜನೆಯು 2018–19ನೇ ಸಾಲಿಗೆ ಯಾವುದೇಅನುಧಾನ ಬಿಡುಗಡೆಯಾಗಿರುವುದಿಲ್ಲ.

19. **ವಿವಾಹ ಯೋಜನೆ :** ವಿಕಲಚೇತನರನ್ನು ಸಾಮಾನ್ಯ ಫಲಾನುಭವಿ ವಿವಾಹದಲ್ಲಿ ರೂ.50,000/–(ಐವತ್ತು ಸಾವಿರರೂಪಾಯಿ) ಗಳನ್ನು ಜಂಟಿಖಾತೆಯಲ್ಲಿಠೇವಣಿರೂಪದಲ್ಲಿ 5 ವರ್ಷಗಳ ವರೆಗೆಇಡಲಾಗುವುದು ಈ ಯೋಜನೆಗೆ 2018–19ನೇ ಸಾಲಿಗೆ

ರೂ.13.00 ಲಕ್ಷಗಳು ಬಿಡುಗಡೆಯಾಗಿದ್ದುಇದರಲ್ಲಿ13.00 ಲಕ್ಷಗಳನ್ನು26 ಫಲಾನುಭವಿಗಳಿಗೆ ಖಜಾನೆ–2 ಮುಖಾಂತರಖರ್ಚು ಭರಿಸಿದೆ.

20. **ಶಿಶು ಪಾಲನಾ ಭತ್ಯೆ :** ಅಂಧ ಮಹಿಳೆಯರಿಗೆ ಜನಿಸುವ ಮಕ್ಕಳ ಪಾಲನೆ ಪೋಷಣೆಗೆ 2 ವರ್ಷಗಳವರೆಗೆ ಪ್ರತಿ ತಿಂಗಳು ರೂ.2,000/–ಗಳನ್ನು ತಾಯಿಯಖಾತೆಚೆಕ್ ನೀಡಲಾಗುವುದು. ಈ ಯೋಜನೆಗೆ 2018–19ನೇ ಸಾಲಿಗೆ ರೂ.0.24 ಲಕ್ಷಗಳು ಬಿಡುಗಡೆಯಾಗಿದ್ದುಅದರಲ್ಲಿಒಟ್ಟು ರೂ.0.22 ಲಕ್ಷಗಳು 3 ಫಲಾನುಭವಿಗಳಿಗೆಖಜಾನೆ–2 ಮುಖಾಂತರಖರ್ಚು ಭರಿಸಿದೆ.

21. **ಜಿಲ್ಲಾ ವಿಕಲಚೇತನ ಪುನರ್ವಸತಿಕೇಂದ್ರ(ಡಿ.ಡಿ.ಆರ್.ಸಿ) :** ಜಿಲ್ಲೆಯಲ್ಲಿ ಸಂಘ–ಸಂಸ್ಥೆಗಳ ಮೂಲಕ ನಡೆಯುತ್ತಿರುವಜಿಲ್ಲಾ ವಿಕಲಚೇತನರ ಪುನರ್ವಸತಿಕೇಂದ್ರ (ಡಿ.ಡಿ.ಆರ್.ಸಿ) ಯೋಜನೆಗೆ 2018–19ನೇ ಸಾಲಿಗೆ ಈ ಯೋಜನೆಗೆ ರೂ.19.00 ಲಕ್ಷಗಳು ಬಿಡುಗಡೆಯಾಗಿದ್ದುಇದರಲ್ಲಿ ರೂ.18.95 ಲಕ್ಷಗಳನ್ನು 7 ಫಲಾನುಭವಿಗಳಿಗೆ ಖಜಾನೆ–2 ಮುಖಾಂತರಖರ್ಚು ಭರಿಸಿದೆ.

22. **ಬುದ್ಧಿಮಾಂದ್ಯ ಮಕ್ಕಳ ಜೀವ ವಿಮಾಯೋಜನೆ :** ಬುದ್ಧಿಮಾಂದ್ಯ ವ್ಯಕ್ತಿಗಳ ಪೋಷಕರು ನಿಧನರಾದಾಗಅವರ ಪಾಲನೆ ಪೋಷಣೆ ಪೋಷಕರಿಗೆ ಪ್ರೋತ್ಸಾಧನ ನೀಡುವಯೋಜನೆಯಾಗಿದೆ. ಈ ಯೋಜನೆಗೆ 2018–19ನೇ ಸಾಲಿನಲ್ಲಿಯಾವುದೇಅನುಧಾನ ಬಿಡುಗಡೆಯಾಗಿರುವುದಿಲ್ಲ.

23. **ಹಿರಿಯ ನಾಗರೀಕರ ಸಹಾಯವಾಣಿಕೇಂದ್ರ :** ಸಂಘ–ಸಂಸ್ಥೆಗಳ ಮೂಲಕ ನಡೆಯುತ್ತಿರುವ ಈ ಕೇಂದ್ರಕ್ಕೆ ರೂ.6.16ಲಕ್ಷಗಳು ಬಿಡುಗಡೆಯಾಗಿದ್ದು, ಬಿಡುಗಡೆಯಾದ ರೂ.6.16 ಲಕ್ಷಗಳ ಅನುದಾನವನ್ನು ಖಜಾನೆ–2 ಮುಖಾಂತರಖರ್ಚು ಭರಿಸಿದೆ.

24. **ಯಂತ್ರಚಾಲಿತತ್ರಿಚಕ್ರ ವಾಹನ :** ಶೇ. 75ಕ್ಕೂ ಮೇಲ್ಪಟ್ಟ ವಿಕಲತೆ ಹೊಂದಿದ್ದು, ಕೈಗಳು ಸ್ವಾಧಿನತೆಇರುವ ಹಾಗೂ 18 ರಿಂದ 60 ವರ್ಷದೊಳಗಿರುವ ವಿಕಲಚೇತನರಿಗೆ 2018–19ನೇ ಸಾಲಿಗೆ ಇಲಾಖೆವತಿಯಿಂದಯಂತ್ರಚಾಲಿತತ್ರಿಚಕ್ರ ಮೋಟಾರ್ ವಾಹನವನ್ನುಆಯ್ಕೆಯಾದ ಫಲಾನುಭವಿಗಳಿಗೆ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಬೆಂಗಳೂರು ಕಛೇರಿಯಿಂದ ಬಂದ ನಂತರ ವಿತರಿಸಲಾಗುವುದು.

25. **ಟಾಕಿಂಗ್ ಲ್ಯಾಪ್‌ಟಾಪ್‌ಯೋಜನೆ :** 2018–19 ನೇ ಸಾಲಿಗೆ ಎಸ್.ಎಸ್.ಎಲ್.ಸಿ ನಂತರ ವಿದ್ಯಾಭ್ಯಾಸ ಮಾಡುತ್ತಿರುವ ವಿಧ್ಯಾರ್ಥಿಗಳಿಗೆಅರ್ಜಿ ಸಲ್ಲಿಸಿರುವ ವಿಧ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್‌ಟಾಪ್ ಗಳನ್ನು ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಬೆಂಗಳೂರು ಕಛೇರಿಯಿಂದ ಬಂದ ನಂತರ ವಿತರಿಸಲಾಗುವುದು.

26. **ವಿಕಲಚೇತನರಿಗೆ ಸಹಾಯವಾಣಿಕೇಂದ್ರ :** ಜಿಲ್ಲೆಯ ವಿಕಲಚೇತನರಿಗೆಅಗತ್ಯ ಸಲಹೆ ಮಾರ್ಗದಶನಕೇಂದ್ರದಿಂದ ನೀಡಲಾಗುವುದು.

27. **ಹಿರಿಯ ನಾಗರೀಕರ ಹಗಲು ಯೋಗಕ್ಷೇಮಕೇಂದ್ರಯೋಜನೆ :** ಹಿರಿಯ ನಾಗರೀಕರಿಗೆಆರೋಗ್ಯರಕ್ಷಣೆ ಮತ್ತುಇತರೆ ಅವಶ್ಯಕತೆಗಳನ್ನು ಒದಗಿಸಲಾಗುವುದು. ಈ ಯೋಜನೆಗೆ ರೂ.9.85 ಲಕ್ಷ ಬಿಡುಗಡೆಯಾಗಿದ್ದು ಬಿಡುಗಡೆಯಾದಅನುಧಾನದಲ್ಲಿ ರೂ.9.85 ಲಕ್ಷಗಳ ಅನುಧಾನವನ್ನು ಖಜಾನೆ–2 ಮುಖಾಂತರಖರ್ಚು ಭರಿಸಿದೆ.

28. **ಅರಿವಿನ ಸಿಂಚನ ವಿಕಲಚೇತನರಿಗೆ :** ಚಿಕ್ಕಮಗಳೂರು ಜಿಲ್ಲೆಯ ವಿಕಲಚೇತನರಿಗೆಗ್ರಾಮ ಪಂಚಾಯಿತಿವಾರುಅರಿವು ಮೂಡಿಸುವಯೋಜನೆಯಾಗಿದೆ ಈ ಯೋಜನೆಗೆ2018–19ನೇ ಸಾಲಿನಲ್ಲಿಯಾವುದೇಅನುಧಾನ ಬಿಡುಗಡೆಯಾಗಿರುವುದಿಲ್ಲ.

29. **ಸ್ಪರ್ಧಾಚೇತನ :** ಸ್ಪರ್ಧಾಚೇತನಯೋಜನೆಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗೆ(ಐ.ಎ.ಎಸ್ ಪೂರ್ವಭಾವಿ ಪರೀಕ್ಷೆ) ತರಬೇತಿ ಪಡೆಯುತ್ತಿರುವ ನಿರುದ್ಯೋಗಿ ವಿಕಲಚೇತನರಿಗೆ ಮಾಸಿಕ ಪ್ರೋತ್ಸಾಹಧನವನ್ನು ನೀಡುವಯೋಜನೆಯಾಗಿದೆ.ಈ ಯೋಜನೆಗೆ 2018–19ನೇ ಸಾಲಿನಲ್ಲಿಯಾವುದೇಅನುಧಾನ ಬಿಡುಗಡೆಯಾಗಿರುವುದಿಲ್ಲ.

ಜಿಲ್ಲಾ ವಿಕಲಚೇತನರ ಹಾಗೂ
ಹಿರಿಯ ನಾಗರೀಕರ ಸಬಲೀಕರಣ ಅಧಿಕಾರಿಗಳು
ಚಿಕ್ಕಮಗಳೂರು

ಜಿಲ್ಲಾ ವಯಸ್ಕರ ಶಿಕ್ಷಣ ಇಲಾಖೆ

ಡಾ//ಡಿ.ಎಂ.ನಂಜುಂಡಪ್ಪವರದಿಯನ್ವಯ ಜಿಲ್ಲೆಯ ಹಿಂದುಳಿದ ತಾಲ್ಲೂಕುಗಳಾದ ಕಡೂರು ಮತ್ತು ತರೀಕೆರೆ ತಾಲ್ಲೂಕುಗಳಲ್ಲಿ ಮಾನ್ಯ ನಿರ್ದೇಶಕರು ಲೋಕ ಶಿಕ್ಷಣ ನಿರ್ದೇಶನಾಲಯ ಬೆಂಗಳೂರು ರವರ ನಿರ್ದೇಶನದಂತೆ ಹಿಂದುಳಿದ ತಾಲ್ಲೂಕುಗಳಲ್ಲಿ 2018–19 ನೇ ಸಾಲಿನಲ್ಲಿ ನಡೆದ ಬೋಧಕರುಗಳ ಮೂಲಕ ಸಾಕ್ಷರತಾ ಕಾರ್ಯಕ್ರಮವನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಯಿತು..

ಕ್ರ. ಸಂ	ಕಾರ್ಯಕ್ರಮದ ಹೆಸರು	ಬಿಡುಗಡೆಯಾದ ಅನುದಾನ	ಖರ್ಚು	ಶೇಕಡ ವಾರು	ಭೌತಿಕ ಗುರಿ	ಭೌತಿಕ ಸಾಧನೆ	ಶೇಕಡ ವಾರು
01	ಹಿಂದುಳಿದ ತಾಲ್ಲೂಕುಗಳಲ್ಲಿ ಬೋಧಕರುಗಳ ಮೂಲಕ ಸಾಕ್ಷರತೆ	9,00,000	7,27,060	81%	1200	1152	96%

ಕಛೇರಿ ಸಿಬ್ಬಂದಿಯ ವಿವರ

ಕ್ರ.ಸಂ	ಹುದ್ದೆಗಳ ವಿವರ	ಮಂಜೂರು	ಭರ್ತಿ	ಖಾಲಿ
1	ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ	01	01	–
2	ಕಾರ್ಯಕ್ರಮ ಸಹಾಯಕರು	01	01	–
3	ದ್ವಿತೀಯ ದರ್ಜೆ ಸಹಾಯಕರು	01	–	01
4	"ಡಿ"ಗ್ರೂಪ್ ನೌಕರ	01	01	–

ಸಿಬ್ಬಂದಿಯ ವೇತನ ಮತ್ತು ಸಾದಿಲ್ವಾರು ವೆಚ್ಚದ ವಿವರ

ಕ್ರ. ಸಂ	ಲೆಕ್ಕ ಶೀರ್ಷಿಕೆ	ಜಿಲ್ಲಾ ಪಂಚಾಯಿತಿ ಯಿಂದ ಬಿಡುಗಡೆ ಯಾದ ಅನುದಾನ	ವೇತನ ಅನುದಾನ ಅನುದಾನ	ಖರ್ಚು	ಸಾದಿಲ್ವಾರು	ಖರ್ಚು
01	2202–00–103–0–36 (001)	25,24,000	24,35,749	24,35,749	–	–
02	2202–00–103–0–36 (090)	2,29,000	–	–	2,29,000	52,268

ಜಿಲ್ಲಾ ವಯಸ್ಕರ ಶಿಕ್ಷಾಣಾಧಿಕಾರಿ
ಚಿಕ್ಕಮಗಳೂರು

ಕೈಮಗ್ಗ ಮತ್ತು ಜವಳಿ ಇಲಾಖೆ

ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳ ಮತ್ತು ಇಲಾಖೆಯ ಅಂಕಿ–ಅಂಶಗಳು.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಮಟ್ಟದ ಕಛೇರಿಯಿದ್ದು, ಸ್ವತಂತ್ರವಾಗಿ 1992ರಿಂದ ಕಾರ್ಯನಿರ್ವಹಿಸುತ್ತಿದೆ. ತಾಲ್ಲೂಕು ಮಟ್ಟದಲ್ಲಿ ಕಛೇರಿಯಾಗಲಿ, ಸಿಬ್ಬಂದಿಯಾಗಲಿ ಇರುವುದಿಲ್ಲ. ಹಾಲಿ ಇಲಾಖೆಯು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯಿತಿಯ ಆಡಳಿತ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಕಛೇರಿಯು ಜಿಲ್ಲಾ ಕೈಗಾರಿಕ ಕೇಂದ್ರದ ಸರ್ಕಾರಿ ಕಟ್ಟಡದಲ್ಲಿ ಕೆಲಸ ನಿರ್ವಹಿಸುತ್ತಿದೆ. ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ ಇವರು ಕಛೇರಿಯ ಮುಖ್ಯಸ್ಥರಾಗಿದ್ದು, ಒಬ್ಬರು ಸಹಾಯ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಛೇರಿ ದೂರವಾಣಿ ಸಂಖ್ಯೆ: 08262–220021

ಇಲಾಖೆಯ ಜಿಲ್ಲಾ ಮಟ್ಟದ ಕಛೇರಿಯಲ್ಲಿರುವ ಮಂಜೂರಾದ ಸಿಬ್ಬಂದಿ ಸಂಖ್ಯಾ ಬಲ

ಗುಂಪು	ಮಂಜೂರಾದ ಹುದ್ದೆಗಳ ಸಂಖ್ಯೆ	ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ	ಖಾಲಿ ಹುದ್ದೆಗಳ ಸಂಖ್ಯೆ
ಬಿ	02	01	01
ಸಿ	02	01	01
ಡಿ	01	00	01
ಒಟ್ಟು	05	02	03

1. ಜಿಲ್ಲೆಯಲ್ಲಿರುವ ಕೈಮಗ್ಗ ನೇಕಾರಿಕೆ ಅಭಿವೃದ್ಧಿಗಾಗಿ ಇಲಾಖೆಯು ಕಾರ್ಯನಿರ್ವಹಿಸುತ್ತಿದ್ದು, ಇದಕ್ಕಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಕೇಂದ್ರ ವಲಯ ಯೋಜನೆಯಾದ ಪ್ರಧಾನಮಂತ್ರಿ ಸುರಕ್ಷಾ ಬೀಮಾ ಯೋಜನೆ ಮತ್ತು ಪ್ರಧಾನಮಂತ್ರಿ ಜೀವನಜ್ಯೋತಿ ಯೋಜನೆ ಮತ್ತು ರಾಜ್ಯ ಸರ್ಕಾರದ ಯೋಜನೆಗಳಾದ ನೇಕಾರರ ಕಲ್ಯಾಣ ಯೋಜನೆ, ನೂತನ ಜವಳಿ ನೀತಿ ಯೋಜನೆ, ಹೊಸ ವಿನ್ಯಾಸ ಮತ್ತು ಪ್ರೌವೃತ್ತಿ ಯೋಜನೆ, ಕೈಮಗ್ಗ ಉತ್ಪನ್ನಗಳ ಮಾರಾಟದ ಮೇಲೆ ಶೇ.20ರ ಪ್ರೋತ್ಸಾಹ ರಿಬೇಟ್ ಪ್ರಮುಖ ಯೋಜನೆಗಳಾಗಿವೆ. ಇದೇ ರೀತಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯಿತಿಯ ಮೂಲಕ ಅನುಷ್ಠಾನಗೊಳಿಸುತ್ತಿರುವ ಕೈಮಗ್ಗ ಉದ್ದಿಮೆಗಳಿಗೆ ಸಹಾಯಧನ ಯೋಜನೆಯಡಿ ಕೈಮಗ್ಗಗಳ ಆಧುನೀಕರಣಕ್ಕೆ ಸಹಾಯಧನ ಇತ್ಯಾದಿ ಪ್ರಮುಖ ಯೋಜನೆಗಳಾಗಿವೆ.
2. ಕೈಮಗ್ಗ ಉತ್ಪಾದನೆಗಳಲ್ಲಿ ಹತ್ತಿ ಬಟ್ಟೆ ಉತ್ಪಾದನೆಯೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರಮುಖ ಸ್ಥಾನ ಹೊಂದಿದೆ. ಶೃಂಗೇರಿ, ಮರ್ಲೆ (ಚಿಕ್ಕಮಗಳೂರು ತಾಲ್ಲೂಕು), ಶಿವನಿ (ತರೀಕೆರೆ ತಾಲ್ಲೂಕು), ಕಡೂರು ತಾಲ್ಲೂಕುಗಳಲ್ಲಿ ಹತ್ತಿ ಬಟ್ಟೆ, ಪ್ರಮುಖವಾಗಿ ಟವೆಲ್, ಬೆಡ್‌ಸ್ಪ್ರೆಡ್‌ಗಳನ್ನು ಉತ್ಪಾದನೆ ಮಾಡಲಾಗುತ್ತಿದೆ.
3. ಜಿಲ್ಲೆಯಲ್ಲಿ ಒಟ್ಟು 05 ಕೈಮಗ್ಗ ನೇಕಾರರ ಸಹಕಾರ ಸಂಘಗಳ ಪೈಕಿ 04 ಕೈಮಗ್ಗ ನೇಕಾರರ ಸಹಕಾರ ಸಂಘಗಳು ಕಾರ್ಯ ನಿರ್ವಹಿಸುತ್ತಿವೆ. ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗವನ್ನು ಒದಗಿಸಿರುವ ಕೈಮಗ್ಗ ನೇಕಾರಿಕೆಯನ್ನು ಉಳಿಸಿ ಬೆಳೆಸುವುದು ಉದ್ದೇಶವಾಗಿರುತ್ತದೆ.

ಜಿಲ್ಲೆಯಲ್ಲಿರುವ ತಾಲ್ಲೂಕುವಾರು ಕೈಮಗ್ಗಗಳು ಹಾಗೂ ನೋಂದಾಯಿತ (ಚಾಲ್ತಿಯಲ್ಲಿರುವ) ನೇಕಾರರ ಸಹಕಾರ ಸಂಘಗಳ ಅಂಕಿ–ಅಂಶಗಳು

ಕ್ರ.ಸಂ.	ತಾಲ್ಲೂಕು	ಕೈಮಗ್ಗಗಳು	ಸಸಹಕಾರ ಸಂಘಗಳು
1	ಚಿಕ್ಕಮಗಳೂರು	30	01
2	ಶೃಂಗೇರಿ	40	01
3	ತರೀಕೆರೆ	30	02
4	ಕಡೂರು	30	01
	ಒಟ್ಟು	130	05

ಕ್ರ.ಸಂ.	ಯೋಜನೆಯ ಹೆಸರು	ವಿವರ
1	ಕೈಮಗ್ಗ ಉದ್ಯಮಗಳಿಗೆ ಸಹಾಯಧನ	ಕೈಮಗ್ಗ ನೇಕಾರರ ಸಹಕಾರ ಸಂಘಗಳು ನಿರಂತರ ಉತ್ಪಾದನೆಯಲ್ಲಿ ತೊಡಗಿಸಲು ಅನುಕೂಲವಾಗುವಂತೆ ಸುಧಾರಿತ ಕೈಮಗ್ಗ ಮತ್ತು ಆಧುನಿಕ ಸುಧಾರಿತ ಸಲಕರಣೆಗಳ ಖರೀದಿಗಾಗಿ ಸಹಾಯಧನ ರೂಪದಲ್ಲಿ ನೀಡಲಾಗುವುದು ಹಾಗೂ ಕೈಮಗ್ಗ ನೇಕಾರರ ಸಹಕಾರ ಸಂಘಗಳಿಗೆ ದುಡಿಮೆ ಬಂಡವಾಳವನ್ನು ಸಾಲದ ರೂಪದಲ್ಲಿ ನೀಡಲಾಗುತ್ತಿದೆ.

ಕ್ರ. ಸಂ	ಕಾರ್ಯಕ್ರಮದ ಹೆಸರು	ಅನುದಾನ ಹಂಚಿಕೆ		ಸಾಧನೆ		ಷರಾ
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	
1	ಜಿಲ್ಲಾ ವಲಯ ಯೋಜನೆ ಕೈಮಗ್ಗ ಉದ್ದಿಮೆಗಳಿಗೆ ಸಹಾಯಧನ–	4	6.00	4	6.00	ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 04 ನೇಕಾರರ ಸಹಕಾರ ಸಂಘಗಳಿಗೆ ದುಡಿಮೆ ಕೈಮಗ್ಗಗಳ ಬಂಡವಾಳ ಹಾಗೂ ಕೈಮಗ್ಗಗಳ ಆಧುನೀಕರಣಗೊಳಿಸಲು ಕೈಮಗ್ಗ ಮತ್ತು ಸಲಕರಣೆಗಳನ್ನು ಖರೀದಿಸಲು ಬಿಡುಗಡೆ ಮಾಡಲಾಗಿದೆ.
	ಒಟ್ಟು	**4**	**6.00**	**4**	**6.00**	
2	ಕೈಮಗ್ಗ ಮತ್ತು ವಸ್ತ್ರಾಲಯ ಗಳಿಗೆ ವೇತನಾಂಶ (ಯೋಜನೇತರ)	05	35.72	02	20.96	ಅಧಿಕಾರಿ/ಸಿಬ್ಬಂದಿ ವರ್ಗದವರ ವೇತನ ಮತ್ತು ಆಡಳಿತ ವೆಚ್ಚಗಳು
	ಒಟ್ಟು	**05**	**35.72**	**02**	**20.96**	

ರಾಜ್ಯ ವಲಯ ಯೋಜನೆಯಡಿ ಈ ಕೆಳಕಂಡ ಕಾರ್ಯಕ್ರಮಗಳು ಚಾಲ್ತಿಯಲ್ಲಿರುತ್ತದೆ.

ಕ್ರ.ಸಂ.	ಯೋಜನೆಯ ಹೆಸರು	ವಿವರ
1	**ನೂತನ ಜವಳಿ ನೀತಿ ಯೋಜನೆ 2018–19**	* ಜವಳಿ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿ ಮತ್ತು ಸಿದ್ಧ ಉಡುಪು ವಲಯಕ್ಕೆ ಆದ್ಯತೆ. * ಉದ್ಯೋಗ ಸೃಜನೆ–ವಿಶೇಷವಾಗಿ ಮಹಿಳೆಯರು, ಗ್ರಾಮೀಣ ಪ್ರದೇಶದ ಮತ್ತು ಹಿಂದುಳಿದ ಪ್ರದೇಶದ ವಿದ್ಯಾವಂತ ಹಾಗೂ ಅವಿದ್ಯಾವಂತ ನಿರುದ್ಯೋಗಿ ಯುವಜನತೆಗೆ ತರಬೇತಿಯನ್ನು ನೀಡಲಾಗುವುದು. * ಜವಳಿ ಕ್ಷೇತ್ರದ ವಿವಿಧ ಕೌಶಲ್ಯಗಳ ಅಭಿವೃದ್ಧಿ. * ಬೆಂಗಳೂರು ಜಿಲ್ಲೆಯಲ್ಲಿ ಕೇಂದ್ರಿಕೃತವಾಗುತ್ತಿರುವ ಜವಳಿ ಕೈಗಾರಿಕೆಗಳನ್ನು ರಾಜ್ಯದ ಇತರೆ ಪ್ರದೇಶಗಳಿಗೆ ಆಕರ್ಷಿಸುವುದು. * ಜವಳಿ ಕೈಗಾರಿಕೆಗಳ ತಾಂತ್ರಿಕ ಉನ್ನತಿಕರಣ ಹಾಗೂ ಮೌಲ್ಯವರ್ಧನೆ * ರಾಜ್ಯದ ಸರ್ವತೋಮುಖ ಆರ್ಥಿಕ ಅಭಿವೃದ್ಧಿ * ಚಿಕ್ಕಮಗಳೂರು ಜಿಲ್ಲೆಯಲ್ಲಿ 06 ವಿದ್ಯುತ್ ಹೊಲಿಗೆ ತರಬೇತಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಇಲ್ಲಿ ವಿದ್ಯಾವಂತ ನಿರುದ್ಯೋಗ ಯುವಕ/ಯುವತಿಯರಿಗೆ 45 ದಿನಗಳ ತರಬೇತಿ ನೀಡಲಾಗುತ್ತಿದೆ. * 2018–19 ನೇ ಸಾಲಿನಲ್ಲಿ 559 ಫಲಾನುಭವಿಗಳಿಗೆ ಎಸ್.ಎಂ.ಓ ತರಬೇತಿಯನ್ನು ನೀಡಲಾಗಿರುತ್ತದೆ.

ಸಹಾಯಕ ನಿರ್ದೇಶಕರು
ಕೈಮಗ್ಗ ಮತ್ತು ಜವಳಿ ಇಲಾಖೆ, ಚಿಕ್ಕಮಗಳೂರು

ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ
ಯೋಜನಾ ಸಮನ್ವಯಾಧಿಕಾರಿಯವರ ಕಛೇರಿ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಚಿಕ್ಕಮಗಳೂರು.

ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದಿರುವ ಪರಿಶಿಷ್ಟ ವರ್ಗದ ಅಭಿವೃದ್ಧಿಗೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳು ಅನೇಕ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿವೆ. ಜಿಲ್ಲಾ ಮಟ್ಟದಲ್ಲಿ ಸಮಗ್ರಗಿರಿಜನ ಅಭಿವೃದ್ಧಿ ಯೋಜನೆ (ಐ.ಟಿ.ಡಿ.ಪಿ) ಈ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುತ್ತಿದೆ.

ಜಿಲ್ಲೆಯ 7 ತಾಲ್ಲೂಕಿನ ಪರಿಶಿಷ್ಟ ವರ್ಗದಜನರ ಪ್ರಗತಿಗಾಗಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೇಯಿಂದ ಐ.ಟಿ.ಡಿ.ಪಿ ಮೂಲಕ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ನಡೆಯುತ್ತಿರುವ ತಾಲ್ಲೂಕುವಾರು ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯಗಳ ವಿವರ.

ಕ್ರಸಂ	ತಾಲ್ಲೂಕು	ವಿದ್ಯಾರ್ಥಿನಿಲಯಗಳ ಸಂಖ್ಯೆ			ಮಂಜೂರಾದ ವಿದ್ಯಾರ್ಥಿಗಳ ಸಂಖ್ಯೆ		
		ಬಾಲಕರು	ಬಾಲಕಿಯರು	ಒಟ್ಟು	ಬಾಲಕರು	ಬಾಲಕಿಯರು	ಒಟ್ಟು
1	ಚಿಕ್ಕಮಗಳೂರು	–	2	2	–	150	150
2	ಕಡೂರು	1	–	1	50	–	50
3	ಕೊಪ್ಪ	1	1	2	50	50	100
4	ಮೂಡಿಗೆರೆ	1	1	2	75	75	150
5	ಶೃಂಗೇರಿ	–	1(ಮೆಟ್ರಿಕ್ ನಂತರ)	1	–	110	110
	ಒಟ್ಟು	3	5	8	175	385	560

ವಿದ್ಯಾರ್ಥಿ ನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆ ಊಟ, ವಸತಿ, ಸಮವಸ್ತ್ರ ಪಠ್ಯಪುಸ್ತಕ, ಲೇಖನಾ ಸಾಮಗ್ರಿ, ನೋಟ್‌ಪುಸ್ತಕಇತ್ಯಾದಿ ಸೌಲಭ್ಯಗಳನ್ನು ಉಚಿತವಾಗಿ ನೀಡಲಾಗುವುದು. ಲೆಕ್ಕ ಶೀರ್ಷಿಕೆ 2225–00–102–0–33 (ಯೋಜನೆ) ಬಾಬ್ತಿನಲ್ಲಿ ಬರುವ 4 ವಿದ್ಯಾರ್ಥಿನಿಲಯಗಳು ಹಾಗೂ 2 ಆಶ್ರಮಶಾಲೆಗಳಿಗೆ ರೂ. 139.421 ಲಕ್ಷಗಳ ವೆಚ್ಚ ಭರಿಸಲಾಗಿದೆ. ಲೆಕ್ಕ ಶೀರ್ಷಿಕೆ 2225–00–102–0–38 (ಯೋಜನೆ) ಯಡಿ ಶೃಂಗೇರಿತಾಲ್ಲೂಕಿನಲ್ಲಿ ನಡೆಯುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಕ್ಕೆ ಮೂಲಭೂತ ಸೌಕರ್ಯ ಮತ್ತು ನಿರ್ವಹಣೆ ಹಾಗೂ ಸಿಬ್ಬಂದಿ ವೇತನ, ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಪಿಯುಸಿ, ತಾಂತ್ರಿಕಕೋರ್ಸ್/ ಪದವಿ/ಸ್ನಾತಕೋತ್ತರ ಪದವಿ/ ಇಂಜಿನಿಯರಿಂಗ್/ಮೆಡಿಕಲ್ ಕೋರ್ಸ್‌ಗಳಲ್ಲಿ ಪ್ರಥಮ ಬಾರಿಗೆ ಪ್ರಥಮದರ್ಜೆಯಲ್ಲಿಉತ್ತೀರ್ಣಹೊಂದಿದ ವಿದ್ಯಾರ್ಥಿಗಳಿಗೆ ಕ್ರಮವಾಗಿ 20000, 25000, 30000 ಮತ್ತು 35000ಗಳನ್ನು ಪಾವತಿಸಲುಒಟ್ಟು ರೂ. 87.544.ಲಕ್ಷಗಳ ವೆಚ್ಚ ಭರಿಸಲಾಗಿದೆ.

ಲೆಕ್ಕ ಶೀರ್ಷಿಕೆ 2225–00–102–0–35 (ಯೋಜನೇತರ) ರಡಿ 10 ಆಶ್ರಮಶಾಲೆಗಳಿಗೆ ರೂ. 147.130 ಲಕ್ಷಗಳ ಖರ್ಚು ಭರಿಸಲಾಗಿದೆ.

ಜಿಲ್ಲೆಯಲ್ಲಿ 12 ಆಶ್ರಮಶಾಲೆಗಳಿದ್ದು, ಅವುಗಳ ಒಟ್ಟು ಮಂಜೂರಾತಿ ಸಂಖ್ಯೆ: 1150 ಇರುತ್ತದೆ. ಮೂಡಿಗೆರೆತಾಲ್ಲೂಕು ಸಂಸೆ (ಕೇಂದ್ರ) ಗಿರಿಜನಆಶ್ರಮಶಾಲೆಯಲ್ಲಿ 5ನೇ ತರಗತಿಯಿಂದ 7ನೇ ತರಗತಿಯವರೆಗೆಒಟ್ಟು 125 ವಿದ್ಯಾರ್ಥಿಗಳಿಗೆ, ಸಂಸೆ (ರಾಜ್ಯ) ಗಿರಿಜನಆಶ್ರಮಶಾಲೆಯಲ್ಲಿ 1ನೇ ತರಗತಿಯಿಂದ 4ನೇ ತರಗತಿಯವರೆಗೆ 100 ವಿದ್ಯಾರ್ಥಿಗಳಿಗೆ ಹಾಗೂ ಇನ್ನುಳಿದ 10 ಆಶ್ರಮಶಾಲೆಗಳಲ್ಲಿ 1ನೇ ತರಗತಿಯಿಂದ 5ನೇ ತರಗತಿಯವರೆಗೆ 925 ವಿದ್ಯಾರ್ಥಿಗಳಿಗೆ ಊಟ, ವಸತಿ, ಸಮವಸ್ತ್ರ, ಲೇಖನ ಸಾಮಗ್ರಿ, ನೋಟ್‌ಪುಸ್ತಕಇತ್ಯಾದಿ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗುತ್ತದೆ.

ಗಿರಿಜನ ಆಶ್ರಮ ಶಾಲೆಗಳ ವಿವರ

ಕ್ರ.ಸಂ.	ತಾಲ್ಲೂಕು	ಗಿರಿಜನ ಆಶ್ರಮ ಶಾಲೆ	ಮಂಜೂರಾತಿ ಸಂಖ್ಯೆ	ಒಟ್ಟು
1.	ಚಿಕ್ಕಮಗಳೂರು	1	125	125
2.	ಕಡೂರು	1	125	125
3.	ಕೊಪ್ಪ	3	275	275
4.	ಮೂಡಿಗೆರೆ	4	375	375
5.	ನರಸಿಂಹರಾಜಪುರ	1	75	75
6.	ಶೃಂಗೇರಿ	1	100	100
7.	ತರೀಕೆರೆ	1	75	75
	ಒಟ್ಟು	12	1150	1150

ಮೊರಾರ್ಜಿದೇಸಾಯಿ ಮಾದರಿ ವಸತಿ ಶಾಲೆ: ಈ ಜಿಲ್ಲೆಯಲ್ಲಿ 1 ಮೊರಾರ್ಜಿದೇಸಾಯಿ ವಸತಿ ಶಾಲೆ, ಸಿಂದಿಗೆರೆ ಹಾಗೂ 1 ಏಕಲವ್ಯ ಮಾದರಿ ವಸತಿ ಶಾಲೆ, ತರುವೆಇದ್ದು ಶಾಲೆಯ ಮಂಜೂರಾತಿ ಸಂಖ್ಯೆಕ್ರಮವಾಗಿ 241 ಮತ್ತು 281 ಇರುತ್ತದೆ. ಜಿಲ್ಲೆಗೆ 2 ಡಾ॥ ಬಿ.ಆರ್.ಅಂಬೇಡ್ಕರ್ ವಸತಿ ಶಾಲೆಗಳು ಮಂಜೂರಾಗಿದ್ದು, 6 ರಿಂದ 10ನೇ ತರಗತಿಯವರೆಗೆ ವಿದ್ಯಾಭ್ಯಾಸಕಲ್ಪಿಸಬೇಕಾಗಿದ್ದು, ತರೀಕೆರೆತಾಲ್ಲೂಕು ಶಿವನಿ, ಅಂಬೇಡ್ಕರ್ ವಸತಿ ಶಾಲೆಗೆ ನಿವೇಶನ ಮಂಜೂರಾಗಿದೆ. ಹಾಗೂ ಚಿಕ್ಕಮಗಳೂರು ತಾಲ್ಲೂಕುಆವತಿ, ಅಂಬೇಡ್ಕರ್ ವಸತಿ ಶಾಲೆಗೆ ನಿವೇಶನ ಮಂಜೂರು ಮಾಡಲು ಪ್ರಸ್ತಾವನೆ ಸಲ್ಲಿಸಲಾಗಿದೆ. ಸದರಿ ನಿಲಯಗಳಲ್ಲಿ ತಲಾ 100ರ ವಿದ್ಯಾರ್ಥಿಗಳಂತೆ 200 ವಿದ್ಯಾರ್ಥಿಗಳು 6ನೇ ಮತ್ತು 7ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಸದರಿ ವಿದ್ಯಾರ್ಥಿಗಳಿಗೆ ಊಟ, ವಸತಿ, ಸಮವಸ್ತ್ರ, ಲೇಖನ ಸಾಮಗ್ರಿ, ನೋಟ್‌ಪುಸ್ತಕಇತ್ಯಾದಿ ಸೌಲಭ್ಯಗಳನ್ನು ಉಚಿತವಾಗಿಒದಗಿಸಲಾಗುತ್ತದೆ. ಈ ಸೌಲಭ್ಯಗಳಿಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು ಇವರಿಂದಅನುದಾನ ಬಿಡುಗಡೆಯಾಗುತ್ತಿದೆ.

ಜಿಲ್ಲೆಯಲ್ಲಿ ವಾಸವಿರುವ ಪರಿಶಿಷ್ಟ ಪಂಗಡದಗೌಡಲು ಮತ್ತು ಹಸಲರುಜನಾಂಗದವರು ವಾಸವಿರುವ ಚಿಕ್ಕಮಗಳೂರು, ಮೂಡಿಗೆರೆ, ಕೊಪ್ಪ, ಶೃಂಗೇರಿ ಮತ್ತು ನ.ರಾ.ಪುರತಾಲ್ಲೂಕು ವ್ಯಾಪ್ತಿಗಳಲ್ಲಿ ಹೆಚ್ಚು ಮಳೆ ಬೀಳುವುದರಿಂದ, ಅಪೌಷ್ಠಿಕತೆಉಂಟಾಗದಂತೆ ನೋಡಿ ಕೊಳ್ಳಲು, ಪ್ರತಿ ವರ್ಷದಜೂನ್ ಮಾಹೆಯಿಂದ ನವೆಂಬರ್ ಮಾಹೆಯವರೆಗೆಒಟ್ಟು 6 ತಿಂಗಳಗಳ ಕಾಲ ಗೌಡಲುಜನಾಂಗದ 1955 ಕುಟುಂಬಗಳಿಗೆ ಹಾಗೂ ಹಸಲರುಜನಾಂಗದ 3941 ಕುಟುಂಬಗಳಿಗೆ ವರ್ಷದ ಪ್ರತಿ 6 ತಿಂಗಳಲ್ಲಿ ಪೌಷ್ಠಿಕ ಆಹಾರವಾಗಿ ಅಕ್ಕಿ–15.ಕೆ.ಜಿ, ತೊಗರಿ ಬೇಳೆ–5.ಕೆ.ಜಿ, ಕಾಳು–5.ಕೆ.ಜಿ, ಸಕ್ಕರೆ–4.ಕೆ.ಜಿ, ಅಡಿಗೆ ಎಣ್ಣೆ–2.ಲೀ, ನಂದಿನಿ ತುಪ್ಪ–1.ಕೆ.ಜಿ. ಮತ್ತು ಕೋಳಿ ಮೊಟ್ಟೆ–45 ಪ್ರತಿ ಕುಟುಂಬಗಳಿಗೆ ವಿತರಣೆ ಮಾಡಲಾಗುತ್ತಿದೆ.

ಜಿಲ್ಲೆಯ 7 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ 7 ವಿದ್ಯಾರ್ಥಿನಿಲಯಗಳಿಗೆ ಸ್ವಂತಕಟ್ಟಡವಿರುತ್ತದೆ. (ಕಡೂರುತಾಲ್ಲೂಕು, ಸಿಂಗಟಗೆರೆ ಬಾಲಕರ ವಿದ್ಯಾರ್ಥಿನಿಲಯ, ಚಿಕ್ಕಮಗಳೂರು ತಾಲ್ಲೂಕು, ಕೆಳಗೂರು ಬಾಲಕಿಯರ ವಿದ್ಯಾರ್ಥಿನಿಲಯ, ಕೊಪ್ಪತಾಲ್ಲೂಕು ಬಸರೀಕಟ್ಟೆ ಬಾಲಕರವಿದ್ಯಾರ್ಥಿನಿಲಯ, ಕೊಪ್ಪತಾಲ್ಲೂಕು ಬಾಳಗಡಿಯಲ್ಲಿರುವ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಮೂಡಿಗೆರೆತಾಲ್ಲೂಕು ಕಳಸ ಬಾಲಕರ ಮತ್ತು ಬಾಲಕಿಯರ ಮತ್ತು ಶೃಂಗೇರಿತಾಲ್ಲೂಕಿನ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಸ್ವಂತಕಟ್ಟಡಇರುತ್ತದೆ) ಈ ಜಿಲ್ಲೆಯಲ್ಲಿರುವ 12 ಗಿರಿಜನ ಆಶ್ರಮಶಾಲೆಗಳು ಸ್ವಂತ ಕಟ್ಟಡಗಳನ್ನು ಹೊಂದಿವೆ.

1ರಿಂದ 8ನೇ ತರಗತಿವರೆಗೆ ಹಾಗೂ 9 ಮತ್ತು 10ನೇ ತರಗತಿಯ ಪರಿಶಿಷ್ಟ ವರ್ಗದ ಬಾಲಕ/ ಬಾಲಕಿಯರಿಗೆ ಕೆಳಕಂಡ ವಿವರದಂತೆ ವಿದ್ಯಾರ್ಥಿ ವೇತನ ಮಂಜೂರುಗೊಳಿಸುವ ಕಾರ್ಯಕ್ರಮಜಾರಿಯಲ್ಲಿರುತ್ತದೆ.

ತರಗತಿ	ಬಾಲಕರು	ಬಾಲಕಿಯರು
	ದರ (ರೂ)	ದರ (ರೂ)
1 ರಿಂದ 5 ನೇ ತರಗತಿ	750.00	850.00
6 ರಿಂದ 7 ನೇ ತರಗತಿ	900.00	1000.00
8 ನೇ ತರಗತಿ	1000.00	1100.00
9 ಮತ್ತು 10 ನೇ ತರಗತಿ	2250.00	2250.00

(ಷರಾ: 9–10ನೇ ತರಗತಿಯ ವಿದ್ಯಾರ್ಥಿಗಳಿಗೆ 2013–14ನೇ ಸಾಲಿನಿಂದ ರೂ.2250.00ರಂತೆ ವಿದ್ಯಾರ್ಥಿವೇತನವನ್ನು ನೀಡಲಾಗುತ್ತಿದೆ.)

ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಪ್ರಥಮ ಪ್ರಯತ್ನದಲ್ಲಿ ಪ್ರಥಮದರ್ಜೆಯಲ್ಲಿಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ದ್ವಿತೀಯ ಪಿ.ಯು.ಸಿಯಲ್ಲಿ ರೂ.20000/–ಪದವಿಯಲ್ಲಿ ರೂ.25000/–, ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ರೂ.30000/–, ಬಿಇ ಮತ್ತು ಮೆಡಿಕಲ್ ವಿದ್ಯಾರ್ಥಿಗಳಿಗೆ ರೂ.35000/–ರಂತೆಒಟ್ಟು 293 ವಿದ್ಯಾರ್ಥಿಗಳಿಗೆ ಬಹುಮಾನ ಹಣ ನೀಡಲಾಗಿದೆ.

2018–19ನೇ ಸಾಲಿಗೆ ಜಿಲ್ಲಾ ಪಂಚಾಯಿತಿ / ತಾಲ್ಲೂಕು ಪಂಚಾಯಿತಿಯೋಜನೆ/ ಯೋಜನೇತರ ಲೆಕ್ಕಶೀರ್ಷಿಕೆಗಳಲ್ಲಿ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಪಾವತಿಗಾಗಿ ಮೇಲ್ಕಂಡಎಲ್ಲಾ ವಿವರಗಳಿನುಸಾರವಾಗಿ ಒಟ್ಟುರೂ. 37.962 ಲಕ್ಷಗಳನ್ನು ಖರ್ಚು ಮಾಡಿದ್ದು, ಒಟ್ಟು 378 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮಂಜೂರುಗೊಳಿಸಲಾಗಿದೆ.

ಇದರಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಕ್ಕಾಗಿ ಬಿಡುಗಡೆಯಾದಕೇಂದ್ರ ವಲಯದಅನುದಾನದಲ್ಲಿ ರೂ.94.22 ಲಕ್ಷಗಳಲ್ಲಿ 397 ವಿದ್ಯಾರ್ಥಿಗಳಿಗೆ, ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನಕ್ಕಾಗಿರೂ. 24.310 ಲಕ್ಷಗಳನ್ನು ವೆಚ್ಚ ಮಾಡಿ 439 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲಾಗಿದೆ.

ಕಾನೂನು ಪದವೀಧರರಿಗೆ ತಿಂಗಳಿಗೆ ರೂ.2000/–ದಂತೆ 48 ತಿಂಗಳವರೆಗೆ ಶಿಷ್ಯವೇತನ ಹಾಗೂ ರೂ.5000/–ಗಳನ್ನು ಪುಸ್ತಕ ಖರೀದಿ ಮತ್ತು ಬಾರ್‌ಕೌನ್ಸಿಲ್ ನೋಂದಣಿ ಮಾಡಿಸುವುದಕ್ಕಾಗಿ ನೀಡಲಾಗುವುದು.

ಯೋಜನಾ ಸಮನ್ವಯಾಧಿಕಾರಿ
ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ,
ಚಿಕ್ಕಮಗಳೂರು

ಮೀನುಗಾರಿಕೆ ಇಲಾಖೆ

ಚಿಕ್ಕಮಗಳೂರು ಜಿಲ್ಲೆಯಲ್ಲಿ 128ಇಲಾಖಾ ಕೆರೆಗಳು ಇರುತ್ತವೆ. ಈ ಕೆರೆಗಳ ಮೀನು ಪಾಶುವಾರು ಹಕ್ಕನ್ನು ಇಲಾಖೆಯಿಂದ ಗುತ್ತಿಗೆ ಮತ್ತು ಟೆಂ–ಕಂ–ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು. 1766 ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೆರೆಗಳು ಇರುತ್ತವೆ. ಈ ಕೆರೆಗಳ ಮೀನು ಪಾಶುವಾರು ಹಕ್ಕನ್ನು ಗ್ರಾಮ ಪಂಚಾಯಿತಿಯಿಂದ ಗುತ್ತಿಗೆ ಮತ್ತು ಟೆಂ–ಕಂ–ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು. ಕೆರೆಗಳನ್ನು ಗುತ್ತಿಗೆಗೆ ಅಥವಾ ಟೆಂ–ಕಂ–ಹರಾಜು ಮೂಲಕ ಪಡೆದ ಗುತ್ತಿಗೆದಾರರು ಮೀನುಮರಿಗಳನ್ನು ಇಲಾಖೆಯಿಂದ ಅಥವಾ ಇಲಾಖೆಯ ಅನುಮೋದಿತ ಮೀನುಮರಿ ಪಾಲನಾ ಕೇಂದ್ರಗಳಿಂದ ಖರೀದಿಸಿ ಕೆರೆಗಳಿಗೆ ಬಿತ್ತನೆ ಮಾಡಿ ಮೀನು ಸಾಕಾಣಿಕೆ ಮಾಡಬಹುದು. ನರಸಿಂಹರಾಜಪುರ ತಾಲ್ಲೂಕಿನಲ್ಲಿ ಭದ್ರಾ ಜಲಾಶಯ ಮತ್ತು ತರೀಕೆರೆ ತಾಲ್ಲೂಕಿನಲ್ಲಿ ಜಂಬದಹಳ್ಳ ಜಲಾಶಯಗಳಿದ್ದು, ಸದರಿ ಜಲಾಶಯಗಳಲ್ಲಿ ಮೀನುಗಾರರಿಗೆ ಮೀನು ಹಿಡಿಯಲು ಪರವಾನಿಗೆ ನೀಡಲಾಗುವುದು. ಜಿಲ್ಲೆಯಲ್ಲಿನ ಸೂಕ್ತವಾದ ಎಲ್ಲಾ ಜಲಸಂಪನ್ಮೂಲಗಳನ್ನು ಗುರುತಿಸಿ ಅವುಗಳಲ್ಲಿ ಮೀನುಗಾರಿಕೆಯನ್ನು ಅಭಿವೃದ್ಧಿ ಪಡಿಸಿ ಸಾರ್ವಜನಿಕರಿಗೆ ಪೌಷ್ಟಿಕ ಆಹಾರವನ್ನು ಒದಗಿಸುವುದು ಹಾಗೂ ಉದ್ಯೋಗ ಅವಕಾಶವನ್ನು ಕಲ್ಪಿಸುವುದು ಇಲಾಖೆಯ ಮುಖ್ಯ ಉದ್ದೇಶವಾಗಿರುತ್ತದೆ. ಜಿಲ್ಲೆಯಲ್ಲಿ ಒಟ್ಟು 7 ತಾಲ್ಲೂಕು ಮಟ್ಟದ ಮೀನುಮರಿ ಪಾಲನಾ ಕೇಂದ್ರಗಳಿದ್ದು 2018–19 ನೇ ಸಾಲಿನಲ್ಲಿ 32.485 ಲಕ್ಷ ಮೀನುಮರಿಗಳನ್ನು ಪಾಲನೆ ಮಾಡಿ ಮೀನು ಕೃಷಿಕರಿಗೆ ಮಾರಾಟ ಮಾಡಲಾಗಿದೆ.2018–19 ನೇ ಸಾಲಿನಲ್ಲಿ ಕೆರೆ, ಜಲಾಶಯ ಹಾಗೂ ಕೊಳಗಳಿಗೆ ಒಟ್ಟು 85.84ಲಕ್ಷ ಮೀನುಮರಿಗಳನ್ನು ದಾಸ್ತಾನು ಮಾಡಿದ್ದು, ಒಟ್ಟು ಅಂದಾಜು 5645 ಟನ್ ಮೀನು ಉತ್ಪಾದನೆಯಾಗಿರುತ್ತದೆ. ಮೀನುಗಾರರಿಗೆ ಜಿಲ್ಲಾ ವಲಯ, ರಾಜ್ಯ ವಲಯ ಮತ್ತು ಕೇಂದ್ರ ವಲಯ ಯೋಜನೆಗಳಲ್ಲಿ ಲಭ್ಯವಿರುವ ಸೌಲಭ್ಯಗಳನ್ನು ಇಲಾಖೆಯಿಂದ ಒದಗಿಸಲಾಗುವುದು.

1. ಆಡಳಿತ : ಮೀನುಗಾರಿಕೆ ಇಲಾಖೆ, ಚಿಕ್ಕಮಗಳೂರು ಜಿಲ್ಲೆಯಲ್ಲಿ 5 ತಾಲ್ಲೂಕು ಮಟ್ಟದ ಕಛೇರಿಗಳಿರುತ್ತವೆ.

ತಾಲ್ಲೂಕು ಮಟ್ಟದ ಕಛೇರಿಗಳ ವಿವರ

ಕ್ರ.ಸಂ.	ಹುದ್ದೆ ಮತ್ತು ತಾಲ್ಲೂಕು
1.	ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2) ಚಿಕ್ಕಮಗಳೂರು (ಮೂಡಿಗೆರೆ ಒಳಗೊಂಡಿದೆ)
2.	ಮೀನುಗಾರಿಕೆ ಸಹಾಯಕ ನಿರ್ದೇಶಕರು(ಶ್ರೇ–2) ತರೀಕೆರೆ
3.	ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2) ಕೊಪ್ಪ (ಶೃಂಗೇರಿ ಒಳಗೊಂಡಿದೆ)
4.	ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2) ನರಸಿಂಹರಾಜಪುರ
5.	ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2) ಕಡೂರು

ಜಿಲ್ಲೆಯಲ್ಲಿರುವ ಒಟ್ಟು ಹುದ್ದೆಗಳ ವಿವರ

ಕ್ರ. ಸಂ.	ಕಛೇರಿ ಹೆಸರು	ವರ್ಗ	ಮಂಜೂರಾದ ಹುದ್ದೆಗಳು	ಭರ್ತಿಯಾಗಿರುವ ಹುದ್ದೆಗಳು	ಖಾಲಿಯಿರುವ ಹುದ್ದೆಗಳು	ಪ.ಜಾತಿ ನೌಕರರ ಸಂಖ್ಯೆ	ಪ.ವರ್ಗ ನೌಕರರ ಸಂಖ್ಯೆ
1.	ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–1)	ಬಿ	1	1	–	–	–
2.	ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2)	ಬಿ	5	4	1	–	–
3.	ಮೀನುಗಾರಿಕೆ ಹಿರಿಯ ಮೇಲ್ವಿಚಾರಕರು	ಸಿ	1	1	–	–	–
4.	ಮೀನುಗಾರಿಕೆ ಮೇಲ್ವಿಚಾರಕರು	ಸಿ	2	2	–	1	–
5.	ಪ್ರಥಮ ದರ್ಜೆ ಸಹಾಯಕರು	ಸಿ	1	1	–	–	–
6.	ದ್ವಿತೀಯ ದರ್ಜೆ ಸಹಾಯಕರು	ಸಿ	2	1	1	–	–
7.	ಬೆರಳಚ್ಚುಗಾರರು	ಸಿ	1	–	1	–	–
8.	ವಾಹನ ಚಾಲಕರು	ಸಿ	1	–	1	–	–
9.	ಮೀನುಗಾರಿಕೆ ಕ್ಷೇತ್ರಪಾಲಕರು	ಸಿ	18	3	15	2	–
10	ಕಛೇರಿ ಜವಾನ/ಕಾವಲುಗಾರ	ಡಿ	3	1	2	1	–
		ಒಟ್ಟು	**35**	**14**	**21**	**4**	–

ಜಿಲ್ಲಾ ವಲಯ ಯೋಜನೆಗಳ ವಿವರ :

2018–19 ನೇ ಸಾಲಿನ ವಿವಿಧ ಬಾಬ್ತುಗಳಲ್ಲಿ ಆದ ವೆಚ್ಚದ ವಿವರ

(ರೂ.ಲಕ್ಷಗಳಲ್ಲಿ)

ಕ್ರ. ಸಂ	ಲೆಕ್ಕಶೀರ್ಷಿಕೆ ಮತ್ತು ಕಾರ್ಯಕ್ರಮದ ವಿವರ		ವಾರ್ಷಿಕ ಅನುಧಾನ	ವೆಚ್ಚ	ಷರಾ
1.	2405–00–101–0–26 ನಿರ್ದೇಶನ ಮತ್ತು ಆಡಳಿತ ವಿಭಾಗೀಯ ಸಿಬ್ಬಂದಿ	001	69.25	69.04	ಅಧಕಾರಿ/ಸಿಬ್ಬಂದಿ ವೇತನ,ಕಛೇರಿ ವೆಚ್ಚ ಹಾಗೂ ಹೊರಗುತ್ತಿಗೆ ಸಿಬ್ಬಂದಿ ವೇತನ
		034	18.49	18.45	
		050	3.43	3.42	
2.	2405–00–101–0–28 ಒಳನಾಡು ಮೀನುಗಾರಿಕೆ ಅಭಿವೃದ್ದಿಗೆ ಸಹಾಯ	090	24.00	23.99	ಮೀನುಮರಿ ಪಾಲನಾ ಚಟುವಟಿಕೆ, ಹೊರಗುತ್ತಿಗೆ ವಾಹನ ಬಾಡಿಗೆ, ನಿರ್ವಹಣೆ, ಮೀನುಮರಿಗಳ ಖರೀದಿಗೆ ಉಪಯೋಗಿಸಲಾಗಿದೆ. ಮತ್ತು 32.485 ಲಕ್ಷ ಮೀನುಮರಿಗಳನ್ನು ಪಾಲನೆ ಮಾಡಿ ವಿತರಣೆ ಮಾಡಲಾಗಿದೆ. ಹಾಗೂ ಮೀನುಗಾರಿಕೆ ವೃತ್ತಿಯಲ್ಲಿ ತೊಡಗಿರುವ ಮೀನುಗಾರರಿಗೆ (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ) ಮೀನುಗಾರಿಕೆ ಸಲಕರಣೆ ಕಿಟ್ ವಿತರಣೆ ಕಾಮಗಾರಿ: ಅಯ್ಯನಕೆರೆ ಮೀನುಮರಿ ಪಾಲನಾ ಕೇಂದ್ರದಲ್ಲಿ 03 ಪಾಲನಾ ಕೊಳ ದುರಸ್ಥಿ– 3.50 ಲಕ್ಷ.
		422	1.00	1.00	
		423	1.00	1.00	
3.	2405–00–101–0–27 ಮೀನುಗಾರಿಕೆ ಕಟ್ಟಡಗಳು ಮತ್ತು ಸೌಲಭ್ಯಗಳ ನಿರ್ಮಾಣ ಮತ್ತು ನಿರ್ವಹಣೆ		20.00	20.00	1. ಚಿಕ್ಕಮಗಳೂರು ತಾಲ್ಲೂಕು ಮೀನುಮರಿ ಪಾಲನಾ ಕೇಂದ್ರದಲ್ಲಿ ಮೀನುಮರಿ ಪಾಲನಾ ಕೊಳ ಸಂಖ್ಯೆ: 19 ರ ದುರಸ್ಥಿ– 2.25ಲಕ್ಷ. 2. ಚಿಕ್ಕಮಗಳೂರು ತಾಲ್ಲೂಕು ಮೀನುಮರಿ ಪಾಲನಾ ಕೇಂದ್ರದಲ್ಲಿ ಪ್ಯಾಕಿಂಗ್‌ಶೆಡ್ ನಿರ್ಮಾಣ ಮತ್ತು ಪ್ಯಾಕಿಂಗ್‌ಶೆಡ್‌ಗೆ ಫ್ಲೋರಿಂಗ್ ಕಾಮಗಾರಿ ಮತ್ತು ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2) ರವರ ಕಛೇರಿ ಕಟ್ಟಡ ದುರಸ್ಥಿ.– 2.00ಲಕ್ಷ. 3. ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–1) ಚಿಕ್ಕಮಗಳೂರು ಕಛೇರಿಯ ಆವರಣದಲ್ಲಿ ಕಾಂಪೌಂಡ್ ನಿರ್ಮಾಣ – 0.60ಲಕ್ಷ. 4. ತರೀಕೆರೆ ತಾಲ್ಲೂಕಿನಲ್ಲಿ ಹಾಲಿ ಇರುವ 2 ವಸತಿ ಗೃಹಗಳನ್ನು ಕೆಡವಿ, ಹೊಸದಾಗಿ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2) ರವರ ಕಛೇರಿ ಕಟ್ಟಡ ನಿರ್ಮಾಣ. – 10.00ಲಕ್ಷ. 5. ಅಯ್ಯನಕೆರೆ ಮೀನುಮರಿ ಪಾಲನಾ ಕೇಂದ್ರದಲ್ಲಿ ಕೊಳವೆ ಬಾವಿಗೆ ಪಂಪ್, ಮೋಟಾರ್ ಅಳವಡಿಸುವುದು, ವಿದ್ಯುತ್ ಕಾಮಗಾರಿ ಮತ್ತು ಕೊಳಗಳಿಗೆ ಪೈಪ್‌ಲೈನ್ ಅಳವಡಿಸುವುದು. – 3.00ಲಕ್ಷ. 6. ಅಯ್ಯನಕೆರೆ ಮೀನುಮರಿ ಪಾಲನಾ ಕೇಂದ್ರದಲ್ಲಿ 6 ಮೀನುಮರಿ ಪಾಲನಾ ಕೊಳಗಳ ದುರಸ್ಥಿ – 1.15ಲಕ್ಷ. 7. ಮೂಡಿಗೆರೆ ತಾಲ್ಲೂಕಿನ ಮೀನುಗಾರಿಕೆ ಹಿರಿಯ ಮೇಲ್ವಿಚಾರಕರ ಕಛೇರಿ ಕಟ್ಟಡ ದುರಸ್ಥಿ ಮತ್ತು ಸುಣ್ಣಬಣ್ಣ. – 1.00ಲಕ್ಷ.

4.	2405–00–101–0–30 ಮೀನುಮಾರುಕಟ್ಟೆಗಳ ನಿರ್ಮಾಣ ಮತ್ತು ಮೀನು ಮಾರಾಟಕ್ಕೆ ಸಹಾಯ	4.00	4.00	40 ಜನ ಫಲಾನುಭವಿಗಳಿಗೆ ಮೊಪೆಡ್ ಮತ್ತು ಶಾಖನಿರೋಧಕ ಪೆಟ್ಟಿಗೆ ಖರೀದಿಸುವುದಕ್ಕೆ ಸಹಾಯಧನ ನೀಡಲಾಗಿದೆ.
5.	2405–00–101–0–32 ಪ್ರದರ್ಶನಗಳು ಮತ್ತು ತರಭೇತಿ	2.00	2.00	ಫಲಪುಷ್ಪ ಪ್ರದರ್ಶನ, ಮೈಸೂರು ದಸರ ವಸ್ತುಪ್ರದರ್ಶನ, ಮತ್ಸ್ಯಮೇಳ, ಕೃಷಿಮೇಳದಲ್ಲಿ ಭಾಗವಹಿಸಲು, ಅಕ್ವೇರಿಯಂ ಖರೀದಿ ಮತ್ತು ನಿರ್ವಹಣೆ, ಕರಪತ್ರ, ಮುದ್ರಣ ಇತ್ಯಾದಿ.

3. ತಾಲ್ಲೂಕು ಪಂಚಾಯಿತಿ ಕಾರ್ಯಕ್ರಮ 2018–19

ಕ್ರ. ಸಂ.	ಯೋಜನೆಯ ಹೆಸರು ಮತ್ತು ಲೆಕ್ಕಶೀರ್ಷಿಕೆ	ಆರ್ಥಿಕ		ಭೌತಿಕ	
		ಗುರಿ	ಸಾಧನೆ	ಗುರಿ	ಸಾಧನೆ
1.	ವಿಶೇಷ ಘಟಕ ಯೋಜನೆ ತಾಲ್ಲೂಕು ಪಂಚಾಯಿತಿ ಕಾರ್ಯಕ್ರಮ	1.72	1.72	34	34

4. ರಾಜ್ಯವಲಯ ಯೋಜನೆ: 2018–19

ಕ್ರ. ಸಂ.	ಯೋಜನೆಯ ಹೆಸರು ಮತ್ತು ಲೆಕ್ಕಶೀರ್ಷಿಕೆ		ಆರ್ಥಿಕ		ಭೌತಿಕ	
			ಗುರಿ	ಸಾಧನೆ	ಗುರಿ	ಸಾಧನೆ
1.	ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆಗಾಗಿ ಸಹಾಯಧನ 2405–00–110–0–02		2.00	2.00	20	20
2.	ಮೀನುಮರಿ ಖರೀದಿಗೆ ಸಹಾಯಧನ 2405–00–10–0–28		1.11	1.109	22	22
3.	ಒಳನಾಡು ಮೀನುಗಾರಿಕೆಗೆ ಫೈಬರ್ ಗ್ಲಾಸ್ ಹರಿಗೋಲುಗಳ ವಿತರಣೆ 2405–00–101–0–56		2.0	2.00	20	20
4.	ಮತ್ಸ್ಯಕೃಷಿ ಆಶಾಕಿರಣ ಯೋಜನೆ 2405–00–101–0–03		5.11	5.09	23 ಹೆ	23 ಹೆ
5.	ಸಂಶೋಧನೆ, ವಿಸ್ತರಣೆ, ಪ್ರದರ್ಶನ ಮತ್ತು ತರಬೇತಿ 2405–00–109–0–01–051		0.20	0.20	50	50
6.	ಆರ್.ಕೆ.ವಿ.ವೈ. ಯೋಜನೆಯಡಿ ಮೀನುಗಾರಿಕೆ ಸಲಕರಣೆ ಕಿಟ್ಸ್ ವಿತರಣೆ 2401–00–800–1–57	422	1.00	1.00	10	10
		423	0.40	0.40	04	04
7.	ಆರ್.ಕೆ.ವಿ.ವೈ. ಯೋಜನೆಯಡಿ ಮೀನುಗಾರಿಕೆ ಫೈಬರ್‌ಗ್ಲಾಸ್ ಹರಿಗೋಲು ವಿತರಣೆ 2401–00–800–1–57	422	0.90	0.90	09	09
		423	0.40	0.40	04	04
8.	ಮೀನುಗಾರಿಕೆ ಸಲಕರಣೆ ಕಿಟ್ಟು ಹಾಗೂ ಫೈಬರ್ ಗ್ಲಾಸ್ ಹರಿಗೋಲು ಖರೀದಿಗೆ ಸಹಾಯ (ಘಟಕ ವೆಚ್ಚ : ರೂ.0.20ಲಕ್ಷ) (ವಿ.ಘ.ಯೋ) 2405–00–101–0–66	422	0.20	0.20	1	1
		423	0.20	0.20	1	1

5. ಕೇಂದ್ರ ವಲಯ ಯೋಜನೆ

ಕ್ರ. ಸಂ.	ಯೋಜನೆಯ ಹೆಸರು ಮತ್ತು ಲೆಕ್ಕಶೀರ್ಷಿಕೆ	ಆರ್ಥಿಕ		ಭೌತಿಕ	
		ಗುರಿ	ಸಾಧನೆ	ಗುರಿ	ಸಾಧನೆ
1.	ನೀಲಿಕ್ರಾಂತಿ ಯೋಜನೆ 2405–00–101–0–58	8.52	8.52	3.24	3.24

6. 2018–19 ನೇ ಸಾಲಿನ ಆದಾಯದ ವಿವರ (ರೂ, ಗಳಲ್ಲಿ)

ಕ್ರ.ಸಂ	ಲೆಕ್ಕಶೀರ್ಷಿಕೆ (0405)	ಮೊತ್ತ ರೂ
1.	011–ಬಾಡಿಗೆ	1762863
2.	102–01 ಒಳನಾಡು ಮೀನುಗಾರಿಕೆ ಪರವಾನಿಗೆ	6000
3.	102–02 ಮೀನುಮರಿ ಮಾರಾಟದಿಂದ	713639
4.	102–01 ಮೀನುಗಾರಿಕೆ ಜಲಾಶಯದಿಂದ ಪರವಾನಿಗೆಯಿಂದ	135000
5.	800–03 ಸಲ್ಲಿಸಿದೆ ಸೇವೆಯಿಂದ	0
6.	800–04 ಇತರೇ ಬಾಬ್ತುಗಳಿಂದ	2000
	ಒಟ್ಟು	2619502

7. ಮೀನುಮರಿ ಪಾಲನಾ ಕೇಂದ್ರಗಳ ವಿವರ:–2018–19

ಈ ಕೆಳಗಿನ ಮೀನುಮರಿ ಪಾಲನಾ ಕೇಂದ್ರಗಳಲ್ಲಿ ಮೀನುಮರಿ ಉತ್ಪಾದನಾ ಕೇಂದ್ರವಾದ ಬಿ.ಆರ್.ಪ್ರಾಜೆಕ್ಟ್ ನಿಂದ ಅತೀ ಸಣ್ಣಮೀನುಮರಿಗಳನ್ನು ತಂದು ಬೆರಳುದ್ದದ ಗಾತ್ರದವರಗೆ ಪಾಲನೆ ಮಾಡಿ ಮೀನು ಕೃಷಿಕರಿಗೆ ಸರಬರಾಜು ಮಾಡಲಾಗಿರುತ್ತದೆ.

ಕ್ರ.ಸಂ	ಮೀನುಮರಿ ಕೇಂದ್ರದ ಹೆಸರು	ಮೀನುಮರಿ ವಾರ್ಷಿಕ ಗುರಿ	ಸಾಧನೆ
1.	ಅಗಸರಕಟ್ಟೆ ಮೀನುಮರಿ ಪಾಲನಾ ಕೇಂದ್ರ ಚಿಕ್ಕಮಗಳೂರು	20.00	18.00
2.	ಅಯ್ಯನಕೆರೆ ಮೀನುಮರಿ ಪಾಲನಾ ಕೇಂದ್ರ ಕಡೂರು	10.00	6.625
3.	ಮೀನುಮರಿ ಪಾಲನಾ ಕೇಂದ್ರ ತರೀಕೆರೆ	2.00	1.94
4.	ಮೀನುಮರಿ ಪಾಲನಾ ಕೇಂದ್ರ ನರಸಿಂಹರಾಜಪುರ	3.00	0.75
5.	ಮೀನುಮರಿ ಪಾಲನಾ ಕೇಂದ್ರ ಕೊಪ್ಪ	3.50	1.65
6.	ಮೀನುಮರಿ ಪಾಲನಾ ಕೇಂದ್ರ ಶೃಂಗೇರಿ	2.00	1.10
7.	ಮೀನುಮರಿ ಪಾಲನಾ ಕೇಂದ್ರ ಮೂಡಿಗೆರೆ	5.00	2.42
	ಒಟ್ಟು	45.50	32.485

8. ಕೆರೆ ಹಾಗೂ ಜಲಾಶಯಗಳಿಗೆ ಮೀನುಮರಿ ಬಿತ್ತನೆ ವಿವರ – 2018–19

ಜಿಲ್ಲೆಯಲ್ಲಿ ಇಲಾಖೆಗೆ ಸಂಬಂಧಪಟ್ಟಂತೆ 2018–19 ನೇ ಸಾಲಿನಲ್ಲಿ ಕೆರೆಗಳು, ಜಲಾಶಯ, ಕೊಳಗಳಿಗೆ ಒಟ್ಟು 85.84ಲಕ್ಷ ಮೀನುಮರಿಗಳನ್ನು ದಾಸ್ತಾನು ಮಾಡಿ ಅಭಿವೃದ್ಧಿ ಪಡಿಸಲಾಗಿದೆ.

9. ಜಿಲ್ಲೆಯಲ್ಲಿರುವ ಮೀನುಗಾರಿಕೆ ಸಹಕಾರ ಸಂಘಗಳ ವಿವರ:–

1. ಮೀನುಗಾರರ ಸಹಕಾರ ಸಂಘ ಮೇದರಹಳ್ಳಿ, ಚಿಕ್ಕಮಗಳೂರು.
2. ಶ್ರೀ ಗಂಗಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮೀನುಗಾರರ ವಿವಿದೋದ್ದೇಶ ಸಹಕಾರ ಸಂಘ,ಚಿಕ್ಕಮಗಳೂರು
3. ತರೀಕೆರೆ ತಾಲ್ಲೂಕು ಮೀನುಗಾರರ ಸಹಕಾರ ಸಂಘ, ತರೀಕೆರೆ
4. ಟ್ರೈಬಲ್ ಮೀನುಗಾರರ ಸಹಕಾರ ಸಂಘ, ಕಡೂರು
5. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮೀನುಗಾರರ ಸಹಕಾರ ಸಂಘ, ಹುಲಿಕೆರೆ, ಸಖರಾಯಪಟ್ಟಣ ಹೋ/
6. ವಿಷ್ಣುಸಮುದ್ರ ಮೀನುಗಾರರ ಸಹಕಾರ ಸಂಘ, ಲಿಂಗ್ಲಾಪುರ, ಕೆರೆಸಂತೆ ಅಂಚೆ, ಕಡೂರು
7. ಶ್ರೀ ಸತ್ಯಸೇವಾಲಾಲ್ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಮೀನುಗಾರರ ಸಹಕಾರ ಸಂಘ, ಚಿಕ್ಕಂಗಳ, ಕಡೂರು ತಾಲ್ಲೂಕು

10. ಮಾಹಿತಿ ಹಕ್ಕು ಅಧಿನಿಯಮದಡಿ:–

2018–19 ನೇ ಸಾಲಿನಲ್ಲಿ 03 ಅರ್ಜಿಗಳು ಸ್ವೀಕೃತವಾಗಿದ್ದು ಅಗತ್ಯವಾದ ಮಾಹಿತಿ ನೀಡಿ ವಿಲೇವಾರಿ ಮಾಡಲಾಗಿದೆ.

ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–1)
ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು

ಪಶು ಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ

ಚಿಕ್ಕಮಗಳೂರು ಜಿಲ್ಲೆ ಭಾಗಶಃ ಮಲೆನಾಡು ಮತ್ತು ಭಾಗಶಃ ಬಯಲು ಸೀಮೆ ಹೊಂದಿದ್ದು, ವೈವಿಧ್ಯಮಯ ಹವಾಗುಣ ಸಸ್ಯ ಸಂಪತ್ತು ಮತ್ತು ಸಂಸ್ಕೃತಿಯನ್ನು ಹೊಂದಿ ಬೇರೆ ಜಿಲ್ಲೆಗಳಿಗಿಂತ ವಿಭಿನ್ನವಾದ ಸ್ಥಾನಮಾನ ಪಡೆದಿದೆ. ಜಿಲ್ಲೆಯಲ್ಲಿ ವೈವಿಧ್ಯಮಯ ಪಶು ಸಂಪತ್ತನ್ನು ಕಾಣಬಹುದಾಗಿದೆ. ಮಲೆನಾಡು ಪ್ರದೇಶದಲ್ಲಿ ಪ್ರಸಿದ್ಧವಾದ ಜಾನುವಾರು ತಳಿಯಾದ ಮಲೆನಾಡು ಗಿಡ್ಡ ಮತ್ತು ಬಯಲು ಸೀಮೆಯಲ್ಲಿ ವಿಶ್ವ ವಿಖ್ಯಾತ ಅಮೃತ್ ಮಹಲ್ ತಳಿಯನ್ನು ಈ ಜಿಲ್ಲೆ ಹೊಂದಿದೆ.

2012ರ 19ನೇ ಜಾನುವಾರು ಗಣತಿಯಂತೆ ಜಿಲ್ಲೆಯ ಜಾನುವಾರುಗಳ ಸಂಖ್ಯೆ ಈ ಕೆಳಕಂಡಂತಿದೆ.

ಕ್ರ.ಸಂ	ಜಾನುವಾರುಗಳ ವಿವರ	ಸಂಖ್ಯೆ
1	ದನಗಳು	340908
2	ಎಮ್ಮೆಗಳು	70870
3	ಕುರಿಗಳು	91312
4	ಮೇಕೆಗಳು	46068
5	ಹಂದಿಗಳು	2158
6	ನಾಯಿಗಳು	67782
7	ಇತರೆ ಸಾಕು ಪ್ರಾಣಿಗಳು	1132
8	ಕೋಳಿಗಳು	1178382

ಗ್ರಾಮೀಣ ಜನರ ಬೆನ್ನೆಲುಬಾದ ಈ ಪಶುಗಳ ರಕ್ಷಣೆ ಮತ್ತು ಅಭಿವೃದ್ಧಿಗೆ ಜಿಲ್ಲೆಯ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯು ಈ ಕೆಳಕಂಡ ಸವಲತ್ತುಗಳು ಮತ್ತು ಸೇವೆಯನ್ನು ಪಶು ಪಾಲಕರಿಗೆ ನೀಡುತ್ತಿದೆ.

ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಕಾರ್ಯ ಚಟುವಟಿಕೆಗಳು

1. ಪಶುವೈದ್ಯಕೀಯ ಸೇವೆ
2. ಜಾನುವಾರು ತಳಿ ಅಭಿವೃದ್ಧಿ
3. ಕುರಿ ಮತ್ತು ಉಣ್ಣೆ ಅಭಿವೃದ್ಧಿ
4. ಕುಕ್ಕುಟ ಅಭಿವೃದ್ಧಿ(ಗಿರಿರಾಜ ಕೋಳಿ ಸಾಕಾಣಿಕೆ)
5. ಮೇವು ಅಭಿವೃದ್ಧಿ ಯೋಜನೆ(ಬರಪರಿಹಾರ)
6. ವಿಶೇಷ ಅಭಿವೃದ್ಧಿ ಯೋಜೆನ
7. ಬಂಜೆತನ ನಿವಾರಣೆ ಶಿಬಿರಗಳು
8. ಜಾನುವಾರು ಉತ್ಪನ್ನಗಳ ಸಮೀಕ್ಷೆ(ಮಾದರಿ ಸಮೀಕ್ಷೆ)
9. ಇಲಾಖೆ ಕಟ್ಟಡಗಳ ಅಬಿವೃದ್ಧಿ
10. ವಿಶೇಷ ಘಟಕ ಯೋಜನೆ
11. ಗಿರಿಜನ ಉಪಯೋಜನೆ
12. ವಿಶೇಷ ಘಟಕ ಯೋಜನೆ(ರಾಜ್ಯ ವಲಯ)
13. ಗಿರಿಜನ ಉಪಯೋಜನೆ(ರಾಜ್ಯ ವಲಯ)
14. ಪಶುಭಾಗ್ಯ ಯೋಜನೆ
15. ಅಮೃತ ಯೋಜನೆ
16. ಕುರಿ ಮೇಕೆ ಸಾಕಾಣಿಕೆ

17. ವಿಸ್ತರಣೆ ಮತ್ತು ತರಬೇತಿ ಯೋಜನೆಗಳು
18. ಕಿಸಾನ್ ಸಂಪರ್ಕ ಸಭೆ
19. ಮಿಶ್ರ ತಳಿ ಆಕಳು ಮತ್ತು ಕರುಗಳ ಪ್ರದರ್ಶನ
20. ತಾಂತ್ರಿಕ ಕಾರ್ಯಗಾರ
21. ಅರೆ ತಾಂತ್ರಿಕ ಸಿಬ್ಬಂದಿ ಕಾರ್ಯಗಾರ
22. ಕಾಲುಬಾಯಿ ಜ್ವರ ನಿಯಂತ್ರಣ ಯೋಜನೆ
23. ರಾಷ್ಟ್ರೀಯ ಜಾನುವಾರು ವಿಮಾ ಯೋಜನೆ.

ಪಶುವೈದ್ಯಕೀಯ ಸಂಸ್ಥೆಗಳು

ರೋಗ ಪೀಡಿತ ಜಾನುವಾರುಗಳನ್ನು ಚಿಕಿತ್ಸೆ ಮಾಡುವುದರ ಜೊತೆಗೆ ಜಾನುವಾರುಗಳಿಗೆ ತಗಲಬಹುದಾದ ಸಾಂಕ್ರಾಮಿಕ ರೋಗಗಳ ವಿರುದ್ಧ ಲಸಿಕೆ ಹಾಕುವ ಕಾರ್ಯಕ್ರಮ ಕೈಗೊಂಡು ಪಶುಪಾಲಕರಿಗೆ ಆಗಬಹುದಾದ ಆರ್ಥಿಕ ನಷ್ಟವನ್ನು ತಪ್ಪಿಸಲು ಕಾರ್ಯಕ್ರಮಗಳನ್ನು ಕೆಳಕಂಡ ಪಶುವೈದ್ಯಕೀಯ ಸಂಸ್ಥೆಗಳ ಮೂಲಕ ನಿರ್ವಹಿಸಲಾಗುತ್ತಿದೆ.

ಕ್ರ.ಸಂ	ಸಂಸ್ಥೆಗಳ ವಿವರ	ಸಂಖ್ಯೆ
1	ಪಶು ಆಸ್ಪತ್ರೆಗಳು	24
2	ಪಶು ಚಿಕಿತ್ಸಾಲಯಗಳು	71
3	ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು	39
4	ಪಾಲಿಕ್ಲಿನಿಕ್	01
	ಒಟ್ಟು	135

ದಿನಾಂಕ : 01–04–2018 ರಿಂದ ದಿನಾಂಕ : 31–03–2019ರ ಅಂತ್ಯಕ್ಕೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ನೀಡಿದ ಲಸಿಕೆಯ ಪ್ರಗತಿ ವಿವರ.

ಕ್ರ.ಸಂ	ರೋಗೋದ್ರೇಕದ ಹೆಸರು	ಲಸಿಕೆ ಪಡೆದ ಜಾನುವಾರುಗಳ ಸಂಖ್ಯೆ
1	ಕಾಲುಬಾಯಿ ಜ್ವರ	560992
2	ಚಪ್ಪೆ ರೋಗ	13955
3	ಗಳಲೆ ರೋಗ	36196
4	ಕುರಿಗಳ ಕರುಳು ಬೇನೆ	174892
5	ಕೊಕ್ಕರೆ ರೋಗ	256352
6	ರೇಬೀಸ್(ಹುಚ್ಚುನಾಯಿ ರೋಗ)	75
7	ಪಿ.ಪಿ.ಆರ್	174524

ಜಾನುವಾರು ತಳಿ ಅಭಿವೃದ್ಧಿ :

ಕೃತಕ ಗರ್ಭಧಾರಣೆಯ ಮೂಲಕ ಹೆಚ್ಚು ಹಾಲು ಉತ್ಪಾದನೆ ನೀಡುವ ತಳಿಗಳನ್ನು ಉತ್ಪಾದಿಸುವ ಕಾರ್ಯಕ್ರಮ ಜಿಲ್ಲೆಯಲ್ಲಿ ಪ್ರಗತಿಯಲ್ಲಿದೆ ಮತ್ತು ಜಿಲ್ಲೆಯ ಹೆಮ್ಮೆಯ ತಳಿಯಾದ ಅಮೃತ್ ಮಹಲ್ ಅನ್ನು ಕೂಡ ಕೃತಕ ಗರ್ಭಧಾರಣೆಯ ಮೂಲಕ ಸಂರಕ್ಷಿಸಲಾಗುತ್ತಿದೆ. ಜಿಲ್ಲೆಯ ಪಶುವೈದ್ಯಕೀಯ ಸಂಸ್ಥೆಗಳು 2018–19ನೇ ಸಾಲಿನಲ್ಲಿ ಈ ಕಾರ್ಯಕ್ರಮದಡಿ ಸಾಧನೆ ಮಾಡುತ್ತಿರುತ್ತದೆ.

ಕ್ರ.ಸಂ.	ಕಾರ್ಯಕ್ರಮ ವಿವರ	ಜಾನುವಾರುಗಳ ಸಂಖ್ಯೆ
1	ಕೃತಕ ಗರ್ಭಧಾರಣೆ	99220
2	ಗರ್ಭ ತಪಾಸಣೆ	79923
3	ಗರ್ಭ ಧರಿಸಿರುವುದು	38383
4	ಕರುಗಳ ಜನನ	24258

ಗಿರಿರಾಜ ಕೋಳಿ ಸಾಕಾಣಿಕೆ:

ಹಿತ್ತಲ ಕೋಳಿ ಸಾಕಾಣಿಕೆಗೆ ಸೂಕ್ತವಾಗಿರುವ ಮತ್ತು ಹೆಚ್ಚಿನ ಲಾಭ ಗಳಿಸಿಕೊಡುವ ಗಿರಿರಾಜ ಕೋಳಿ ಮರಿಗಳನ್ನು ಗ್ರಾಮೀಣ ರೈತ ಮಹಿಳೆಯರಿಗೆ ಸರ್ಕಾರ ನಿಗಧಿಪಡಿಸಿರುವ ದರದಲ್ಲಿ ಮಾರಾಟ ಮಾಡುವ ಕಾರ್ಯಕ್ರಮವನ್ನು ಅಜ್ಜಂಪುರ ಕೋಳಿ ವಿಸ್ತರಣಾ ಕೇಂದ್ರದಲ್ಲಿ ಕೈಗೊಳ್ಳಲಾಗಿರುತ್ತದೆ.

2018–19 ಸಾಲಿನಲ್ಲಿ ಜಿಲ್ಲೆಯಲ್ಲಿ 22152 ಗಿರಿರಾಜ ಕೋಳಿ ಮರಿಗಳನ್ನು ಸ್ತ್ರೀ ಶಕ್ತಿ ಸಂಘಗಳಿಗೆ ವಿತರಿಸಲಾಗಿದೆ.

ಮೇವು ಅಭಿವೃದ್ಧಿ ಕಾರ್ಯಕ್ರಮ:

- ಜಿಲ್ಲೆಯಲ್ಲಿ ಒಟ್ಟು 90105.5 ಹೆಕ್ಟೇರ್ ನಲ್ಲಿ ಮೇವು ಬೆಳೆಯಲಾಗಿದೆ.
- ಇಲಾಖೆಯಿಂದ 44662 ಮೇವು ಬೀಜದ ಮಿನಿಕಿಟ್ ಗಳನ್ನು ವಿತರಿಸಲಾಗಿದೆ.

ಜಾನುವಾರು ಉತ್ಪನ್ನಗಳ ಸಮೀಕ್ಷೆ(ಮಾದರಿ ಸಮೀಕ್ಷೆ ಯೋಜನೆ):

ರಾಜ್ಯವಲಯದ ಈ ಯೋಜನೆಯ ಉದ್ದೇಶ ಜಾನುವಾರು ಉತ್ಪನ್ನಗಳಾದ ಹಾಲು, ಮೊಟ್ಟೆ, ಉಣ್ಣೆ ಮತ್ತು ಮಾಂಸ ಇವುಗಳ ವಾರ್ಷಿಕ ಅಂದಾಜು ಮಾಡುವುದು. ಒಂದು ಸಹಾಯಕ ಸಾಂಖ್ಯಿಕ ಅಧಿಕಾರಿ ಮತ್ತು ಎರಡು ಪಶುವೈದ್ಯ ಪರೀಕ್ಷಕರು ಈ ಯೋಜನೆಯಲ್ಲಿ ಕಾರ್ಯನಿರತರಾಗಿದ್ದು, 2018–19 ನೇ ಸಾಲಿನಲ್ಲಿ ಈ ಅಧ್ಯಯನಕ್ಕಾಗಿ 102 ಗ್ರಾಮಗಳಲ್ಲಿ 3 ಋತುಮಾನಗಳಲ್ಲಿ ಸಂಪೂರ್ಣ ಎಣಿಕೆ ಮಾಡಿ ಹಾಗೂ ಸವಿಸ್ತಾರ ಅಧ್ಯಯನಕ್ಕಾಗಿ ಸಮೀಕ್ಷೆ ಮಾಡಿರುತ್ತಾರೆ.

ಇಲಾಖೆಯ ಕಟ್ಟಡಗಳು:

2018–19ನೇ ಸಾಲಿನಲ್ಲಿ ಆರ್.ಐ.ಡಿ.ಎಫ್ ಯೋಜನೆಯಡಿ 18 ಕಟ್ಟಡಗಳ ನಿರ್ಮಾಣಕ್ಕೆ ಅನುಮೋದನೆ ನೀಡಲಾಗಿದ್ದು, 14 ಕಟ್ಟಡಗಳು ಪೂರ್ಣಗೊಂಡಿದ್ದು, 04 ಕಟ್ಟಡಗಳು ನಿರ್ಮಾಣ ಹಂತದಲ್ಲಿರುತ್ತವೆ.

ಪಶುಭಾಗ್ಯ ಯೋಜನೆ :

- ಪಶುಭಾಗ್ಯ ಯೋಜನೆ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇ.50 ರಷ್ಟು ಸಹಾಯಧನ, ಸಾಮಾನ್ಯ ವರ್ಗಕ್ಕೆ ಶೇ.25 ರಷ್ಟು ಸಹಾಯಧನ ವಿತರಿಸಲಾಗುವುದು.
- ಹಾಲು ಉತ್ಪಾದಕರಿಗೆ ಉತ್ತೇಜನ ಉಳಿಕೆಯಾದ ಅನುದಾನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇ.75 ರಷ್ಟು ಸಹಾಯಧನ ವಿತರಿಸಲಾಗುವುದು.
- ಹೈನುಗಾರಿಕೆ: ಆಸಕ್ತ ರೈತರಿಗೆ 02 ಹೈನು ರಾಸುಘಟಕ ಸ್ಥಾಪಿಸಲು ಸಹಾಯಧನ ನೀಡಲಾಗುವುದು.
- ಮಹಿಳೆಯರಿಗಾಗಿ ಹೈನುಗಾರಿಕೆ: ಈ ಯೋಜನೆಯಡಿ ವಿಧವೆ/ದೇವದಾಸಿ ಮಹಿಳೆಯರಿಗೆ ಹೈನುಗಾರಿಕೆಗಾಗಿ 02 ಹೈನು ರಾಸು ಘಟಕ ಸ್ಥಾಪಿಸಲು ಸಹಾಯಧನ ನೀಡಲಾಗುವುದು.
- ಕುರಿ ಸಾಕಾಣಿಕೆ: ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಕುರಿ ಸಾಕಾಣಿಕೆ ಮಾಡುವ ಆಸಕ್ತ ರೈತರಿಗೆ 10+1 ಕುರಿ/ ಮೇಕೆ ಘಟಕಕ್ಕೆ ಸಹಾಯಧನ ನೀಡಲಾಗುವುದು.
- ಹಂದಿ ಸಾಕಾಣಿಕೆ: ಈ ಕಾರ್ಯಕ್ರಮದಲ್ಲಿ ಆಸಕ್ತ ರೈತರಿಗೆ ಹಂದಿ ಸಾಕಾಣಿಕೆಗೆ 10ರ ಘಟಕ ಸ್ಥಾಪಿಸಲು ಸಹಾಯಧನ ನೀಡಲಾಗುವುದು.

ಪಶು ಸಂಗೋಪನಾ ವಿಸ್ತರಣಾ ಚಟುವಟಿಕೆಗಳು :

ಪ್ರತಿ ತಾಲ್ಲೂಕಿನ ವಿಸ್ತರಣಾ ಚಟುವಟಿಕೆಗಳನ್ನು ಕೈಗೊಳ್ಳಲು ಒಂದು ವಿಸ್ತರಣಾಧಿಕಾರಿಯ ಹುದ್ದೆ ಇರುತ್ತದೆ. ಪಶುಪಾಲನೆ ಮತ್ತು ಮೇವು ಅಭಿವೃದ್ಧಿ ಕುರಿತು ಆಸಕ್ತ ರೈತರಿಗೆ ಆಧುನಿಕ ಪಶುಸಂಗೋಪನಾ ಚಟುವಟಿಕೆಯ ಬಗ್ಗೆ ತರಬೇತಿ ನೀಡುವುದು ಮತ್ತು ಗ್ರಾಮ ಸಭೆಗಳಲ್ಲಿ ಇಲಾಖೆಯ ಚಟುವಟಿಕೆಗಳ ಬಗ್ಗೆ ವಿವರಿಸಲಾಗುತ್ತಿದೆ.

ಸಾಮಾಜಿಕ ಮತ್ತು ಆರ್ಥಿಕ ಕಾರ್ಯಕ್ರಮಗಳು :

2018–19ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಕಾರ್ಯಕ್ರಮಗಳ ಪ್ರಗತಿ ವಿವರ.

ಕ್ರ. ಸಂ	ಕಾರ್ಯಕ್ರಮದ ವಿವರ	ನಿಗಧಿಪಡಿಸಿದ ಅನುದಾನ			ಒಟ್ಟು ಬಿಡುಗಡೆ (ರಾ.ವ+ಜಿ.ವ)			ಒಟ್ಟು ಖರ್ಚು (ರಾ.ವ+ಜಿ.ವ)			ಭೌತಿಕ ಪಲಾನುಭವಿಗಳ ಸಂಖ್ಯೆ	
		ರಾಜ್ಯ ವಲಯ	ಜಿಲ್ಲಾ ವಲಯ	ಒಟ್ಟು (ರಾ+ಜಿ)	ರಾಜ್ಯ ವಲಯ	ಜಿಲ್ಲಾ ವಲಯ	ಒಟ್ಟು	ರಾಜ್ಯ ವಲಯ	ಜಿಲ್ಲಾ ವಲಯ	ಒಟ್ಟು	ಗುರಿ	ಸಾಧನೆ
1	ವಿಶೇಷ ಘಟಕ ಯೋಜನೆ	366.35	5.33	371.68	366.35	5.33	371.68	352.44	5.33	357.77	1499	1177
2	ಗಿರಿಜನ ಉಪ ಯೋಜನೆ	73.02	3.83	76.85	73.02	3.83	76.85	69.78	3.83	73.61	332	267

2018–19ನೇ ಸಾಲಿನಲ್ಲಿ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಯೋಜನೆ ಕಾರ್ಯಕ್ರಮದಲ್ಲಿ ಬಿಡುಗಡೆಯಾದ ಅನುದಾನ ಹಾಗೂ ವೆಚ್ಚದ ವಿವರ

ಕ್ರಮ ಸಂಖ್ಯೆ	ಕಾರ್ಯಕ್ರಮದ ಹೆಸರು	ದಿ : 01/04/2018 ರಿಂದ ದಿನಾಂಕ : 31–03–2019ರ ಮಾಹೆಯವರೆಗಿನ ಸಂಚಿತ ಪ್ರಗತಿ					
		ಆರ್ಥಿಕ			ಭೌತಿಕ		
		ಗುರಿ	ಸಾದನೆ	ಶೇಕಡ	ಗುರಿ	ಸಾದನೆ	ಶೇಕಡ
1	2403–00––101–0–26 ವೇತನ	108.00	119.94	100	35	25	100
2	2403–00––101–0–26 ವೇತನ ಮತ್ತು ವೇತನೇತರ ವೆಚ್ಚ	14.88	14.49	97	0	0	0
3	2403–0–101–0–27 ಔಷಧಿಗಳು,ರಾಸಾಯನಿಕ ಪದಾರ್ಥಗಳು ಮತ್ತು ಸಾಮಾಗ್ರಿಗಳ ಸರಬರಾಜು	72.00	72.00	100	94000	99220	100
4	2403–0–101–0–28 ಕಟ್ಟಡಗಳು	45.00	45.00	100	18	18	100
5	2403–0–103–0–31 ಗಿರಿರಾಜ ಹಾಗೂ ಇತರೆ ಹಕ್ಕಿಗಳ ಸಾಕಾಣಿಕೆ	20.00	20.00	100	23500	22152	94
6	2403–0–800–0–30 ವಿಸ್ತಾರಣಾ ಘಟಕಗಳ ಬಲಪಡಿಸುವಿಕೆ	17.50	17.50	100	192	192	100
7	2403–00–101–0–61 ಪ್ರಾ.ಪ.ಚಿ ತೆರೆಯುವುದು ಮತ್ತು ಮೇಲ್ದರ್ಜೆಗೇರಿಸುವುದು	1844.00	1560.17	85	542	316	58
8	2403–00–101–0–61 ಪ್ರಾ.ಪ.ಚಿ ತೆರೆಯುವುದು ಮತ್ತು ಮೇಲ್ದರ್ಜೆಗೇರಿಸುವುದು	109.37	171.37	100	0	0	0
9	2403–00–101–0–63 ಜೀವ ವೈದ್ಯ ತ್ಯಾಜ್ಯ ವಸ್ತುಗಳ ವಿಲೇವಾರಿ	5.00	5.01	100	136	136	100
10	2403–0–101–0–64 ಗೊಡ್ಡು / ಬಂಜೆ ಜಾನುವಾರು ಶಿಬಿರಗಳ ವ್ಯವಸ್ಥೆ	18.00	18.02	100	91	91	100

ಉಪ ನಿರ್ದೇಶಕರು
ಪಶುಪಾಲನಾ ಇಲಾಖೆ,
ಚಿಕ್ಕಮಗಳೂರು

ಸಮಾಜ ಕಲ್ಯಾಣ ಇಲಾಖೆ

ಕ್ರ.ಸಂ.	ಕಾರ್ಯಕ್ರಮಗಳ ಸಂಕ್ಷಿಪ್ತ ವಿವರ	ಸವಲತ್ತು ಪಡೆಯಲು ಅರ್ಹತೆ ಹಾಗೂ ಕಾರ್ಯಕ್ರಮ ಅನುಷ್ಠಾನದ ಬಗ್ಗೆ ಸಂಕ್ಷಿಪ್ತ ಮಾಹಿತಿ		
1	**ಪ.ಜಾತಿ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ**	ತರಗತಿ	ವಿದ್ಯಾರ್ಥಿ ವೇತನದ ಮೊತ್ತ (ಗಂಡು)	ವಿದ್ಯಾರ್ಥಿ ವೇತನದ ಮೊತ್ತ (ಹೆಣ್ಣು)
		1 ರಿಂದ 5ನೇ ತರಗತಿ	1000	1100
		6 ರಿಂದ 7ನೇ ತರಗತಿ	1150	1250
		8 ನೇ ತರಗತಿ	1250	1350
		9 ರಿಂದ 10ನೇ ತರಗತಿ	2250	2250
		2018–19 ಆರ್ಥಿಕ ಗುರಿ 213.53 ಲಕ್ಷ ಭೌತಿಕ 15000. ಮಾರ್ಚ್ 2019ರ ಅಂತ್ಯಕ್ಕೆ 15457 ಭೌತಿಕ ರೂ. 213.53 ಲಕ್ಷ ಆರ್ಥಿಕ		
2	**ಪ.ಜಾತಿ ವಿದ್ಯಾರ್ತಿಗಳಿಗೆ ಭಾರತ ಸರ್ಕಾರ ವಿದ್ಯಾರ್ಥಿ ವೇತನ, ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ನೀಡಿಕೆ**	ಮೆಟ್ರಿಕ್ ನಂತರದಕೋರ್ಸ್‌ನಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಪೋಷಕರ ವರಮಾನ 2.50 ಲಕ್ಷ ರೂಗಳಿಗೆ ಮೀರದಿದ್ದಲ್ಲಿ ಈ ಕೆಳಕಂಡಂತೆ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡಲಾಗುತ್ತದೆ.		
		ಗ್ರೂಪ್	ವಿದ್ಯಾರ್ಹತೆ	ಡೇ ಸ್ಕಾಲರ್ ಪ್ರತಿ ಮಾಹೆಗೆ	ಹಾಸ್ಟೆಲ್‌ದರ ಪ್ರತಿ ಮಾಹೆಗೆ
		I	ಎಂಫಿಲ್, ಪಿ.ಹೆಚ್.ಡಿ, ಇಂಜಿನಿಯರಿಂಗ್, ಮೆಡಿಕಲ್, ಆಯುರ್ವೇದಿಕ್, ಅಗ್ರಿಕಲ್ಚರ್, ಪಶು ಸಂಗೋಪನೆ, ಎಂ.ಬಿ.ಎ, ಸಿ.ಎ / ಐ.ಸಿ.ಡಬ್ಲ್ಯೂ.ಎ/ ಸಿ.ಎಸ್./ ಐ.ಸಿ.ಎಫ್.ಎ / ಡಿಪ್ಲೊಮಾ ಇತ್ಯಾದಿ	550.00	1200.00
		II	ಎಂ.ಎ., ಎಂ.ಕಾಂ, ಎಂ.ಇಡಿ, ಫಾರ್ಮಸಿ, ನರ್ಸಿಂಗ್, ಎಲ್.ಎಲ್.ಬಿ, ಪ್ಯಾರಮೆಡಿಕಲ್‌ಇತ್ಯಾದಿ	530.00	820.00
		III	ಸಾಮಾನ್ಯ ಪದವಿ (ಬಿ.ಎ,ಬಿ.ಕಾಂ, ಬಿ.ಎಸ್ಸಿ)	300.00	570.00
		IV	ಪಿ.ಯು.ಸಿ, ಐ.ಟಿ.ಐ, ಡಿಪ್ಲೋಮೋಇತ್ಯಾದಿ	230.00	380.00
		2018–19 ನೇ ಸಾಲಿಗೆ ಭೌತಿಕಗುರಿ 8080 ಆರ್ಥಿಕರೂ. 444.48 ಲಕ್ಷ. ಮಾರ್ಚ್ 2019ರ ಅಂತ್ಯಕ್ಕೆ ಭೌತಿಕ5411ಆರ್ಥಿಕರೂ. 443.77 ಲಕ್ಷ		
3	**ಕಾಲೇಜು ವಿದ್ಯಾರ್ಥಿಗಳಿಗೆ ಪುರಸ್ಕಾರ, ಶೈಕ್ಷಣಿಕ ಪ್ರವಾಸ ವೆಚ್ಚ ಹಾಗೂ ಶ್ರೇಷ್ಠತೆ ಪಡೆದ ಪ.ಜಾತಿಯ ವಿದ್ಯಾರ್ಥಿಗಳಿಗೆ ಸಹಾಯಧನ**	ಕ್ರ. ಸಂ.	ಕೋರ್ಸ್	ಬಹುಮಾನ ಹಣ	
		1	ದ್ವಿತೀಯಪಿ.ಯು.ಸಿ.	20000.00	
		2	ಬಿ.ಎ., ಬಿ.ಕಾಂ, ಬಿ.ಎಸ್ಸಿ, ಬಿ.ಬಿ.ಎಂ., ಬಿ.ಸಿ.ಎ	25000.00	
		3	ಎಂ.ಎ., ಎಂ.ಎಸ್.ಸಿ., ಎಂ.ಕಾಂ	30000.00	
		4ವೃತ್ತಿಪರಕೋರ್ಸ್ (ಕೃಷಿ, ತೋಟಗಾರಿಕೆ, ಇಂಜಿನಿಯರಿಂಗ್, ವೈದ್ಯಕೀಯ, ಮೀನುಗಾರಿಕೆ) 35000.00 ಮೇಲ್ಕಾಣಿಸಿದಂತೆ ವಿವಿಧ ಕೋರ್ಸ್‌ಗಳಲ್ಲಿ ಪ್ರಥಮ ಬಾರಿಗೆ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದವರಿಗೆ ಬಹುಮಾನ ಹಣ ಮಂಜೂರು ಮಾಡಲಾಗುವುದು. 2018–19ನೇ ಸಾಲಿನಲ್ಲಿ ಭೌತಿಕ 965 ಆರ್ಥಿಕ 221.75. 2019 ಮಾರ್ಚ್ ಅಂತ್ಯಕ್ಕೆ ಭೌತಿಕ 1001 ಆರ್ಥಿಕ ರೂ. 221.75 ಲಕ್ಷ		

4	**ಪ್ರತಿಷ್ಠಿತ ಶಾಲೆಗಳು**	ಜಿಲ್ಲಾ ವ್ಯಾಪ್ತಿಯಲ್ಲಿ 4 ಪ್ರತಿಷ್ಠಿತ ಶಾಲೆಗಳನ್ನು ಇಲಾಖಾ ವತಿಯಿಂದ ಗುರುತಿಸಿ ಪ್ರತಿ ವರ್ಷ 50 ಪ.ಜಾತಿ ವಿದ್ಯಾರ್ಥಿಗಳನ್ನು ಪ್ರವೇಶ ಪರೀಕ್ಷೆ ಮೂಲಕ ಆಯ್ಕೆಗೊಳಿಸಲಾಗುವುದು. 1. ಶ್ರೀ ವೆಂಕಟೇಶ್ವರ ಶಾಲೆ, ಕೊಪ್ಪ 2. ಶ್ರೀ ದರ್ಶಿನಿ ಶಾಲೆ, ಶೃಂಗೇರಿ 3. ಸಂತಜೋಸೆಫ್ ಶಾಲೆ, ಚಿಕ್ಕಮಗಳೂರು 4. ಮೌಂಟೆನ್ ವ್ಯೂ ಶಾಲೆ, ಚಿಕ್ಕಮಗಳೂರು ಪ್ರತಿ ವರ್ಷ ತಲಾ ವಿದ್ಯಾರ್ಥಿ ವರ್ಷಕ್ಕೆ 50000.00 ತಾಲ್ಲೂಕುಗಳಲ್ಲಿ ಜಿಲ್ಲಾ ಕೇಂದ್ರದಲ್ಲಿ ರೂ. 75000.00 ಪ್ರತಿ ವಿದ್ಯಾರ್ಥಿಗೆ.
5	**ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು**	5ನೇ ತರಗತಿಯಲ್ಲಿಉತ್ತೀರ್ಣರಾದ ಪ.ಜಾತಿ/ಪ.ವರ್ಗ ಹಾಗೂ ಇತರೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಅರ್ಹರು ಮೇ ತಿಂಗಳಲ್ಲಿ ಅರ್ಜಿಗಳನ್ನು ತಾಲ್ಲೂಕು ಮಟ್ಟದ ಸಹಾಯಕ ನಿರ್ದೇಶಕರ ಕಛೇರಿ ಇಲ್ಲವೇ ಆಯಾ ವಿದ್ಯಾರ್ಥಿ ನಿಲಯಗಳಿಂದ ಪಡೆದು ನಿಗಧಿತ ವೇಳೆಗೆ ಅರ್ಜಿ ಸಲ್ಲಿಸಬೇಕು. ತಾಲ್ಲೂಕು ಮಟ್ಟದ ಆಯ್ಕೆ ಸಮಿತಿಯಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸಲಾಗುತ್ತದೆ. ವಿದ್ಯಾರ್ಥಿಗಳಿಗೆ ಸರ್ಕಾರಿ ನಿಯಮದಂತೆ ಊಟ, ವಸತಿ, ಸಮವಸ್ತ್ರ, ಪಠ್ಯಪುಸ್ತಕ ಇತ್ಯಾದಿ ಸವಲತ್ತುಗಳನ್ನು ಒದಗಿಸಲಾಗುವುದು. 2018–19ನೇ ಸಾಲಿಗೆ ರೂ.900.42 ಲಕ್ಷ ಆರ್ಥಿಕ 3459 ಭೌತಿಕಗುರಿ ನಿಗಧಿಪಡಿಸಿದ್ದು, ಮಾರ್ಚ್ 2019ರ ಅಂತ್ಯಕ್ಕೆ ರೂ. 1032.24 ಲಕ್ಷ ಆರ್ಥಿಕ ಹಾಗೂ 2541 ಭೌತಿಕ ಪ್ರಗತಿ ಸಾಧಿಸಲಾಗಿದೆ.
6	**ಪ.ಜಾತಿ ವಿದ್ಯಾರ್ಥಿ / ವಿದ್ಯಾರ್ಥಿನಿಯರಿಗೆ ಕಾಲೇಜು ವಿದ್ಯಾರ್ಥಿ ನಿಲಯಗಳು.**	ಜಿಲ್ಲೆಯಲ್ಲಿಇರುವಕಾಲೇಜು ವಿದ್ಯಾರ್ಥಿ ನಿಲಯಗಳಿಗೆ ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುವ ಪ.ಜಾತಿ / ಪ.ವರ್ಗದ ಅಭ್ಯರ್ಥಿಗಳು ಅರ್ಹರಾಗಿರುತ್ತಾರೆ. ಈ ಅಭ್ಯರ್ಥಿಗಳು ಭಾರತ ಸರ್ಕಾರದ ವಿದ್ಯಾರ್ಥಿ ವೇತನಕ್ಕೂ ಕೂಡಅರ್ಹರಾಗಿದ್ದಲ್ಲಿ ಮಾತ್ರ ಪ್ರವೇಶ ಅವಕಾಶ ಕಲ್ಪಿಸಲಾಗುತ್ತದೆ. 2018–19ನೇ ಸಾಲಿಗೆ ರೂ.337.05 ಲಕ್ಷ ಆರ್ಥಿಕ 2145 ಭೌತಿಕಗುರಿ ನಿಗಧಿಪಡಿಸಿದ್ದು, ಮಾರ್ಚ್ 2019ರಅಂತ್ಯಕ್ಕೆ ಅನುದಾನ ಬಿಡುಗಡೆ ರೂ. 395.93 ಲಕ್ಷ ಖರ್ಚಾದ ಅನುದಾನ ರೂ. 392.48ಆರ್ಥಿಕ ಹಾಗೂ 1926 ಭೌತಿಕ ಪ್ರಗತಿ ಸಾಧಿಸಲಾಗಿದೆ.
7	**ಹೆಚ್ಚುವರಿ ಭೋಜನಾ ವೆಚ್ಚ**	ಕಾಲೇಜು ವಿದ್ಯಾರ್ಥಿ ನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ.ಜಾತಿ ವಿದ್ಯಾರ್ಥಿಗಳಿಗೆ ಆಹಾರದ ವೆಚ್ಚ ರೂ.1,500,00/– ಗಳಾಗಿದ್ದು, ಭಾರತ ಸರ್ಕಾರದ ವಿದ್ಯಾರ್ಥಿ ವೇತನ ರೂ.1,500/– ಗಳಿಗೂ ಕಡಿಮೆ ಇದ್ದಲ್ಲಿ ವ್ಯತ್ಯಾಸದ ಹಣವಾಗಿ ಹೆಚ್ಚುವರಿಯಾಗಿ ಭೋಜನ ವೆಚ್ಚವನ್ನು ಮಂಜೂರು ಮಾಡಲಾಗುತ್ತದೆ. 2018–19ನೇ ಸಾಲಿಗೆ ರೂ.190.00 ಲಕ್ಷ ಆರ್ಥಿಕ 2019 ಭೌತಿಕ ಗುರಿ ನಿಗಧಿ ಪಡಿಸಿದ್ದು, ಮಾರ್ಚ್ 2019ರ ಅಂತ್ಯಕ್ಕೆ ರೂ. 182.87 ಲಕ್ಷ ಆರ್ಥಿಕ ಹಾಗೂ 2230 ಭೌತಿಕ ಪ್ರಗತಿ ಸಾಧಿಸಲಾಗಿದೆ.
8	**ಪರಿಶಿಷ್ಟ ಜಾತಿಯವರಿಗಾಗಿ ನಿವಾಸಿ ಶಾಲೆಗಳು**	1 ರಿಂದ 5ನೇ ತರಗತಿ ಪ.ಜಾತಿ/ಪ.ವರ್ಗ ಹಾಗೂ ಇತರೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಮೇ ತಿಂಗಳಲ್ಲಿ ಅರ್ಜಿಗಳನ್ನು ತಾಲ್ಲೂಕು ಮಟ್ಟದ ಸಹಾಯಕ ನಿರ್ದೇಶಕರ ಕಛೇರಿಇಲ್ಲವೇ ಆಯಾ ವಿದ್ಯಾರ್ಥಿ ನಿಲಯಗಳಿಂದ ಪಡೆದು ನಿಗಧಿತ ವೇಳೆಗೆ ಅರ್ಜಿ ಸಲ್ಲಿಸಬೇಕು. ತಾಲ್ಲೂಕು ಮಟ್ಟದ ಆಯ್ಕೆ ಸಮಿತಿಯಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸಲಾಗುತ್ತದೆ. ವಿದ್ಯಾರ್ಥಿಗಳಿಗೆ ಸರ್ಕಾರಿ ನಿಯಮದಂತೆ ಊಟ, ವಸತಿ, ಸಮವಸ್ತ್ರ, ಪಠ್ಯಪುಸ್ತಕ ಇತ್ಯಾದಿ ಸವಲತ್ತುಗಳನ್ನು ಒದಗಿಸಲಾಗುವುದು. 2018–19ನೇ ಸಾಲಿಗೆ ರೂ. 73.21 ಲಕ್ಷ ಆರ್ಥಿಕ 278 ಭೌತಿಕಗುರಿ ನಿಗಧಿಪಡಿಸಿದ್ದು, ಮಾರ್ಚ್ 2019ರ ಅಂತ್ಯಕ್ಕೆ ರೂ.71.08 ಲಕ್ಷ ಆರ್ಥಿಕ ಹಾಗೂ 232 ಭೌತಿಕ ಪ್ರಗತಿ ಸಾಧಿಸಲಾಗಿದೆ. ಅಂತರ್ಜಾತಿ ವಿವಾಹಿತ ದಂಪತಿಗಳಿಗೆ ಪ್ರೋತ್ಸಾಹಧನ ವಿತರಣೆಕಾರ್ಯಕ್ರಮದಡಿಇತರೆ

9	**ಅಸ್ಪೃಶ್ಯತಾ ನಿವಾರಣಾ ಯೋಜನೆಗಳು**	ಸವರ್ಣೀಯ ಜಾತಿಯ ಹೆಣ್ಣು ಪರಿಶಿಷ್ಟ ಜಾತಿಯಗಂಡನ್ನು ವಿವಾಹವಾದಲ್ಲಿ ದಂಪತಿಗಳಿಗೆ ರೂ.2,00,000/– ಗಳನ್ನು, ಪರಿಶಿಷ್ಟ ಜಾತಿಯ ಹೆಣ್ಣು ಇತರೆ ಸವರ್ಣೀಯ ಜಾತಿಯ ಗಂಡನ್ನು ವಿವಾಹವಾದಲ್ಲಿ ರೂ.3,00,000/– ಗಳ ಪ್ರೋತ್ಸಾಹ ಧನವನ್ನು 2 ಕಂತುಗಳಲ್ಲಿ ನೀಡಲಾಗುವುದು. 2018–19ನೇ ಸಾಲಿಗೆ ರೂ. 100.00 ಲಕ್ಷ ಆರ್ಥಿಕ 104 ಭೌತಿ–ಕಗುರಿ ನಿಗಧಿಪಡಿಸಿದ್ದು, ಮಾರ್ಚ್ 2019ರ ಅಂತ್ಯಕ್ಕೆ ರೂ.100 ಲಕ್ಷಆರ್ಥಿಕ ಹಾಗೂ 104 ಭೌತಿಕ ಪ್ರಗತಿ ಸಾಧಿಸಲಾಗಿದೆ. ರಾಜ್ಯ ವಲಯದಲ್ಲಿ ಬಿಡುಗಡೆಯಾದ ಅನುದಾನ 230 ಲಕ್ಷ ಭೌತಿಕ 173.
10	**ಅಂತರ್ಜಾತಿ ವಿವಾಹ ಒಳಪಂಗಡ**	ಮದುವೆಯಾದ ದಂಪತಿಗಳು ಪ.ಜಾತಿಯವರಾಗಿದ್ದು ಬೇರೆ ಒಳಪಂಗಡದವರಾಗಿರಬೇಕು. ರೂ. 200000/– ಪ್ರೋತ್ಸಾಹಧನಆರ್.ಟಿ.ಜಿ.ಎಸ್. ಮೂಲಕ ನೀಡಲಾಗುವುದು. 2019ರ ಮಾರ್ಚ್ಅಂತ್ಯಕ್ಕೆಆರ್ಥಿಕರೂ. 22.00 ಭೌತಿಕ11
11	**ವಿಧವಾ ಮರು ವಿವಾಹ**	ವಿಧವಾ ಮರು ವಿವಾಹಕ್ಕೆ ಹೆಣ್ಣು ಮತ್ತು ಗಂಡು ಪ.ಜಾತಿಯವರಾಗಿರಬೇಕು. ವಿವಾಹವಾದ ದಂಪತಿಗಳಿಗೆ 3 ಲಕ್ಷ ಪ್ರೋತ್ಸಾಹಧನ ಆರ್.ಟಿ.ಜಿ.ಎಸ್. ಮೂಲಕ ಜಂಟಿ ಖಾತೆಗೆ ಒಂದೇ ಕಂತಿನಲ್ಲಿ ಜಮೆ ಮಾಡಲಾಗುವುದು.
12	**ಸರಳ ವಿವಾಹ**	ಮದುವೆಯಾದ ದಂಪತಿಗಳು ಪ.ಜಾತಿಯವರಾಗಿರಬೇಕು. ಸಾಮೂಹಿಕ ವಿವಾಹದಲ್ಲಿ ಮದುವೆ ಆಗಿರಬೇಕು. ದಂಪತಿಗಳಿಗೆ ಆರ್.ಟಿ.ಜಿ.ಎಸ್. ಮೂಲಕ ಜಂಟಿ ಖಾತೆಗೆ– ರೂ. 50000 ಜಮೆ ಮಾಡಲಾಗುವುದು.ಆಯೋಜಕರಿಗೆ ರೂ. 2000 ಖಾತೆಗೆ ಜಮಾ ಮಾಡಲಾಗುವುದು.
13	**ಕಾನೂನು ಪದವೀಧರರಿಗೆ ಸಹಾಯಧನ ಹಾಗೂ ಕಾನೂನು ತರಬೇತಿದಾರರಿಗೆತರಬೇತಿ ಶಿಷ್ಯ ವೇತನ ನೀಡುವ ಬಗ್ಗೆ**	ಪ.ಜಾತಿಯ ಕಾನೂನು ಪದವೀಧರರು ಈ ಮೊದಲುತರಬೇತಿ ಪಡೆಯದಿದ್ದಲ್ಲಿಜಿಲ್ಲಾ ಮಟ್ಟದ (ಜಿಲ್ಲಾ ಪಂಚಾಯತ್ ಮುಖ್ಯಕಾರ್ಯ ನಿರ್ವಾಹಕ ಅಧಿಕಾರಿಗಳು) ಅಧ್ಯಕ್ಷತೆಯ ಸಮಿತಿ ಮೂಲಕ ಅಭ್ಯರ್ಥಿಗಳನ್ನು ತರಬೇತಿಗಾಗಿಆಯ್ಕೆ ಮಾಡಿ ಸರ್ಕಾರಿ ವಕೀಲರ/ನುರಿತ ಹಿರಿಯ ವಕೀಲರ ಬಳಿ ತರಬೇತಿಗೆ ನಿಯೋಜಿಸಲಾಗುತ್ತದೆ. ತರಬೇತಿಅವಧಿಯಲ್ಲಿ ಮಾಸಿಕ ರೂ.5000/– ಗಳ ಶಿಷ್ಯ ವೇತನ ನೀಡಲಾಗುತ್ತದೆ. ಹಾಗೂ ತರಬೇತಿಅವಧಿ 4 ವರ್ಷಗಳಾಗಿರುತ್ತದೆ. ಪ.ಜಾತಿಯ ಕಾನೂನು ಪದವೀಧರರಿಗೆ ವಕೀಲ ವೃತ್ತಿಆರಂಭಿಸಲು ರೂ.5000/– ಗಳ ವೆಚ್ಚದಲ್ಲಿ ಕಾನೂನು ಪುಸ್ತಕಗಳು ಹಾಗೂ ಪೀಠೋಪಕರಣಗಳನ್ನು ಒದಗಿಸಲಾಗುವುದು. 2018–19ನೇ ಸಾಲಿಗೆ ರೂ.7.60 ಲಕ್ಷಆರ್ಥಿಕ13 ಭೌತಿಕಗುರಿ ನಿಗಧಿಪಡಿಸಿದ್ದು, ಮಾರ್ಚ್ 2019ರಅಂತ್ಯಕ್ಕೆರೂ. 7.35ಆರ್ಥಿಕ ಹಾಗೂ 13 ಭೌತಿಕ ಪ್ರಗತಿ ಸಾಧಿಸಲಾಗಿದೆ.
14	**ದೌರ್ಜನ್ಯದಲ್ಲಿ ನೊಂದ ಸಂತ್ರಸ್ಥರಿಗೆ ಪರಿಹಾರಧನ**	ಅನ್ಯಜಾತಿಯವರಿಂದ ಪ.ಜಾತಿ / ಪ.ಪಂಗಡದವರಿಗೆ ದೌರ್ಜನ್ಯವಾದಲ್ಲಿ ಸರ್ಕಾರದ ಆದೇಶದಂತೆ ನಿಗಧಿಪಡಿಸಿರುವ ಪರಿಹಾರ ಮೊತ್ತವನ್ನು ಆರ್.ಟಿ.ಜಿ.ಎಸ್. ಮೂಲಕ ಸಂತ್ರಸ್ಥರ ಖಾತೆಗೆ ಜಮೆ ಮಾಡಲಾಗುವುದು. 2018–19ನೇ ಸಾಲಿನ ಮಾರ್ಚ್ ಅಂತ್ಯದ ವರೆಗೆ 56 ಪ್ರಕರಣಗಳಲ್ಲಿ ನೊಂದ ಸಂತ್ರಸ್ಥರಿಗೆ ಆರ್ಥಿಕ111.75 ಲಕ್ಷ ಭೌತಿಕ 103
15	**ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಇತರೆ ರಿಯಾಯತಿಗಳು**	ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸಾಧನ ಸಲಕರಣೆಗಳ ವಿತರಣೆ, ಪರಿಶಿಷ್ಟ ಜಾತಿ ನಿರುದ್ಯೋಗಿಗಳಿಗೆ ಮೋಟಾರು ವಾಹನ ತರಬೇತಿ ನೀಡಲಾಗುವುದು ಹಾಗೂ ಡಿ.ಎಡ್. ತರಬೇತಿ ಪಡೆಯುವ ಹೆಣ್ಣು ಮಕ್ಕಳಿಗೆ ಸಮವಸ್ತ್ರ ಮತ್ತು ಲೇಖನ ಸಾಮಾಗ್ರಿ ಖರೀದಿಸಲು ಸಹಾಯಧನ ನೀಡಲಾಗವುದು. 2018–19ನೇ ಸಾಲಿಗೆ ರೂ.1.00 ಲಕ್ಷ ಆರ್ಥಿಕ 20 ಭೌತಿ–ಕಗುರಿ ನಿಗಧಿಪಿಡಿಸಿದ್ದು, ಮಾರ್ಚ್–19ರ ಅಂತ್ಯಕ್ಕೆ ರೂ. 1.00 ಲಕ್ಷ ಆರ್ಥಿಕ ಹಾಗೂ 3 ಭೌತಿಕ ಪ್ರಗತಿ ಸಾಧಿಸಲಾಗಿದೆ.

ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು		
16	ಕಟ್ಟಡ ದುರಸ್ಥಿ	ಇಲಾಖೆಯಿಂದ ನಿರ್ವಹಿಸಲಾಗುತ್ತಿರುವ ವಿದ್ಯಾರ್ಥಿ ನಿಲಯಗಳ ಅವಶ್ಯಕ ದುರಸ್ಥಿ ಹಾಗೂ ಸುಣ್ಣಬಣ್ಣ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು. 2018–19ನೇ ಸಾಲಿಗೆ ರೂ.40.00 ಲಕ್ಷ ಆರ್ಥಿಕ 10 ಭೌತಿಕಗುರಿ ನಿಗಧಿಪಡಿಸಿದ್ದು, ಮಾರ್ಚ್ 2019ರ ಅಂತ್ಯಕ್ಕೆ ರೂ.39.97 ಆರ್ಥಿಕ ಹಾಗೂ 17 ಭೌತಿಕ ಪ್ರಗತಿ ಸಾಧಿಸಲಾಗಿದೆ.
ವಿಶೇಷ ಘಟಕಯೋಜನೆ		
17	ಪ.ಜಾತಿಯ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಅಭಿವೃದ್ಧಿ	ಈ ಕಾರ್ಯಕ್ರಮದಲ್ಲಿ ಪ.ಜಾತಿ ಕಾಲೋನಿಗಳಿಗೆ ಮೂಲಭೂತ ಸೌಕರ್ಯಗಳಾದ ರಸ್ತೆ ಮತ್ತು ಸೇತುವೆ, ಕಿರುನೀರು ಸರಬರಾಜು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು. 2018–19ನೇ ಸಾಲಿಗೆ ರೂ.90.00 ಲಕ್ಷ ಆರ್ಥಿಕ 73 ಭೌತಿಕಗುರಿ ನಿಗಧಿಪಡಿಸಿದ್ದು, ಮಾರ್ಚ್ 2019ರ ಅಂತ್ಯಕ್ಕೆ ರೂ.89.85 ಆರ್ಥಿಕ ಹಾಗೂ 95 ಭೌತಿಕ ಪ್ರಗತಿ ಸಾಧಿಸಲಾಗಿದೆ.
18	ಪ.ಜಾತಿ ಕುಟುಂಬಗಳಿಗೆ ಸಹಾಯಧನ	ಈ ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಗಳ (ಕೃಷಿ ಇಲಾಖೆ, ತೋಟಗಾರಿಕಾ ಇಲಾಖೆ, ಪಶು ಸಂಗೋಪನೆ ಇಲಾಖೆ, ಗ್ರಾಮೀಣಕೈಗಾರಿಕೆ, ಮೀನುಗಾರಿಕೆ ಇಲಾಖೆ) ಮುಖಾಂತರ ಪರಿಶಿಷ್ಟ ಜಾತಿಯ ಫಲಾನುಭವಿಗಳಿಗೆ ಸೌಲಭ್ಯಒದಗಿಸಲಾಗುವುದು. 2018–19ನೇ ಸಾಲಿಗೆ ರೂ.25.00 ಲಕ್ಷಆರ್ಥಿಕ 1034 ಭೌತಿಕಗುರಿ ನಿಗಧಿಪಡಿಸಿದ್ದು, ಮಾರ್ಚ್ 2019ರಅಂತ್ಯಕ್ಕೆ ರೂ.24.44ಆರ್ಥಿಕ ಹಾಗೂ 1020 ಭೌತಿಕ ಪ್ರಗತಿ ಸಾಧಿಸಲಾಗಿದೆ.

ಉಪನಿರ್ದೇಶಕರು,
ಸಮಾಜಕಲ್ಯಾಣ ಇಲಾಖೆ,
ಚಿಕ್ಕಮಗಳೂರು ಜಿಲ್ಲೆ.

--: ಸಾರ್ವಜನಿಕ ಶಿಕ್ಷಣ ಇಲಾಖೆ :--

ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಉತ್ತೇಜನಕ್ಕಾಗಿ ಸರ್ವ ಶಿಕ್ಷಣ ಅಭಿಯಾನ, ಅಕ್ಷರದಾಸೋಹ, ವಿದ್ಯಾವಿಕಾಸಯೋಜನೆ, ಪ್ರೌಢಶಾಲಾಕೊಠಡಿ ದುರಸ್ತಿ, ಸಾಮಗ್ರಿ ಸರಬರಾಜು, ಖಾಸಗಿ ಪ್ರೌಢಶಾಲೆಗಳಿಗೆ ಸಹಾಯಾನುದಾನ, ಶುಲ್ಕ ಮರುಪಾವತಿ ಇತ್ಯಾದಿ ಕಾರ್ಯಕ್ರಮಗಳಿಗೆ ಬಿಡುಗಡೆಯಾದ ಅನುದಾನದ ವಿವರ.

ಕ್ರ. ಸಂ	ಕಾರ್ಯಕ್ರಮಗಳು (ಚಾಲ್ತಿವರ್ಷ)	ವಾರ್ಷಿಕಗುರಿ		ಬಿಡುಗಡೆಯಾದ ಮೊತ್ತ (ಓ.ಬಿ.ಸೇರಿ)	ಮಾರ್ಚ್-2019ರ ಅಂತ್ಯದವರೆಗಿನ ಸಂಚಿತ ಪ್ರಗತಿ		ಶೇಕಡಾವಾರು	
		ಆರ್ಥಿಕ	ಭೌತಿಕ		ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ
01	**2018-19**	**44901.26**	**131037**	**44901.26**	**44901.26**	**131037**	**100**	**100**

ಶಾಲೆಗಳ ವಿವರ

ಕ್ರ.ಸಂ	ಶಾಲಾ ವಿಧಗಳ ವಿವರ	ಕಿರಿಯಪ್ರಾಥಮಿಕ ಶಾಲೆಗಳು	ಹಿರಿಯಪ್ರಾಥಮಿಕ ಶಾಲೆಗಳು	ಪ್ರೌಢಶಾಲೆಗಳು
01	ಸರ್ಕಾರಿ	693	668	116
02	ಅನುದಾನಿತ	02	29	111
03	ಅನುದಾನರಹಿತ	47	160	91
	ಒಟ್ಟು	**742**	**857**	**318**

ಮಕ್ಕಳ ದಾಖಲಾತಿ & ಹಾಜರಾತಿ ವಿವರ :--

ಕ್ರ.ಸಂ.	ಮಕ್ಕಳ ವಿವರ	ದಾಖಲಾತಿ	ಹಾಜರಾತಿ
01	1 ರಿಂದ 8ನೇ ತರಗತಿ ಮಕ್ಕಳು	1,15,738	1,15,738
02	9 ಮತ್ತು 10ನೇ ತರಗತಿ ಮಕ್ಕಳು	28,645	28,645
	ಒಟ್ಟು	**1,44,383**	**1,44,383**

ಶಿಕ್ಷಕರುಗಳ ಮಾಹಿತಿ :-

ಕ್ರ.ಸಂ	ಶಿಕ್ಷಕರ ವಿವರ	ಕರ್ತವ್ಯ ನಿರ್ವಹಿಸುತ್ತಿರುವವರು	ಖಾಲಿಹುದ್ದೆಗಳು	ಮಂಜೂರಾದಒಟ್ಟು ಹುದ್ದೆಗಳು
01	ಪ್ರಾಥಮಿಕ ಶಾಲಾ ಶಿಕ್ಷಕರು	4278	586	4864
02	ಪ್ರೌಢಶಾಲಾ ಶಿಕ್ಷಕರು	923	192	1115

ಉಚಿತ ಸಮವಸ್ತ್ರ ಫಲಾನುಭವಿಗಳು :-

ಕ್ರ.ಸಂ	ಮಕ್ಕಳ ವಿವರ	ಗಂಡು	ಹೆಣ್ಣು
01	**ಸರ್ಕಾರಿ ಶಾಲೆಗಳ 1 ರಿಂದ 10ನೇ ತರಗತಿ ಮಕ್ಕಳು**	**33341**	**33021**
	ಒಟ್ಟು	**33341**	**33021**

ಅಕ್ಷರದಾಸೋಹ ಫಲಾನುಭವಿಗಳು :--

ಕ್ರ.ಸಂ.	ಮಕ್ಕಳ ವಿವರ	ಒಟ್ಟು ಮಕ್ಕಳ ಸಂಖ್ಯೆ	ಫಲಾನುಭವಿಗಳ ಸಂಖ್ಯೆ
01	1 ರಿಂದ 10ನೇ ತರಗತಿ	1,44,383	66362
02	9 ಮತ್ತು 10ನೇ ತರಗತಿ	27412	10114

ಉಚಿತ ಬೈಸಿಕಲ್ ಪಡೆಯುವ ಫಲಾನುಭವಿಗಳು :–

ಕ್ರ.ಸಂ	ಮಕ್ಕಳ ವಿವರ	ಗಂಡು ಮಕ್ಕಳ ಸಂಖ್ಯೆ	ಹೆಣ್ಣು ಮಕ್ಕಳ ಸಂಖ್ಯೆ	ಷರಾ
01	ಸರ್ಕಾರಿ ಮತ್ತುಅನುದಾನಿತ ಶಾಲೆಗಳ 8ನೇ ತರಗತಿ ಮಕ್ಕಳು	4929	4779	ರಾಜ್ಯಮಟ್ಟದಲ್ಲಿಟೆಂಡರ್ ಪ್ರಕ್ರಿಯೆ ನಡೆಸಿ ಬೈಸಿಕಲ್ ವಿತರಿಸಲಾಗುತ್ತಿದೆ.

ಉಚಿತ ಪಠ್ಯಪುಸ್ತಕ ಪಡೆಯುವ ಫಲಾನುಭವಿಗಳು :–

ಕ್ರ.ಸಂ	ಮಕ್ಕಳ ವಿವರ	ಫಲಾನುಭವಿ ಮಕ್ಕಳ ಸಂಖ್ಯೆ	ಷರಾ
01	1 ರಿಂದ 10ನೇ ತರಗತಿ ಸರ್ಕಾರಿ ಶಾಲೆಗಳ ಮಕ್ಕಳು	66.362	ರಾಜ್ಯಮಟ್ಟದಲ್ಲಿ ಟೆಂಡರ್ ಪ್ರಕ್ರಿಯೆ ನಡೆಸಿ ಶಾಲಾಹಂತದಲ್ಲಿ ಪುಸ್ತಕ ವಿತರಿಸಲಾಗುತ್ತಿದೆ.
02	1 ರಿಂದ 8ನೇ ತರಗತಿಅನುದಾನಿತ ಶಾಲೆಗಳ ಮಕ್ಕಳು	12446	

ಉಚಿತ ಶಾಲಾಬ್ಯಾಗು & ನೋಟ್ ಪುಸ್ತಕ ಫಲಾನುಭವಿಗಳು :––

ಕ್ರ.ಸಂ.	ವಿವರ	ಒಟ್ಟು ಮಕ್ಕಳ ಸಂಖ್ಯೆ	ಬಳಸಿದ ಅನುದಾನ	ಷರಾ
001	ಶಾಲಾ ಬ್ಯಾಗು (1 ರಿಂದ 5ನೇತರಗತಿ)	36380	––	2017–18ನೇ ಸಾಲಿಗೆ ಅನುದಾನ ಬಿಡುಗಡೆ ಆಗಿರುವುದಿಲ್ಲ.
02	ನೋಟ್ ಪುಸ್ತಕ (1ರಿಂದ 10ನೇ ತರಗತಿ)	66362	––	

ಎಸ್.ಎಸ್.ಎಲ್.ಸಿ.ಪರೀಕ್ಷಾ ಫಲಿತಾಂಶ ವಿವರ (ಮಾರ್ಚ್–2019) :–

ಕ್ರ.ಸಂ.	ವಿವರ	ಗಂಡು	ಹೆಣ್ಣು	ಷರಾ
01	ಪರೀಕ್ಷೆಗೆ ಹಾಜರಾದವರು	5982	6113	
02	ಪರೀಕ್ಷೆಯಲ್ಲಿಉತ್ತೀರ್ಣರಾದವರು	4896	5239	
03	ಶೇಕಡಾವಾರುಉತ್ತೀರ್ಣ	ಶೇ.81.84%	ಶೇ.85.70%	ಶೇ.82.76%

ಸುವರ್ಣ ಆರೋಗ್ಯ ಚೈತನ್ಯ ಕಾರ್ಯಕ್ರಮ :–

ಕ್ರ.ಸಂ	ಮಕ್ಕಳ ವಿವರ	ಒಟ್ಟು ಮಕ್ಕಳ ಸಂಖ್ಯೆ	ಬಳಸಿದ ಅನುದಾನ
01	ಜಿಲ್ಲೆಯಎಲ್ಲಾ ಶಾಲೆಗಳ 1ರಿಂದ 10ನೇ ತರಗತಿಎಲ್ಲಾ ಮಕ್ಕಳು	1,44,383	–––

*** 2016–17ನೇ ಸಾಲಿನಿಂದ ಆರೋಗ್ಯಇಲಾಖೆಯ ವತಿಯಿಂದ ನೇರವಾಗಿ ಆರೋಗ್ಯ ತಪಾಸಣಾ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ.

ಉಪ ನಿರ್ದೇಶಕರು [ಆಡಳಿತ]
ಸಾ.ಶಿ.ಇ. ಚಿಕ್ಕಮಗಳೂರು.

ಜಿಲ್ಲಾ ಪಂಚಾಯಿತಿ,ಅಕ್ಷರ ದಾಸೋಹ ಕಾರ್ಯಕ್ರಮ, ಚಿಕ್ಕಮಗಳೂರು

ಮಧ್ಯಾಹ್ನ ಉಪಹಾರ ಯೋಜನೆಯು ಕರ್ನಾಟಕ ರಾಜ್ಯದಲ್ಲಿ 2001–2002 ನೇ ಸಾಲಿನಿಂದ ಪ್ರಾರಂಭಿಕವಾಗಿ ರಾಜ್ಯದ ಈಶಾನ್ಯ ವಲಯದ ಜಿಲ್ಲೆಗಳಲ್ಲಿ ಪ್ರಾರಂಭಗೊಂಡಿತು.2003–2004 ನೇ ಸಾಲಿನ ಜುಲೈ 1 ರಿಂದ "ಅಕ್ಷರ ದಾಸೋಹ" ಎಂಬ ಹೆಸರಿನಡಿ ನಾಮಾಂಕಿತಗೊಂಡು ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಿಗೆ ವಿಸ್ತರಿಸಿ ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಲಾಯಿತು. 1–10–2004 ರಿಂದ 6 ರಿಂದ 7, ಹಾಗೂ 1–06–2007 ರಿಂದ 8 ರಿಂದ 10 ನೇ ತರಗತಿಯ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ ಮಕ್ಕಳಿಗೆ ಈ ಕಾರ್ಯಕ್ರಮವನ್ನು ವಿಸ್ತರಿಸಲಾಯಿತು.

ಅಕ್ಷರ ದಾಸೋಹ ಕಾರ್ಯಕ್ರಮದ ಮುಖ್ಯ ಧ್ಯೇಯೋದ್ದೇಶಗಳು

* ಶಾಲೆಗಳಲ್ಲಿ ದಾಖಲಾತಿ ಹಾಗೂ ಹಾಜರಾತಿಯನ್ನು ಉತ್ತಮಪಡಿಸುವುದು.
* ಶಾಲೆಯನ್ನು ಮಧ್ಯದಲ್ಲಿ ತೊರೆಯುದನ್ನು ತಪ್ಪಿಸುವುದು.
* ಪೌಷ್ಠಿಕತೆಯನ್ನು ಹೆಚ್ಚಿಸುವುದರ ಮೂಲಕ ಮಕ್ಕಳ ಆರೋಗ್ಯ ವೃದ್ಧಿಸುವುದು.
* ಕಲಿಕೆಯ ಮಟ್ಟವನ್ನು ಉತ್ತಮಪಡಿಸುವುದು.
* ಶಾಲೆಗಳಲ್ಲಿ ಸಹ ಭೋಜನದ ಮೂಲಕ ಸಾಮಾಜಿಕ ಸಾಮರಸ್ಯವನ್ನು ಮಕ್ಕಳಲ್ಲಿ ಬೆಳೆಸುವುದು.

ಈ ಯೋಜನೆಯ ಅನುಷ್ಠಾನಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಆಗಿದ್ದು ಅನುಷ್ಠಾನದ ವಿವಿಧ ಹಂತಗಳಲ್ಲಿ ಶಿಕ್ಷಣ ಇಲಾಖೆ, ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ, ಭಾರತೀಯ ಆಹಾರ ನಿಗಮ, ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ಇಲಾಖೆ ಮತ್ತು ಆರೋಗ್ಯ ಇಲಾಖೆಗಳ ಸಹಕಾರ, ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುವುದು.

2018–19 ನೇ ಸಾಲಿನಲ್ಲಿ ಸರ್ಕಾರದ ಆದೇಶದಂತೆ ಪ್ರಸ್ತುತ ನೀಡುತ್ತಿರುವ ಆಹಾರ ಧಾನ್ಯಗಳ ಪ್ರಮಾಣ.

ಕ್ರ.ಸಂ	ಆಹಾರ ಪದಾರ್ಥ	ತರಗತಿ1–5(ಕೇಂದ್ರ +ರಾಜ್ಯ ಸರ್ಕಾರದ)		ತರಗತಿ 6–8(ಕೇಂದ್ರ+ ರಾಜ್ಯ ಸರ್ಕಾರದ)		ತರಗತಿ 9–10 (ರಾಜ್ಯ ಸರ್ಕಾರದ100%)	
		ಪ್ರಮಾಣ ಗ್ರಾಂ ಗಳಲ್ಲಿ	ಅಡುಗೆ ತಯಾರಿಕಾ ವೆಚ್ಚ	ಪ್ರಮಾಣ ಗ್ರಾಂ ಗಳಲ್ಲಿ	ಅಡುಗೆ ತಯಾರಿಕಾ ವೆಚ್ಚ	ಪ್ರಮಾಣ ಗ್ರಾಂ ಗಳಲ್ಲಿ	ಅಡುಗೆ ತಯಾರಿಕಾ ವೆಚ್ಚ
1	ಅಕ್ಕಿ	100	ಉಚಿತ	150	ಉಚಿತ	150	––
2	ಬೇಳೆ	20	1.71	30	2.53	30	2.53
3	ತರಕಾರಿ	50	1.17	75	1.73	75	1.73
4	ಎಣ್ಣೆ	5	0.36	7.5	0.57	7.5	0.57
5	ಉಪ್ಪು	2	0.02	4	0.04	4	0.04
6	ಸಾಂಬಾರ ಪದಾರ್ಥ	8	0.18	12	0.28	12	0.28
7	ಅಡುಗೆ ಅನಿಲ	–	0.69	–	1.03	–	1.03
8	ಸಿದ್ದಪಡಿಸಿದ ಆಹಾರದ ತೂಕ	450	–	540	–	540	–
	ಒಟ್ಟು		**4.13**	**ಒಟ್ಟು**	**6.18**		**6.18**

2018–19 ನೇ ಸಾಲಿನಲ್ಲಿ ಮಧ್ಯಾಹ್ನ ಉಪಹಾರ ಯೋಜನೆಯ ಫಲಾನುಭವಿಗಳ ಮಾಹಿತಿ.

ಕ್ರ.ಸಂ	ತಾಲ್ಲೂಕಿನ ಹೆಸರು	1 ರಿಂದ 5ನೇ ತರಗತಿ	6 ರಿಂದ 8ನೇ ತರಗತಿ	9 ರಿಂದ 10ನೇ ತರಗತಿ	ಒಟ್ಟು
1	ಚಿಕ್ಕಮಗಳೂರು	9697	6396	5004	21097
2	ಕಡೂರು	7192	4377	3520	15089
3	ಬೀರೂರು	4048	2335	1851	8234
4	ತರೀಕೆರೆ	7924	5246	3831	17001
5	ನರಾಪುರ	2793	2038	1383	6214
6	ಕೊಪ್ಪ	2903	2226	1565	6694
7	ಶೃಂಗೇರಿ	904	816	697	2417
8	ಮೂಡಿಗೆರೆ	4720	2829	1870	9419
	ಒಟ್ಟು	**40181**	**26263**	**19721**	**86165**

2018–19 ನೇ ಸಾಲಿನಲ್ಲಿ ಮಧ್ಯಾಹ್ನ ಉಪಹಾರ ಯೋಜನೆಗೆ ಒಳಪಟ್ಟಿರುವ ಶಾಲೆಗಳ ಮಾಹಿತಿ

ಕ್ರ.ಸಂ	ತಾಲ್ಲೂಕಿನ ಹೆಸರು	ಕಿರಿಯ ಪ್ರಾಥಮಿಕ ಶಾಲೆಗಳು	ಹಿರಿಯ ಪ್ರಾಥಮಿಕ ಪ್ರಾಥಮಿಕ ಶಾಲೆಗಳು	ಪ್ರೌಢ ಶಾಲೆಗಳು	ಒಟ್ಟು
1	ಚಿಕ್ಕಮಗಳೂರು	176	157	50	383
2	ಕಡೂರು	122	117	43	282
3	ಬೀರೂರು	85	61	26	172
4	ತರೀಕೆರೆ	126	136	39	301
5	ನರಾಪುರ	42	47	14	103
6	ಕೊಪ್ಪ	38	68	19	125
7	ಶೃಂಗೇರಿ	15	34	8	57
8	ಮೂಡಿಗೆರೆ	87	79	23	189
	ಒಟ್ಟು	**691**	**699**	**222**	**1612**

ಶಿಕ್ಷಣಾಧಿಕಾರಿ
ಅಕ್ಷರ ದಾಸೋಹ ಕಛೇರಿ
ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು

ರೇಷ್ಮೆ ಇಲಾಖೆ

ಆಡಳಿತ ವರದಿ–2018– 19

ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು :

2.ಇಲಾಖಾ ಕಾರ್ಯ ಚಟುವಟಿಕೆಗಳ ಬಗ್ಗೆ

ಚಿಕ್ಕಮಗಳೂರು ಜಿಲ್ಲಾ ಪಂಚಾಯಿತಿಯ ವ್ಯಾಪ್ತಿಯ ರೇಷ್ಮೆ ಇಲಾಖೆಯ ಅಸ್ತಿತ್ವದಲ್ಲಿ 2 ತಾಂತ್ರಿಕ ಸೇವಾ ಕೇಂದ್ರಗಳು(ಚಿಕ್ಕಮಗಳೂರು,ಕಡೂರು) 1 ವಿಸ್ತರಣಾ ಹಾಗೂ ಚಾಕಿ ಸಾಕಾಣಿಕಾ ಕೇಂದ್ರ(ತರೀಕೆರೆ), 1 ಗಿರಿಜನ ವಿಸ್ತರಣಾ ಕೇಂದ್ರ,(ಮೂಡಿಗೆರೆ) ಹಾಗೂ 2 ಕೃಷಿ ಕ್ಷೇತ್ರಗಳು (ಸೊಲ್ಲಾಪುರ ಮತ್ತು ಲಿಂಗ್ಲಾಪುರ) ರೇಷ್ಮೆ ಕೃಷಿಯ ಅಭಿವೃದ್ಧಿಗಾಗಿ ಕಾರ್ಯ ನಿರ್ವಹಿಸುತ್ತಿವೆ. ಜಿಲ್ಲೆಯಲ್ಲಿ 70.36 ಹೆಕ್ಟೇರ್ ಪ್ರದೇಶದಲ್ಲಿ 54 ಹಳ್ಳಿಗಳಲ್ಲಿ 112 ಜನ ರೇಷ್ಮೆ ವ್ಯವಸಾಯವನ್ನು ಕೈಗೊಂಡಿರುತ್ತಾರೆ.

2018–19 ನೇ ಸಾಲಿನಲ್ಲಿ ಜಿಲ್ಲಾ ವಲಯ ಯೋಜನೆಯ ವಿವಿಧ ಕಾರ್ಯಕ್ರಮಗಳಡಿಯಲ್ಲಿ 7.50 ಲಕ್ಷಗಳ ಗುರಿಗೆ 5.40 ಲಕ್ಷಗಳ ವೆಚ್ಚ ಭರಿಸಿ ಶೇ.72 ರಷ್ಟು ಪ್ರಗತಿಯನ್ನು ಸಾಧಿಸಲಾಗಿದೆ. ಕೇಂದ್ರೀಯ ರೇಷ್ಮೆ ಮಂಡಳಿವತಿಯಿಂದ ಪರಿಚಯಿಸಲಾದ ಸಿ.ಎಸ್.ಆರ್ ತಳಿಗಳೂ ಸೇರಿದಂತೆ ಜಿಲ್ಲಾದ್ಯಂತ 112 ರೇಷ್ಮೆ ಬೆಳೆಗಾರರಲ್ಲಿ 34363 ರೇಷ್ಮೆ ಮೊಟ್ಟೆಗಳನ್ನು ಚಾಕಿ ಮಾಡಿಸಿ ಶೇ.67 ರ ಸರಾಸರಿ ಇಳುವರಿಯಂತೆ ಒಟ್ಟು 20.481 ಮೆ.ಟನ್ ಗೂಡುಗಳನ್ನು ಉತ್ಪಾದಿಸಲಾಗಿರುತ್ತದೆ. ಇತರೆ ಬೆಳೆಗಾರರಿಗೂ ಸಹ ರೇಷ್ಮೆ ಬೆಳೆಯನ್ನು ಬೆಳೆಯಲು ಹಾಗೂ ಇಳುವರಿಯನ್ನು ಹೆಚ್ಚಿಸಲು ತರಬೇತಿ ಕೊಡಿಸುವುದು, ಉಚಿತವಾಗಿ ಸೋಂಕು ನಿವಾರಕಗಳ ಸರಬರಾಜು, ರೇಷ್ಮೆ ಹುಳುಸಾಕಾಣಿಕೆ ಮನೆಗೆ ಸಹಾಯಧನ, ಹನಿ ನೀರಾವರಿ ಘಟಕಕ್ಕೆ ಸಹಾಯಧನ, ಹುಳುಸಾಕಣೆ ಸಲಕರಣೆ ಖರೀದಿಗೆ ಸಹಾಯಧನ, ಬೈವೋಲ್ಟೈನ್ ರೇಷ್ಮೆ ಗೂಡು ಬೆಳೆದು ಬಿತ್ತನೆಗೆ ಯೋಗ್ಯವಾಗಿದ್ದರೂ ಬೇಡಿಕೆಯಿಲ್ಲದೆ ನೂಲು ಬಿಚ್ಚಾಣಿಕೆಗೆ ಮಾರಾಟ ಮಾಡಿದ ರೈತರಿಗೆ ಪ್ರೋತ್ಸಾಹಧನವಾಗಿ ಕೆ.ಜಿ.ಗೆ ರೂ.175/– ರಂತೆ, ಬಿತ್ತನೆಗೆ ವಿಲೇವಾರಿಯಾದ ಗೂಡಿಗೆ ರೂ70/– ರಂತೆ ಪ್ರೋತ್ಸಾಹಧನ ನೀಡಲಾಗುತ್ತಿದೆ. ರೇಷ್ಮೆ ಅಭಿವೃದ್ಧಿ ಯೋಜನೆಯಲ್ಲಿ ರೇಷ್ಮೆ ಹುಳು ಸಾಕಣೆ ಮನೆಗೆ ಸಹಾಯಧನ,ಹುಳು ಸಾಕಣೆ ಸಲಕರಣೆಗೆ ಸಹಾಯಧನ ಹಾಗೂ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಹನಿ ನೀರಾವರಿಗೆ ಸಹಾಯಧನ ನೀಡಲಾಗುತ್ತಿದೆ.

ರೇಷ್ಮೆ ವ್ಯವಸಾಯದ ಬಗ್ಗೆ ಬೆಳೆಗಾರರಲ್ಲಿ ಅರಿವು ಮೂಡಿಸಿ ರೇಷ್ಮೆ ವ್ಯವಸಾಯ ಕೈಗೊಳ್ಳುವಂತೆ ಪ್ರೇರೇಪಿಸುವುದು, ಬೆಳೆಗಾರರಿಗೆ ತಾಂತ್ರಿಕ ಮಾಹಿತಿ ನೀಡುವುದು, ಸಾಲ ಸೌಲಭ್ಯ ಕಲ್ಪಿಸಿಕೊಡುವುದು, ಸರ್ಕಾರದಿಂದ ದೊರೆಯಬಹುದಾದಂತಹ ಸಹಾಯ ಸೌಲಭ್ಯಗಳನ್ನು ಕಲ್ಪಿಸಿಕೊಡುವುದು, ರೇಷ್ಮೆ ಬೆಳೆಗಾರರ ಆರ್ಥಿಕ ಮಟ್ಟ ಸುಧಾರಿಸುವಲ್ಲಿ ಪ್ರಮುಖ ಪಾತ್ರ ವಹಿಸುವುದು, ಇತ್ಯಾದಿ.

ಜಿಲ್ಲೆಯಲ್ಲಿ ಇರುವ ಹುದ್ದೆಗಳ ವಿವರ,

ಕ್ರ.ಸಂ	ಹುದ್ದೆಗಳ ಪದನಾಮ	ವೃಂದ	ಮಂಜೂರಾದ ಹುದ್ದೆ	ಭರ್ತಿಯಾದ ಹುದ್ದೆ	ಖಾಲಿಇರುವ ಹುದ್ದೆ
1	ರೇಷ್ಮೆಉಪನಿರ್ದೇಶಕರು	ಎ	1	0	1
2	ರೇಷ್ಮೆಸಹಾಯಕನಿರ್ದೇಶಕರು	ಬಿ	2	0	2
3	ರೇಷ್ಮೆ ವಿಸ್ತರಣಾಧಿಕಾರಿಗಳು	ಬಿ	1	0	1
4	ರೇಷ್ಮೆ ನಿರೀಕ್ಷಕರು	ಸಿ	9	3	6
5	ರೇಷ್ಮೆ ಪ್ರದರ್ಶಕರು	ಸಿ	9	3	6
6	ರೇಷ್ಮೆ ಪ್ರವರ್ತಕರು	ಸಿ	8	0	8
7	ಪ್ರಥಮ ದರ್ಜೆಸಹಾಯಕರು	ಸಿ	2	1	1
8	ಹಿರಿಯ ಬೆರಳಚ್ಚುಗಾರರು	ಸಿ	1	0	1
9	ವಾಹನ ಚಾಲಕರು	ಸಿ	1	0	1
10	ಜವಾನರು	ಡಿ	3	2	1
11	**ಒಟ್ಟು**		**37**	**9**	**28**

2018–19 ನೇ ಸಾಲಿನಲ್ಲಿ ಹಿಪ್ಪುನೇರಳೆ ನಾಟಿ, ರೇಷ್ಮೆ ಮೊಟ್ಟೆಗಳ ಚಾಕಿ ಹಾಗೂ ರೇಷ್ಮೆ ಗೂಡು ಉತ್ಪಾದನಾ ಕಾರ್ಯಕ್ರಮಗಳ ಪ್ರಗತಿ ವಿವರ

ಕ್ರಮ ಸಂಖ್ಯೆ	ಕಾರ್ಯಕ್ರಮಗಳ ವಿವರ	2018–19	
		ಗುರಿ	ಸಾಧನೆ
1	ಹಿಪ್ಪುನೇರಳೆ ನಾಟಿ (ಹೆಕ್ಟೇರ್)	14.00ಹೆ	28.17 (ಹೆ)
2	ರೇಷ್ಮೆ ಮೊಟ್ಟೆ ಚಾಕಿ (ಲಕ್ಷಗಳಲ್ಲಿ)	0.400	0.343
3	ರೇಷ್ಮೆ ಗೂಡು ಉತ್ಪಾದನೆ (ಮೆ.ಟನ್)	26.00	20.481

ಕಾರ್ಯಕ್ರಮಗಳ ಬಗ್ಗೆ ಮಾಹಿತಿ:

ಅ) ಜಿಲ್ಲಾ ಪಂಚಾಯಿತಿ ಕಾರ್ಯಕ್ರಮಗಳು

ಕ್ರಮ ಸಂಖ್ಯೆ	ಕಾರ್ಯಕ್ರಮಗಳ ವಿವರ	2018–19	
		ಗುರಿ	ಸಾಧನೆ
1	ರೇಷ್ಮೆ ಬೆಳೆಗಾರರಿಗೆ ಸಹಾಯ, ಹಿಪ್ಪುನೇರಳೇ ನರ್ಸರಿ	0.75	0.21
2	ಹಿಪ್ಪುನೇರಳೇ ನಾಟಿ ಮಾಡುವ ರೈತರಿಗೆ ಸಹಾಯಧನ	2.47	2.306
3	ರೇಷ್ಮೆ ವಸ್ತುಪ್ರದರ್ಶನ/ಕಾರ್ಯಗಾರ/ಮೈಸೂರು ದಸರಾ ವಸ್ತು ಪ್ರದರ್ಶನ	1.00	1.00
4	ರೇಷ್ಮೆ ಕೃಷಿ ಅಧ್ಯಯನ ಪ್ರವಾಸ	0.25	0
5	ರೇಷ್ಮೆ ಕೃಷಿ ಕ್ಷೇತ್ರಗಳು	1.03	1.01
	ಒಟ್ಟು	**5.50**	**4.316**

ಆ) ತಾಲ್ಲೂಕು ಪಂಚಾಯಿತಿ ಕಾರ್ಯಕ್ರಮಗಳು :

ಕ್ರಮ ಸಂಖ್ಯೆ	ಕಾರ್ಯಕ್ರಮಗಳ ವಿವರ	2018–19	
		ಗುರಿ	ಸಾಧನೆ
1	**ಉತ್ಪಾದನೆ/ಉತ್ಪಾದಕತೆ ಆದಾರಿತ ಪ್ರೋತ್ಸಾಹಧನ ಕ್ಷೇತ್ರೋತ್ಸವ/ಹಿಪ್ಪುನೇರಳೇ ನಾಟಿ ಮಾಡುವ ರೈತರಿಗೆ ಸಹಾಯಧನ/ರೇಷ್ಮೆ ಕೃಷಿ ವಸ್ತು ಪ್ರದರ್ಶನ.**	**2.000**	**1.090**
	ಎರಡೂ ಕಾರ್ಯಕ್ರಮಗಳ ಒಟ್ಟು	**7.500**	**5.406**

ಭೌತಿಕ ಸಾಧನೆ: ಜಿಲ್ಲಾ ಪಂಚಾಯಿತಿ

ಕ್ರಮ ಸಂಖ್ಯೆ	ಕಾರ್ಯಕ್ರಮಗಳ ವಿವರ	2018–19	
		ಗುರಿ	ಸಾಧನೆ
1	ರೇಷ್ಮೆ ಬೆಳೆಗಾರರಿಗೆ ಸಹಾಯ, ಹಿಪ್ಪುನೇರಳೇ ನರ್ಸರಿ	0.75	0.21
2	ಹಿಪ್ಪುನೇರಳೇ ನಾಟಿ ಮಾಡುವ ರೈತರಿಗೆ ಸಹಾಯಧನ	2.47	2.306
3	ರೇಷ್ಮೆ ವಸ್ತುಪ್ರದರ್ಶನ/ಕಾರ್ಯಗಾರ/ಮೈಸೂರು ದಸರಾ ವಸ್ತು ಪ್ರದರ್ಶನ	1.00	1.00
4	ರೇಷ್ಮೆ ಕೃಷಿ ಅಧ್ಯಯನ ಪ್ರವಾಸ	0.25	0
5	ರೇಷ್ಮೆ ಕೃಷಿ ಕ್ಷೇತ್ರಗಳು	1.03	1.01
	ಒಟ್ಟು	**5.50**	**4.316**

ಭೌತಿಕ ಸಾಧನೆ–ತಾಲ್ಲೂಕು ಪಂಚಾಯಿತಿ ಕಾರ್ಯಕ್ರಮಗಳು

ಕ್ರ.ಸಂ.	ಕಾರ್ಯಕ್ರಮಗಳ ವಿವರ	2018-19	
		ಗುರಿ	ಸಾಧನೆ
1	ಉತ್ಪಾದನೆ/ಉತ್ಪಾದಕತೆ ಆದಾರಿತ ಪ್ರೋತ್ಸಾಹಧನ ಕ್ಷೇತ್ರೋತ್ಸವ/ಹಿಪ್ಪುನೇರಳೇ ನಾಟಿ ಮಾಡುವ ರೈತರಿಗೆ ಸಹಾಯಧನ/ ರೇಷ್ಮೆ ಕೃಷಿ ವಸ್ತು ಪ್ರದರ್ಶನ.	23.0	12.1
	ಎರಡೂ ಕಾರ್ಯಕ್ರಮಗಳ ಒಟ್ಟು	49.0	85.53

ಮಾನವ ಸಂಪನ್ಮೂಲ ನಿರ್ವಹಣೆ ಮತ್ತು ಆಡಳಿತಾತ್ಮಕ ಚಟುವಟಿಕೆಗಳ ಸಾಧನೆ

ಕ್ರ.ಸಂ.	ಗ್ರೂಪ್-ಎ		ಗ್ರೂಪ್-ಬಿ		ಗ್ರೂಪ್-ಸಿ		ಗ್ರೂಪ್-ಡಿ		ಒಟ್ಟು	
	ಪ.ಜಾತಿ.	ಪ.ಪಂ.	ಪ.ಜಾತಿ.	ಪ.ಪಂ.	ಪ.ಜಾತಿ.	ಪ.ಪಂ.	ಪ.ಜಾತಿ.	ಪ.ಪಂ.	ಪ.ಜಾತಿ.	ಪ.ಪಂ.
1	–	–	–	–	1	–	1	–	2	–

ಕ್ರ.ಸಂ.	ಗ್ರೂಪ್-ಎ		ಗ್ರೂಪ್-ಬಿ		ಗ್ರೂಪ್-ಸಿ		ಗ್ರೂಪ್-ಡಿ		ಒಟ್ಟು	
	ಪುರುಷ	ಮಹಿಳೆ	ಪುರುಷ	ಮಹಿಳೆ	ಪುರುಷ	ಮಹಿಳೆ	ಪುರುಷ	ಮಹಿಳೆ	ಪುರುಷ	ಮಹಿಳೆ
1	-	-	-	-	6	1	1	1	7	2

ರೇಷ್ಮೆ ಉಪ ನಿರ್ದೇಶಕರು
ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು

ಅರಣ್ಯ ಇಲಾಖೆ

2018–19ನೇ ಸಾಲಿನಲ್ಲಿ ಕೈಗೊಂಡ ಅರಣ್ಯಾಭಿವೃದ್ಧಿ ಕಾರ್ಯಕ್ರಮಗಳ ವಿವರ

ಸಾಮಾಜಿಕ ಅರಣ್ಯ ವಿಭಾಗದ ಧ್ಯೇಯೋದ್ದೇಶಗಳು :

- ಸಮುದಾಯ ಭೂಮಿ, ಗೋಮಾಳ, ರಸ್ತೆಬದಿ, ಕೆರೆ ಅಂಗಳ ಮುಂತಾದ ಅರಣ್ಯೇತರ ಭೂಮಿಯಲ್ಲಿ ಅರಣ್ಯಾಭಿವೃದ್ಧಿ ಮಾಡುವುದು, ತನ್ಮೂಲಕ ನೈಸರ್ಗಿಕ ಅರಣ್ಯಗಳ ಮೇಲಿನ ಒತ್ತಡವನ್ನು ಕಡಿಮೆ ಮಾಡುವುದು ಮತ್ತು ಸಾರ್ವಜನಿಕರ ಬೇಡಿಕೆಯ ಮೇವು, ಸಣ್ಣ ಮರಮುಟ್ಟುಗಳು, ಕಿರು ಅರಣ್ಯ ಉತ್ಪನ್ನಗಳನ್ನು ಉತ್ಪಾದಿಸುವುದು ಮತ್ತು ಸುಸ್ಥಿರ ಬಳಕೆ.

ಗುರಿ :

- 11ನೇ ಪಂಚವಾರ್ಷಿಕ ಅವಧಿಯಲ್ಲಿ (2007–12) ರಾಷ್ಟ್ರೀಯ ಅರಣ್ಯ ನೀತಿ–1998 ರಂತೆ ಮರಗಳ ಹೊದಿಕೆಯನ್ನು (TREE COVER) ಭೌಗೋಳಿಕ ವಿಸ್ತೀರ್ಣದ ಶೇ.33 ರಷ್ಟನ್ನಾದರೂ ವೃದ್ಧಿಸಲಿಕ್ಕೆ ಅರಣ್ಯೇತರ ಭೂಮಿಯಲ್ಲಿ ಅರಣ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

ಪ್ರಸ್ತುತ ಸ್ಥಿತಿ :

- ಚಿಕ್ಕಮಗಳೂರು ಜಿಲ್ಲೆಯ ಭೌಗೋಳಿಕ ವಿಸ್ತೀರ್ಣವು 7.22 ಲಕ್ಷ ಹೆಕ್ಟೇರ್ ಇದ್ದು, ಅರಣ್ಯ ಇಲಾಖೆಯ ದಾಖಲಾತಿಗಳ ಪ್ರಕಾರ ಶೇ.21.43 (1.54 ಲಕ್ಷ ಹೆಕ್ಟೇರ್) ಅಧಿಸೂಚಿತ ಅರಣ್ಯ ಪ್ರದೇಶಗಳು ಇರುತ್ತವೆ. ಜಿಲ್ಲೆಯಲ್ಲಿ ಸುಮಾರು 70.961 ಹೆಕ್ಟೇರ್ ಸಾಗುವಳಿಗೆ ಲಭ್ಯವಿಲ್ಲದಿರುವ ವ್ಯವಸಾಯೇತರ ಮತ್ತು ಬಂಜರು ಭೂಮಿಯು ಅರಣ್ಯಾಭಿವೃದ್ಧಿಗೆ ಲಭ್ಯವಿರುತ್ತದೆ.

ಕಾರ್ಯತಂತ್ರ (Statergey)

- ಅರಣ್ಯ ಸಂಪನ್ಮೂಲಗಳ ಅಭಿವೃದ್ಧಿ (Forest Resources Development)
- ಸಾಗುವಳಿಗೆ ಲಭ್ಯವಿಲ್ಲದಿರುವ ಭೂ ಪ್ರದೇಶಗಳಿಗೆ ಗಿಡ ನೆಡುವುದು. (Planting in Barren Lands)
- ಕೃಷಿ ಅರಣ್ಯಾಭಿವೃದ್ಧಿ–ಸಮುದಾಯ ಭೂಮಿಯಲ್ಲಿ ಅರಣ್ಯ (Farm Forestry, Institutional Planting and tree based farming)

ಮೇಲ್ಕಂಡ ಉದ್ದೇಶ ಸಾಧನೆಗೆ 1987ನೇ ಇಸವಿಯಲ್ಲಿ ಚಿಕ್ಕಮಗಳೂರು, ಸಾಮಾಜಿಕ ಅರಣ್ಯ ವಿಭಾಗವನ್ನು ಸೃಜಿಸಲಾಯಿತು. ವಿಭಾಗದ ಕೇಂದ್ರಸ್ಥಾನ ಚಿಕ್ಕಮಗಳೂರು ನಗರದಲ್ಲಿದ್ದು, ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ವಿಭಾಗದ ಮುಖ್ಯಸ್ಥರಾಗಿರುತ್ತಾರೆ. ಇವರಿಗೆ ಸಹಕರಿಸಲು ಚಿಕ್ಕಮಗಳೂರು ಮತ್ತು ಕೊಪ್ಪಗಳಲ್ಲಿ ಇಬ್ಬರು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ನಿಯುಕ್ತಿಗೊಂಡಿರುತ್ತಾರೆ. ಮೂಡಿಗೆರೆ ತಾಲ್ಲೂಕನ್ನು ಹೊರತುಪಡಿಸಿ ಉಳಿದ ಎಲ್ಲಾ ತಾಲ್ಲೂಕುಗಳಲ್ಲೂ ವಲಯ ಅರಣ್ಯಾಧಿಕಾರಿಯವರು ನಿಯುಕ್ತಿಗೊಂಡಿರುತ್ತಾರೆ

2018–19ನೇ ಸಾಲಿನಲ್ಲಿ ಅನುಷ್ಠಾನಗೊಳಿಸಿರುವ ಕಾರ್ಯಕ್ರಮಗಳು

1. ರಾಜ್ಯ ವಲಯ ಕಾರ್ಯಕ್ರಮಗಳು

ಸಾಮಾನ್ಯ ಸಿಬ್ಬಂದಿ – 034 – ಹೊರಗುತ್ತಿಗೆ ವೆಚ್ಚಗಳು (ಯೋಜನೇತರ)

ಕ್ರ ಸಂ.	ತಾಲ್ಲೂಕು	ಕಾರ್ಯಕ್ರಮ	ಗುರಿ		ಸಾಧನೆ (31-03-2-015ರ ಅಂತ್ಯಕ್ಕೆ)	
			ಭೌತಿಕ (ಹೆ.ಗಳಲ್ಲಿ)	ಆರ್ಥಿಕ (₹ ಲಕ್ಷಗಳಲ್ಲಿ)	ಭೌತಿಕ (ಹೆ.ಗಳಲ್ಲಿ)	ಆರ್ಥಿಕ (₹ ಲಕ್ಷಗಳಲ್ಲಿ)
1	ಜಿಲ್ಲೆಯ ಎಲ್ಲಾ ತಾಲ್ಲೂಕುಗಳು	ಅರಣ್ಯ ಪ್ರೇರಕರ ಗೌರವ ಧನ ಪಾವತಿ, ತಿಂಗಳಿಗೆ ರೂ.9500 ರಂತೆ	27 ಸಂಖ್ಯೆ	30.780	27 ಸಂಖ್ಯೆ	30.780
		ಒಟ್ಟು :	**27 ಸಂಖ್ಯೆ**	**30.780**	**27 ಸಂಖ್ಯೆ**	**30.780**

ರಸ್ತೆ ಬದಿ ನೆಡು ತೋಪುಗಳು :

- ರಸ್ತೆಬದಿ ನೆಡುತೋಪು ನಿರ್ವಹಣೆ ಹಾಗೂ ಸಸಿಗಳ ನಿರ್ವಹಣೆ ಕಾಮಗಾರಿಗಾಗಿ 2018–19ನೇ ಸಾಲಿಗೆ ರೂ.8.377 ಲಕ್ಷ ನಿಗಧಿಯಾಗಿದೆ.
